DEMAND No. 47.—CAPITAL ACCOUNT OF ELECTRICITY SCHEMES OUTSIDE THE REVENUE ACCOUNT

101. *Capital Outlay on Electricity Schemes*

"That a sum of Rs. 3,00,77,866 be granted to the Government to cover the excess expenditure incurred over the voted grants for the year 1967-68 in respect of 'Capital Outlay on Electricity Schemes'."

DEMAND No. 54—ADVANCES AND LOANS

Q. Loans and Advances by State/Union Territory Governments

"That a sum of Rs. 1,60,92,283 be granted to the Government to cover the excess expenditure incurred over the voted grant for the year 1967-68 in respect of 'Loans and Advances by State/Union Territory Governments'."

Mysore Land Reforms (Amendment) Bill, 1973 as reported by the J.S.C.—Motion to consider (Debate continued)

ಶ್ರೀ ಬಿ. ಇ. ರಾಮಯ್ಯ (ಸಿರುಗುಪ್ಪ).—ಅಧ್ಯಕ್ಷಣೀಯವರೇ ನಮ್ಮ ಮುಂದಿರುವ ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ಏನು ಇದೆ ಅದನ್ನು ಸ್ವಾಗತಿಸುತ್ತಾ ನನ್ನ ಭಾಷಣವನ್ನು ಮುಂದುವರಿಸಲು ಇಚ್ಛಿಸುತ್ತೇನೆ. ಈಗಾಗಲೇ ನಾನು ಹೇಳಿದಂತೆ ಆರು ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್ ಮಾಡಿದ್ದಾರೆ. ಸರ್ಕಾರಕ್ಕೆ ಜಮೀನು ಒಂದು ತರಹ ಇದ್ದದ್ದು ಇನ್ನೊಂದು ತರಹ ಇರುವುದಿಲ್ಲ ಎನ್ನುವುದು ಪ್ರತಿಯೊಬ್ಬರಿಗೂ ಗುರುತು ಇದೆ. ಈ ವಿಷಯದಲ್ಲಿ ಸರ್ಕಾರದವರು ದೀರ್ಘಾಲೋಚನೆ ಮಾಡಿ ರಿಕ್ಲಾಸಿಫಿಕೇಷನ್ ಮಾಡಿದರೆ ಚೆನ್ನಾಗಿರುತ್ತದೆ. ಈಗ ಮಾಡಿರುವ ಕ್ಲಾಸಿಫಿಕೇಷನ್ ಅಷ್ಟು ಸಮಂಜಸವಾಗಿಲ್ಲ. ಸೆಂಟ್ರಲ್ ಲ್ಯಾಂಡ್ ರಿಫಾರಂಸ್ ಕಮಿಟಿಯವರು 10 ಎಕರೆಯಿಂದ 18 ಎಕರೆಯೊಳಗೆ ಸೀಲಿಂಗ್ ಫಿಕ್ಸ್ ಮಾಡಬೇಕೆಂದು ಏನು ತಿಳಿಸಿದ್ದಾರೆ. ಆ ಪ್ರಕಾರ ಜಮೀನಿಗೆ ಅನುಸಾರವಾಗಿ ಸೀಲಿಂಗ್ ಫಿಕ್ಸ್ ಮಾಡಿದರೆ ಚೆನ್ನಾಗಿರುತ್ತದೆ. ಆಗಲೆ ತುಂಗಭದ್ರಾ ಪ್ರಾಜೆಕ್ಟ್ ವಿಷಯದಲ್ಲಿ ಉದಾಹರಣೆ ತೆಗೆದುಕೊಂಡು ತಮಗೆ ಹೇಳಿದೆ. ಅಲ್ಲಿ ಮೂರು ತರಗತಿಯ ನೀರಾವರಿ ಇದೆ. ಎರಡು ಬೆಳೆ ಬೆಳೆಯುತಕ್ಕ 11 ತಿಂಗಳು ಕೊಡತಕ್ಕ 4 ಇತ್ತು, ಆ ನೀರಾವರಿ ಏರಿಯಾ 6 ತಿಂಗಳು ನೀರು ಕೊಡತಕ್ಕದ್ದು ಡ್ರೈ ಕಪ್ ಪಟ್ ಮತ್ತು 4 ತಿಂಗಳು ನೀರು ಕೊಡತಕ್ಕ ಜಮೀನು ಎಂದು 3 ಕ್ಲಾಸಿಫಿಕೇಷನ್ ಮಾಡಿದ್ದಾರೆ. ಟೇಲ್ ಎಂಡಿನವರೆಗೆ ನೀರು ಹೋಗುವ ಪ್ರಸಂಗವೇ ಇಲ್ಲ. ಆದುದರಿಂದ ಎರಡು ಕ್ಲಾಸಿಫಿಕೇಷನ್ ಮಾಡಿರುವುದನ್ನು 4 ಕ್ಲಾಸಿಫಿಕೇಷನ್ ಮಾಡಿದ್ದರೆ ಚೆನ್ನಾಗಿರುತ್ತದೆ. ಆಂಧ್ರ ಪ್ರದೇಶದಲ್ಲಿ 10 ಎಕರೆ ಮತ್ತು 18 ಎಕರೆ ಜಮೀನು ಎಂದು ವಿಂಗಡಣೆ ಮಾಡಿದ್ದಾರೆ. ಆಂಧ್ರದಲ್ಲಿರತಕ್ಕ "ಎ" ಕ್ಲಾಸ್ ಜಮೀನಿಗೂ ನಮ್ಮಲ್ಲಿರತಕ್ಕ "ಬಿ" ಜಮೀನಿಗೂ ಬಹಳ ವ್ಯತ್ಯಾಸವಿದೆ. ಅಲ್ಲಿ ಡೆಲ್ಟ ಪ್ರದೇಶ ಎಂದು ಬಹಳ ಹಿಂದೂ ದೇಶದಲ್ಲಿಯೇ ಫಲವತ್ತಾದ ಜಮೀನು ಇದೆ. ಅದಕ್ಕೆ 10 ಎಕರೆ ನಿಗದಿ ಮಾಡಿ ಬಾಕಿ 12, 16, 18 ಎಕರೆ ನಿಗದಿ ಮಾಡಿದ್ದಾರೆ. ಆ ರೀತಿ ಎ, ಬಿ, ಸಿ, ಡಿ ಎಂದು ಜಮೀನನ್ನು ಮರು ವಿಂಗಡಣೆ ಮಾಡಿದರೆ ಒಳ್ಳೆಯದು. ರೈತರಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು ಎಂದು ಕಂದಾಯ ಸಚಿವರಲ್ಲಿ ಮನವಿಮಾಡಿಕೊಳ್ಳುತ್ತೇನೆ. ಆಮೇಲೆ ಪೇಜ್ 13 ಚಾಪ್ಟರ್ 2 ಸೆಕ್ಷನ್ 5ರಲ್ಲಿ ಆರ್ಮಿಯಲ್ಲಿರತಕ್ಕವರಿಗೆ ಮತ್ತು ನೇವಿಯಲ್ಲಿರತಕ್ಕವರಿಗೆ ಜಮೀನು ರೆಜ್ಯೂಂ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಮೈನರ್ ಮತ್ತು ವಿಡೋಸ್‌ಗೆ ಈ ಕ್ಲಾಜಿನಲ್ಲಿ ಸೇರಿಸಿದರೆ ಅನುಕೂಲವಾಗುತ್ತದೆ. ಇದನ್ನು ಸರಕಾರ ಮನಗಾಣಬೇಕು. ಕೆಲವು ವಿಡೋಸ್ ಅಥವಾ ಮೈನರ್ ಇರುತ್ತಾರೆ. ಅವರಿಗೆ ಮಾಡತಕ್ಕ ಚೈತನ್ಯ ವಿರುವುದಿಲ್ಲ. ಅಂಥ ಪ್ರಸಂಗದಲ್ಲಿ ಲ್ಯಾಂಡ್ ರೆಜ್ಯೂಂ ಮಾಡುವುದಕ್ಕೆ ಆಸ್ಪದ ಇರಬೇಕು. ಈಗ ಸೆಕ್ಷನ್ 14 ತೆಗೆದುಹಾಕಿದ್ದೀರಿ. ಇದರಿಂದ ಸಣ್ಣ ಹಿಡುವಳಿದಾರರು ವಿಡೋ, ಮೈನರ್ಸ್‌ಗೆ ಬಹಳ ಕಷ್ಟವಾಗುತ್ತದೆ. ಅಧಿಕಾರದಲ್ಲಿರತಕ್ಕವರು ಮುಂದೆ ಲ್ಯಾಂಡ್ ಬಿಡಿಸಿಕೊಳ್ಳಬೇಕು. ಜಮೀನು ಮಾಡಬೇಕು ಎಂದು ಹೊರಟರೆ ಅವರಿಗೂ ಕಷ್ಟವಾಗುತ್ತದೆ. ಬಿ.ಎಸ್‌ಸಿ., ಬಿ.ಇ. ಕೆಲವರು ಓದುತ್ತಿರುತ್ತಾರೆ. ಈ ವಿದ್ಯಾವಂತರಿಗೆ ಕೆಲಸ ಸಿಗುವುದು ದುರ್ಲಭವಾಗುತ್ತದೆ. ಸ್ವಂತ ಭೂಮಿಗೆ ಹೋಗಿ ಜಮೀನು ಸ್ವಂತ ಸಾಗುವಳಿ ಮಾಡಲಿ

(ಶ್ರೀ ಬಿ. ಇ. ರಾಮಯ್ಯ)

ತ್ತೇವೆ ಎನ್ನುವಂಥವರಿಗೆ ಸರ್ಕಾರದವರು ಪ್ರೋತ್ಸಾಹ ಕೊಡುವುದು ಅತ್ಯಾವಶ್ಯಕವಿರುತ್ತದೆ. ಅಂಥವರಿಗೆ ರೆಜ್ಯೂಂ ಮಾಡುವುದಕ್ಕೆ ಆಸ್ಪದ ಮಾಡಿಕೊಡಬೇಕು ಸೆಕ್ಷನ್ 14 ಏನು ತೆಗೆದು ಹಾಕಿದ್ದೀರಿ ಅದನ್ನು ಇಡಬೇಕು ಎಂದು ಹೇಳುತ್ತೇನೆ.

ಪೇಜ್ 60. ಕ್ಲಾಸ್ 9 ರಲ್ಲಿ ತಾವು ಹೇಳಿದ್ದೀರಿ." "After the 18th November 1961 and before the 2nd October 1965, or after the 24th January 1971" ಹೀಗೆ ಎರಡು ಭಾಗ ಮಾಡಿದೀರಿ ಅದು ಕನ್‌ಫ್ಯೂಷನ್‌ಗೆ ಆಸ್ಪದವಾಗುತ್ತದೆ. ಅದಕ್ಕೋಸ್ಕರ ಸೆಂಟ್ರಲ್ ಲ್ಯಾಂಡ್ ರಿಫಾರ್ಮ್ಸ್ ಕಮಿಟಿ ಆಫ್ಟರ್ 24 ಜನವರಿ 1971 ಜಾರಿ ಮಾಡಬೇಕು ಅಂತ ಹೇಳಿದ್ದಾರೆ. ಈಗಲೇ ಎಷ್ಟೋ ಜನ ಪರ್ಚೇಸ್ ಮಾಡಿರುತ್ತಾರೆ. ಎಷ್ಟೋ ಜನ ಲ್ಯಾಂಡ್ ಮಾರಿರುತ್ತಾರೆ. ಎಷ್ಟೋ ತರಹ ವಿಭಾಗವಾಗಿರುತ್ತದೆ. ಅಂತಹ ಪ್ರಸಂಗಗಳಲ್ಲಿ ಕಾಂಪ್ಲಿಕೇಷನ್ಸ್ ಉಂಟಾಗಿ. ಆ ರೀತಿಯ ಅನಾನುಕೂಲ ಆಗುವ ರೀತಿ ಯಾವ ಆಕ್ಟ್ ಮಾಡಿದರೂ ಚೆನ್ನಾಗಿರುವುದಿಲ್ಲ. ಅದನ್ನೂ ಕೂಡ ಸರ್ಕಾರದವರು ಯೋಚನೆ ಮಾಡಿ ಜನರಲ್ಲಾಗಿ ಸೆಂಟ್ರಲ್ ಲ್ಯಾಂಡ್ ರಿಫಾರ್ಮ್ಸ್ ಕಮಿಟಿಯವರು ಹೇಳಿದಹಾಗೆ ಆಫ್ಟರ್ 24 ಜನವರಿ 1971 ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟನ್ನು ಜಾರಿಗೆ ಕೊಡಬೇಕು ಎಂದು ಹೇಳುತ್ತೇನೆ. ಸರ್ಕಾರದ ಉದ್ದೇಶ. ಲ್ಯಾಂಡ್ ಜನರಿಗೆ ಹಂಚಬೇಕು ಎನ್ನುವುದು. ಉಳುವವನೇ ಭೂ ಒಡೆಯ ಆಗಬೇಕು ಎಂಬ ನಾಣ್ಣುಡಿ ಇದೆ. ಅದರ ಪ್ರಕಾರ ರೈತರೇ ಮಾಲೀಕರು ಆಗಬೇಕು. ಸರ್ಕಾರ ಅಂತಹವರಿಗೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಕಾಂಪ್ಲಿಕೇಷನ್ ಇಲ್ಲದ ಹಾಗೆ ಮಾಡಬೇಕು. ತಹಶೀಲ್ದಾರರಿಗೆ ಈ ಆಕ್ಟ್ ಪ್ರಕಾರ ಡಿಕ್ಟೇಟರ್‌ಶಿಫ್ ಕೊಟ್ಟಿದ್ದೀರಿ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಲಂಚಗುಳಿತನ ಅಧಿಕಾರ ವರ್ಗದಲ್ಲಿ ಹೆಚ್ಚಾಗಿದೆ. ರೂಲ್ಸ್ ಕಾಂಪ್ಲಿಕೇಟ್ ಮಾಡುವುದರಿಂದ ಅಧಿಕಾರ ವರ್ಗದಲ್ಲಿ ಲಂಚಗುಳಿತನ ಹೆಚ್ಚಾಗುತ್ತದೆ. ಇದರಿಂದ ಸರ್ಕಾರದವರು ಖುದ್ದಾಗಿ ಲಂಚ ತೆಗೆದುಕೊಳ್ಳು ವುದಕ್ಕೆ ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಕಾಂಪ್ಲಿಕೇಷನ್ ಇಲ್ಲದ ಹಾಗೆ ಎಷ್ಟು ಸಾಧ್ಯವೋ ಅಷ್ಟು ಮಾಡಿದರೆ ರೈತವರ್ಗದವರಿಗೆ, ಹಿಂದುಳಿದ ವರ್ಗದವರಿಗೆ ಅವಿದ್ಯಾವಂತರಿಗೆ ಅನುಕೂಲ ವಾಗುತ್ತದೆ. ವಿರೋಧ ಪಕ್ಷದವರು ಹೇಳಿದರು. ಪ್ರತಿದಿನ ಒಂದಲ್ಲ ಒಂದು ಸ್ಟ್ರೈಕ್ ನಮ್ಮ ವಿಧಾನಸೌಧದ ಮುಂದೆ ಇದೇ ಇರುತ್ತದೆ ಎಂದು. ಕೂಲಿಗಾರರಿಗೆ ಆರ್ಗನೈಸೇಷನ್ ಇಲ್ಲ, ಸಂಘಸಂಸ್ಥೆ ಇಲ್ಲ. ಸ್ಟ್ರೈಕ್ ಹೇಗೆ ಮಾಡಬೇಕು ಎನು.ವುದು ಗೊತ್ತಿಲ್ಲ. ಅವರು ಅಷ್ಟು ಅವಿದ್ಯಾವಂತರಿದ್ದಾರೆ. ಮತ್ತು ಅವರು ಹಿಂದುಳಿದವರಿದ್ದಾರೆ. ಇವರಿಗೆ ಕಾನೂನಿನ ಪರಿಚಯ ಇರುವುದಿಲ್ಲ. ಕಾಂಪ್ಲಿಕೇಷನ್ ಇಲ್ಲದಂಥ ಆಕ್ಟ್ ತಂದರೆ ಚೆನ್ನಾಗಿರುತ್ತದೆ ಎಂದು ಸರ್ಕಾರಕ್ಕೆ ಮನವಿಮಾಡಿ ಕೊಳ್ಳುತ್ತೇನೆ.

ಇನ್ನು ದೇವಾಲಯ ಮತ್ತು ವಿದ್ಯಾ ಸಂಸ್ಥೆಗಳಿಗೆ ಜಮೀನು ಇರಬಾರದು ಎಂದು ಹೇಳಿದ್ದೀರಿ. ಇದು ಸ್ವಾಗತ ಮಾಡತಕ್ಕದ್ದು ಇದೆ. ದೇವಾಲಯಗಳಿಗೆ ಸಾವಿರಾರು ಎಕರೆ ಜಮೀನು ಇದ್ದು ವೃಥಾ ಬೀಳು ಬಿಟ್ಟಿದ್ದಾರೆ. ಅದರಲ್ಲಿ ಯಾರಿಗೂ ಇಂಟ್ರೆಸ್ಟ್ ಇಲ್ಲ. ಅದಕ್ಕೋಸ್ಕರ ಸಂಘ ಸಂಸ್ಥೆಗಳ ಮತ್ತು ದೇವಾಲಯಗಳ ಹತ್ತಿರ 30—40 ಸಾವಿರ ಎಕರೆ, ಜಮೀನು ಏನು ಇದೆ, ಅದನ್ನು ಸರ್ಕಾರ ತೆಗೆದುಕೊಂಡು ಬಡವರಿಗೆ ಹಂಚಿದರೆ ನಿಜವಾಗಿಯೂ ಆಹಾರ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಂಥಾದ್ದನ್ನು ಸರ್ಕಾರ ಮುನ್ನುಗ್ಗಿ ಧೈರ್ಯದಿಂದ ಮಾಡಿದ್ದಕ್ಕೆ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಕೆಲವು ವಿಷಯಗಳಲ್ಲಿ ತೊಂದರೆ ಬರಬಹುದು. ಕೆಲವು ವಿದ್ಯಾ ಸಂಸ್ಥೆಗಳು ತಾವೇ ಖುದ್ದು ಸಾಗುವಳಿ ಮಾಡುತ್ತಿದ್ದಾರೆ. ಮತ್ತು ಅಲ್ಲಿಯ ವಿದ್ಯಾರ್ಥಿಗಳು ಸ್ವಂತ ಸಾಗು ಮಾಡುತ್ತಿದ್ದಾರೆ. ಅಂತಹ ಪ್ರಸಂಗದಲ್ಲಿ ಎಕ್ಸೆಂಪ್ಷನ್ ಕೊಡುವುದಕ್ಕೆ ಆಗುತ್ತದೆ. ಅದನ್ನು ತಾವು ಯೋಚನೆ ಮಾಡಬೇಕು. ಸಂಘ ಸಂಸ್ಥೆಗಳಿಗೆ ಸರ್ಕಾರ ಕಾಂಪನ್-ಸೇಷನ್ ಕೊಡಬೇಕು. ಅದಕ್ಕೆ ವರ್ಷಕ್ಕೆ ಎಷ್ಟು ಖರ್ಚು ಬರುತ್ತದೆ ಎನ್ನತಕ್ಕಂಥಾದ್ದನ್ನು ತಿಳಿದು ಕಾಂಪನ್-ಸೇಷನ್ ಕೊಡಬೇಕಾಗುತ್ತದೆ. ಈ ಖರ್ಚನ್ನು ಸರ್ಕಾರ ವಹಿಸಬೇಕಾಗುತ್ತದೆ. ಇದನ್ನು ಕೂಡ ತಾವು ಪರಿಶೀಲಿಸಬೇಕು. ಸಂಘ ಸಂಸ್ಥೆಗಳು ನಡೆಯಬೇಕು. ನಾವು ದೇವರ ಭಕ್ತರು ಇದ್ದೇವೆ. ದೇವಾಲಯಗಳಿಗೆ ಎಷ್ಟು ಹಣಬೇಕೋ ಅಷ್ಟು ಹಣವನ್ನು ಸರ್ಕಾರದಲ್ಲಿಟ್ಟು ಪ್ರತಿವರ್ಷ ಇಷ್ಟು ಎಂದು ಕೊಟ್ಟರೆ ಚೆನ್ನಾಗಿರುತ್ತದೆ. ಯಾರಿಗೂ ಆಕ್ಟಿನಿಂದ ತೊಂದರೆಯಾಗಬಾರದು. ವಿದ್ಯಾ ಸಂಸ್ಥೆಗಳಿಗೂ ತೊಂದರೆಯಾಗಬಾರದು. ದೇವಾ-ಲಯಗಳಿಗೂ ತೊಂದರೆಯಾಗಬಾರದು.

ಆಮೇಲೆ ಮೊಸ್ಕಸ್ ಇದರಲ್ಲಿ ಬಂದಿಲ್ಲ. ಇವರಿಗೆ ಸಾವಿರಾರು ಎಕರೆ ಜಮೀನು ಇದೆ. ಇವನ್ನೂ ಸೇರಿಸಿದರೆ ಚೆನ್ನಾಗಿರುತ್ತದೆ. ಮಠಾಧಿಪತಿಗಳಿಗೆ ಸಾವಿರಾರು ಎಕರ ಜಮೀನು ಇದೆ. ಅಲ್ಲಿ ಎಷ್ಟು ಅವ್ಯವಹಾರ ನಡೆಯುತ್ತಿದೆ ಎನ್ನುವುದು ಪ್ರತಿಯೊಬ್ಬರಿಗೂ ಗೊತ್ತಿದೆ. ಆ ಭೂಮಿಯನ್ನು ತೆಗೆದುಕೊಂಡು ರೈತರಿಗೆ ಹಂಚಿದರೆ, ರೈತರಿಗೆ ಅನುಕೂಲವಾಗುತ್ತದೆ; ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತಿದ್ದೇನೆ.

ಇನ್ನು ಸೆಕ್ಷನ್ 48ನಲ್ಲಿ ಕಾನ್‌ಸ್ಟಿಟ್ಯೂಷನ್ ಆಫ್ ಟ್ರಿಬ್ಯುನಲ್ಸ್ ಬಗ್ಗೆ ಹೇಳಿದ್ದಾರೆ. ಇದು ಅತ್ಯಂತ ಮುಖ್ಯವಾಗಿರುತ್ತದೆ. ಪ್ರತಿಯೊಂದು ತಾಲ್ಲೂಕು ಅಸಿಸ್ಟೆಂಟ್ ಕಮೀಷನರನ್ನು ಛೇರ್ಮನ್ ಮಾಡಿ ನಾನ್-ಅಫಿಶಿಯಲ್ ಮೆಂಬರ್ಸನ್ನು ಅದರಲ್ಲಿ ಮಾಡಿದ್ದೀರಿ. ಇದರಿಂದ ಸ್ವಲ್ಪಮಟ್ಟಿಗೆ ನ್ಯಾಯ ದೊರಕೀತು ಎಂದು ಆಶಿಸಬೇಕಾಗುತ್ತದೆ. ಪ್ರತಿಯೊಂದು ಕಡೆ ತಹಶೀಲ್ದಾರ್ ಎಂದು ಹೇಳಿದ್ದೀರಿ. ಇದರಿಂದ ತಹಶೀಲ್ದಾರ್ Dictaors in the Taluk—ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅಷ್ಟು ಪವರ್ಸನ್ನು ತಹಶೀಲ್ದಾರರಿಗೆ ಕೊಡತಕ್ಕದ್ದು ಉಚಿತವೇ, ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ; ಯೋಚನೆಮಾಡಿ ತಾವು ಎಷ್ಟು ಸಾಧ್ಯವೋ, ಅಷ್ಟು ಕಡಿಮೆ ಪವರ್ಸನ್ನು ಕೊಡಿ. ನಾನ್-ಅಫಿಶಿಯಲ್ ಅಡ್ವೈಸರಿ ಕಮಿಟಿ ಇದ್ದರೆ ಚೆನ್ನಾಗಿರುತ್ತದೆ. ಆದುದರಿಂದ ಈ ಅಡ್ವೈಸರಿ ಕಮಿಟಿ ಇದ್ದರೆ ಸ್ವಲ್ಪ ನ್ಯಾಯ ದೊರಕೀತು. ತಾವು ಕೂಡ ಹೇಳಿದ್ದೀರಿ, ವಕೀಲರಿಗೆ ಆಸ್ಪದ ಇರಬಾರದು ಎಂದು. ಇದು ಕೂಡ ಸ್ವಾಗತಾರ್ಹ. ವಕೀಲರು ಬಂದರೆ ಅಲ್ಲಿ ಕಾಂಪ್ಲಿಕೇಷನ್ ಆಗುತ್ತದೆ. ವಕೀಲರು ಸುಮ್ಮನೆ ಇರುವುದಿಲ್ಲ. ರೈತನಿಗೆ ಎಷ್ಟು ತೊಂದರೆ ಯಾಗಬೇಕೋ ಅಷ್ಟು ತೊಂದರೆ ಆಗಲಿಕ್ಕೆ ಆಸ್ಪದವಾಗುತ್ತದೆ. ಜಾಣ್ಮೆಯಿಂದ ವಕೀಲರನ್ನು ಇಲ್ಲದ ಹಾಗೆ ಮಾಡಿರುವುದನ್ನು ನಿಜವಾಗಿಯೂ ಸ್ವಾಗತ ಮಾಡಬೇಕು.

ಆಮೇಲೆ ಟ್ರಿಬ್ಯುನಲ್ ಮೇಲೆ ಅಪೀಲು ಇಲ್ಲ ಎಂದು ತಾವು ಹೇಳಿದಿರಿ. ಅಪೀಲು ಇದ್ದರೆ ಚೆನ್ನಾಗಿರುತ್ತದೆ. ಟ್ರಿಬ್ಯುನಲ್ಸ್ ತಪ್ಪು ಮಾಡಬಹುದು. ಟ್ರಿಬ್ಯುನಲ್ ಮೇಲೆ ಕೋರ್ಟಿಗೆ ಅಪೀಲು ಇರತಕ್ಕದ್ದು ಉಚಿತ ಅನ್ನಿಸುತ್ತದೆ. ಇದನ್ನು ತಾವು ನೋಡಬೇಕು.

ಆಮೇಲೆ ಭೂ ಒಡೆಯನಿಗೆ 15ರಷ್ಟು ಕಾಂಪನ್‌ಸೇಷನ್ ಕೊಡಬೇಕು ಎಂದು ಹೇಳಿದ್ದೀರಿ. 5,000 ರೂಪಾಯಿ ಮೇಲೆ ಇದ್ದರೆ ಇಷ್ಟು ಕೊಡಬೇಕು. 2 ಲಕ್ಷ ರೂಪಾಯಿಗಳ ಮೇಲೆ ಕೊಡಲೇಬಾರದು ಎಂದು ಹೇಳಿದ್ದೀರಿ. ಇದು ಸ್ವಾಗತ ಮಾಡತಕ್ಕದ್ದಿದೆ. ಆದರೆ 15ರಷ್ಟು ಏನು ಇದೆ ಅದರಷ್ಟು ಕೊಟ್ಟರೆ ಭೂ-ಒಡೆಯನಿಗೆ ಸಾಕಾಗುತ್ತದೆಯೇ ? ಅವನು ಕಷ್ಟಪಟ್ಟು ಭೂಮಿ ಸಂಪಾದಿಸಿರುತ್ತಾನೆ ಎನ್ನುವುದನು ಮರೆಯ ಬಾರದು. ಉಪವಾಸಮಾಡಿ ಭೂಮಿ ಸಂಪಾದಿಸಿರುತ್ತಾನೆ. 20ರಷ್ಟು ಪರಿಹಾರ ಕೊಟ್ಟರೆ. ಅದರಿಂದ ಅವನು ಬೇರೆ ವಿಧವಾದ ಕೈಗಾರಿಕೆ ಅಥವಾ ಉದ್ಯಮವಾಗಲಿ ಮಾಡುವುದಕ್ಕೆ ಆಸ್ಪದವಾಗುತ್ತದೆ. ಇದರಲ್ಲಿ ಕೂಡ ಸರ್ಕಾರ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಇನ್ನೊಂದು ಸ್ಲೋಗನ್. ಉಳುವವನಿಗೇ ಭೂಮಿ ಇರಬೇಕು ಎನ್ನುವ ಸ್ಲೋಗನ್ನನು. ಎಲ್ಲರೂ ಒಪ್ಪಬೇಕು.

> "Dweller of the house is the owner of the house, driver of the car is the owner of the car, rider of the horse is the owner of the horse, labourers of industries are the owners of industries."

ಇದೇ ರೀತಿ ಎಲ್ಲಾ ಸೆಕ್ಟಾರಿಗೂ ಅನ್ವಯಿಸಿದರೆ ಬಹಳ ಚೆನ್ನಾಗಿರುತ್ತದೆ. ವ್ಯವಸಾಯ ಭೂ ಒಡೆಯನಿಗೆ ಅನ್ವಯಿಸಿದರೆ ಪ್ರಯೋಜನವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಕೋಟಿಗಟ್ಟಲೆ ಬಂಡವಾಳ ಗಾರರು ಇದ್ದಾರೆ. ಇವರನ್ನು ಒತ್ತಟ್ಟಿಗೆ ಬಿಡುತ್ತೇನೆ. ಸಿನಿಮಾ ಥಿಯೇಟರ್ ಓನರ್ ಇದ್ದಾರೆ. 50 ಲಕ್ಷ, ಒಂದು ಕೋಟಿ ರೂಪಾಯಿ ಖರ್ಚುಮಾಡಿ ಥಿಯೇಟರ್ಸ್ ಕಟ್ಟಿಸಿದ್ದಾರೆ. ಪ್ರತಿದಿನ ಅವರಿಗೆ 3,000 ರೂಪಾಯಿ ನೆಟ್ ಇನ್-ಕಂ ಬರುತ್ತದೆ. ಈ ಕಾನೂನು ಈ ಸೆಕ್ಟಾರಿಗೂ ಅನ್ವಯಿಸಿದರೆ ಬಹಳ ಚೆನ್ನಾಗಿರುತ್ತದೆ. ಕೇವಲ ಒಂದು ಸೆಕ್ಟಾರಿಗೆ ಅನ್ವಯ ಮಾಡಿದರೆ ಸರಿಹೋಗುವುದಿಲ್ಲ. ವ್ಯವಸಾಯಗಾರರು ಹಳ್ಳಿಯಲ್ಲಿ ವಾಸಮಾಡುತ್ತಾರೆ. ಅವರಿಗೆ ಏನೂ ಅರಿವು ಇರುವುದಿಲ್ಲ. ವ್ಯವಸಾಯಗಾರರು ಅವಿದ್ಯಾವಂತರಿದ್ದಾರೆ. ಅದಕ್ಕೋಸ್ಕರ ನೀವು ಸಿಟಿಗಳಲ್ಲಿ ಏನು ಇಂಡಸ್ಟ್ರೀಸ್ ಇವೆ ಅವುಗಳನ್ನು ನ್ಯಾಷನಲೈಸೇಷನ್ ಮಾಡಿ ಅಂತಹವರಿಗೆ ಕೊಡುವುದಕ್ಕೆ ಏತಕ್ಕೆ ಹಿಂದುಮುಂದು ನೋಡುತ್ತೀರಿ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ. ಸಿನಿಮಾಗಳನ್ನು ಏತಕ್ಕೆ ನ್ಯಾಷನಲೈಸ್ ಮಾಡಬಾರದು ? ಒಂದೇ ಆರ್ಡರ್‌ನಲ್ಲಿ ಅದನ್ನು ನ್ಯಾಷನಲೈಸ್ ಮಾಡಬಹುದು. ಈ ರೀತಿ ಆರ್ಡಿನೆನ್ಸ್ ಮಾಡಿ ಅಂತಹ ಇಂಡಸ್ಟ್ರೀಸ್ ತೆಗೆದುಕೊಂಡು ಎಲ್ಲ ನ್ಯಾಷನಲೈಸ್ ಮಾಡಿದರೆ ಯಾರಿಗೂ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಇಟ್ಟಂತಾಗುವುದಿಲ್ಲ. ಎಲ್ಲರಿಗೂ ನ್ಯಾಯ ಸಿಗಬೇಕು ಎಂದು ಎಲ್ಲ ನ್ಯಾಷನಲೈಸ್ ಮಾಡಿ ಎಲ್ಲ ಸರ್ಕಾರ ವಶಕ್ಕೆ ತೆಗೆದುಕೊಂಡು ಯಾರಿಗೂ ಲೀಸ್ ಕೊಡಬೇಕು ಎಂದು ಕಾಯಿದೆ ಮಾಡಿದರೆ ಚೆನ್ನಾಗಿರುತ್ತದೆ.

ಈ ವಿಷಯದಲ್ಲಿ ತಾವು ಯೋಚನೆ ಮಾಡಿದರೆ ಚೆನ್ನಾಗಿರುತ್ತದೆ. ಹಳ್ಳಿಯಲ್ಲಿರತಕ್ಕಂಥ ಈ ಮೂಕ ಪ್ರಾಣಿಗಳಿಗೆ ಸ್ಟ್ರೈಕ್ ಅಂದರೆ ಗೊತ್ತೇ ಇಲ್ಲ. ಏತಕ್ಕೆಂದರೆ ಅವರು ಅವಿದ್ಯಾವಂತರು. ಅವರ ಕೂಗು

(ಶ್ರೀ ಬಿ. ಇ. ರಾಮಯ್ಯ)

ವಿಧಾನಸೌಧಕ್ಕೆ ಮುಟ್ಟುವುದಕ್ಕೆ ಅವಕಾಶ ಇಲ್ಲ. ನಾವು ಪ್ರತಿ ದಿನವೂ ನೋಡುತ್ತಾ ಇದ್ದೇವೆ. ಒಂದು ಇಂಡಸ್ಟ್ರೀಸ್‌ನಲ್ಲಿ 100 ಜನ ಇದ್ದರೂ ಒಂದು ಸ್ಟ್ರೈಕ್ ಮಾಡಿ ವಿಧಾನಸೌಧದ ಮುಂದೆ ಬರುತ್ತಿದ್ದಾರೆ. ಅದಕ್ಕೆ ವಿರೋಧ ಪಕ್ಷದವರೂ ಕೂಡ ಸಪ್ಪೋರ್ಟ್ ಮಾಡುತ್ತಾರೆ. ಈವೊತ್ತಿನ ದಿವಸ ವ್ಯವಸಾಯಗಾರ ಕೂಲಿಗಾರನಿಗೆ 2 ರೂಪಾಯಿ ಸಹ ಸಿಕ್ಕುವುದಿಲ್ಲ. ಅಂಥಾ ಲೇಬರರ್ಸ್‌ಗೆ ಇಷ್ಟೇ ಕೂಲಿ ಮಾಡಬೇಕು ಎಂದು ಏತಕ್ಕೆ ಇವರು ಸಪ್ಪೋರ್ಟ್ ಮಾಡುವುದಿಲ್ಲ ? ಇಂಡಸ್ಟ್ರೀಸ್‌ನಲ್ಲಿರುವ ಕೆಲಸಗಾರರಿಗೆ ಪ್ರೋತ್ಸಾಹ ಕೊಡಲಿ. ತಪ್ಪಲ್ಲ ಆದರೆ ಅದೇ ರೀತಿ ಉತ್ಸಾಹ ಹಳ್ಳಿಯಲ್ಲಿ ವಾಸ ಮಾಡತಕ್ಕಂಥ ರೈತರಿಗೆ ತೋರಿಸುತ್ತಾ ಇಲ್ಲ. ಇವರಿಗೆ ಯಾವ ರೀತಿ ಪ್ರೋತ್ಸಾಹ ಕೊಡುತ್ತಿದ್ದೀರೋ ಅದೇ ರೀತಿ ಅವರು ಹಳ್ಳಿಯಲ್ಲಿ ವಾಸ ಮಾಡಿ ಹಳ್ಳಿಯ ಜನರ ಕಷ್ಟ ಪರಿಸ್ಥಿತಿಯನ್ನು ಅರಿತುಕೊಂಡು ಅವರಿಗೆ ಇಷ್ಟೇ ಕೂಲಿ ಕೊಡಬೇಕೆಂದು ಯಾವ ಲೀಡರ್ಸ್ ಹೋಗಿದ್ದಾರೆ ಎಂದು ಕೇಳುತ್ತೇನೆ. 100ಕ್ಕೆ 75ರಷ್ಟು ಜನ ಕೂಲಿಗಾರರು ಏನು ಇದ್ದಾರೋ. ನಮಗೂ ನಿಮಗೂ ಆಹಾರವನ್ನು ಒದಗಿಸತಕ್ಕಂಥವರು ಯಾರು ಇದ್ದಾರೋ ಅಂಥಾವರ ವಿಷಯದಲ್ಲಿ ಅವರ ಸುಖಗಳ ಬಗ್ಗೆ ಏನಾದರೂ ಗಮನ ಕೊಟ್ಟಿದ್ದಾರೆಯೋ ? ವ್ಯವಸಾಯಗಾರರು ಮತ್ತು ಕೂಲಿಗಾರರು ಈ ವಿಷಯದಲ್ಲಿ ಸತಂತ್ರೆ ಆಗಿದೆ. ಏತಕ್ಕೆಂದರೆ ಅವರಲ್ಲಿ ಯೂನಿಟಿ ಕಡಿಮೆ ಮತ್ತು ಅವರು ಅವಿದ್ಯಾವಂತರಾಗಿದ್ದಾರೆ.ಕ ಆದುದರಿಂದ ಅವರ ಕೂಗು ಸಮಾಜಕ್ಕೆ ಮುಟ್ಟಿಲ್ಲ. ಈ ಸಮತಾವಾದದ ಸಮಾಜದಲ್ಲಿ ಸಾಹುಕಾರರಿಗೂ ಮತ್ತು ಬಡವರಿಗೂ ಅಂತರ ಇರಬಾರದು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ನಾನು ಹೇಳುವುದು ಏನೆಂದರೆ ಈ ರೀತಿ ಒಂದೇ ಸೆಕ್ಟಾರ್‌ನಲ್ಲಿ ಆಗಬಾರದು ಎಂದು. ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರಾಗಲಿ ಅಥವ ಶ್ರೀಮಾನ್ ದೇವೇಗೌಡರಾಗಲಿ ಇದೇ ರೀತಿ ಸಿನಿಮಾ ಥಿಯೇಟರನ್ನಾಗಲಿ ಮತ್ತು ಇಂಡಸ್ಟ್ರೀಸ್‌ನನ್ನಾಗಲಿ ನ್ಯಾಷನಲೈಸ್ ಮಾಡಬೇಕು ಎಂದು ಹೇಳಿದ್ದಾರೆಯೋ ? ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ಈ ವ್ಯವಸಾಯಗಾರರು ಮೂಕಪ್ರಾಣಿಗಳು ಏನು ಇದ್ದಾರೋ ಅವರ ಮೇಲೆ ಗದಾಪ್ರಹಾರ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತು ವಿರೋಧಪಕ್ಷದವರು ಸಮತಾವಾದ ಸಮಾಜವಾದ ಬಗ್ಗೆ ಹೇಳುತ್ತಿದ್ದಾರೆ. ಅವರು ಈವೊತ್ತಿನ ದಿವಸ 100ಕ್ಕೆ 75ರಷ್ಟು ಇರುವ ಗ್ರಾಮಾಂತರ ಪ್ರದೇಶದಲ್ಲಿ ವಾಸ ಮಾಡಿ ಉಪಕಾರಮಾಡುತ್ತಿದ್ದಾರೆಯೋ ಎಂದು ನಾನು ಕೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳುತ್ತಾ ಇರುವುದನ್ನು ನೋಡಿದರೆ ಈ ಭೂಸುಧಾರಣೆ ಕ್ರಮ ಸರಿಯಾಗಿಲ್ಲ, ಇದರೊಂದಿಗೆ ಇನ್ನೂ ಉಳಿದವು ಏನು ಇವೆ ಅಂದರೆ ಸಿನಿಮಾ ನ್ಯಾಷನಲೈಸ್ ಮಾಡಿ, ಕಾರ್ ಡ್ರೈವ್ ಮಾಡುವವನಿಗೆ ಕಾರು ಕೊಡುವ ವ್ಯವಸ್ಥೆ ಮಾಡಿ, ಮನೆ ಬಾಡಿಗೆಯಲ್ಲಿರುವವನಿಗೆ ಮನೆ ಕೊಡುವ ವ್ಯವಸ್ಥೆ ಮಾಡಿ ಎನ್ನುವ ಭಾವನೆಯಿಂದ ಹೇಳುವುದಾದರೆ ಸ್ಪಷ್ಟವಾಗಿ ಹೇಳಬೇಕು. ವಿರೋಧ ಪಕ್ಷದವರ ಹೆಸರನ್ನೇ ಆಗಿಂದಾಗ್ಗೆ ತರುವ ಬದಲು ಈ ಭೂಸುಧಾರಣೆಯಲ್ಲಿ ಅವರ ಅಭಿಪ್ರಾಯ ವಿರೋಧವೇ ಏನು ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ಏತಕ್ಕೆಂದರೆ ನಾನು ಈ ವಿಷಯದಲ್ಲಿ ಉತ್ತರ ಹೇಳಬೇಕಾದರೆ ಅವರ ಅಭಿಪ್ರಾಯ ಸ್ಪಷ್ಟವಾಗಿ ಇರಬೇಕು ಎಂದು ನಾನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಇ. ರಾಮಯ್ಯ.—ನನಗೆ ಭೂಸುಧಾರಣೆ ವಿಷಯದಲ್ಲಿ ವಿರೋದ ಇಲ್ಲ. ಇದನ್ನು ಹೋಲ್ ಹಾರ್ಟೆಡ್ ಸ್ವಾಗತಿಸುತ್ತೇನೆ. ಇದರಲ್ಲಿ ಒಂದು ವಿಷಯ ಏನೆಂದರೆ ಮುಂದಾದರೂ ಕೂಡ ಎಲ್ಲಾ ಸೆಕ್ಟಾರ್‌ಗಳನ್ನೂ ನ್ಯಾಷನಲೈಸ್ ಮಾಡಿ ನ್ಯಾಯ ಒದಗಿಸಿ ಕೊಡಬೇಕು. ಬರೀ ಈ ಒಂದು ವ್ಯವಸಾಯದ ಸೆಕ್ಟಾರ್ ಒಂದನ್ನೇ ಕೈ ಹಾಕುವುದಕ್ಕೆ ಹೋಗಬಾರದು. ಇದನ್ನು ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಾದರೆ ಮೊದಲು ಇವುಗಳನ್ನೆಲ್ಲಾ ನ್ಯಾಷನಲೈಸ್ ಮಾಡಿ ಆನಂತರ ಈ ಭೂಸುಧಾರಣೆಯನ್ನು ತರಬೇಕು ಎನ್ನುವ ಅಭಿಪ್ರಾಯವೇ ಅಥವಾ ಮೊದಲು ಭೂಸುಧಾರಣೆಯನ್ನು ತಂದು ಆಮೇಲೆ ಬಾಕಿಯನ್ನು ತರಬೇಕು ಎನ್ನುವ ಅಭಿಪ್ರಾಯವೇ ಏನು ಎನ್ನುವುದನು. ಮಾನ್ಯ ಸದಸ್ಯರು ತಿಳಿಸಬೇಕು.

ಶ್ರೀ ಬಿ. ಇ. ರಾಮಯ್ಯ.—ಇದರಲ್ಲಿ ಮೊದಲು. ಆಮೇಲೆ ಯಾವ್ಯಾವುದು ಅನ್ನುವ ಪ್ರಶ್ನೆ ಅಲ್ಲ. ಒಟ್ಟಿಗೆ ಸೈಮುಲ್ಟೇನಿಯಸ್ ಆಗಿ ತಂದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಆದರೆ ಇದನ್ನು ವಿರೋಧಿಸಬೇಕು ಅಂತ ನನ್ನ ಅಭಿಪ್ರಾಯವಿಲ್ಲ.

ಇದರಲ್ಲಿ ಇನ್ನೊಂದು ವಿಷಯ ಏನೆಂದರೆ ತಜ್ಞರೇ ಹೇಳಿದ್ದಾರೆ. ಇವನ್ನು ಕ್ಲಾಸಿಫಿಕೇಷನ್ ಮಾಡುವಾಗ ಆಂಧ್ರದಲ್ಲಿ ಯಾವ ರೀತಿ ಇದೆ ಆ ರೀತಿ ಮಾಡಬೇಕು ಎಂದು ನನ್ನ ಅಭಿಪ್ರಾಯ. ಏತಕ್ಕೆಂದರೆ ತುಂಗಭದ್ರಾ ಪ್ರಾಜೆಕ್ಟ್‌ನಲ್ಲಿ 3 ತರಹ ಜಮೀನು ಇದೆ. ಈ ವಿಚಾರದಲ್ಲಿ ಮೊನ್ನೆ ಯೂ ಕೂಡ ಹೇಳಿದ್ದೇನೆ. ಈವಾಗ ಅಲ್ಲಿ ಟೇಲ್ ಎಂಡ್ ಜಮೀನು ಇದೆ. ಇದನ್ನು ತಮ್ಮ ಖಾತೆಯಲ್ಲಿ ಇದು ನೀರಾವರಿ ಪ್ರದೇಶ ಎರಡು ಬೆಳೆ ಬರುತ್ತದೆ ಎಂದು ಮಾಡಿದ್ದೀರಿ. ಇದರಲ್ಲಿ ಒಂದು ಬೆಳೆ ಬೆಳೆಯುವುದಕ್ಕೂ ಸಾಧ್ಯವಿಲ್ಲ. ಇನ್ನು ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಲೆಫ್ಟ್ ಬ್ಯಾಂಕ್ ಛಾನಲ್ ಇದೆ. ಸುಮಾರು 5 ಲಕ್ಷ ಎಕರೆ ನೀರಾವರಿಯಾಗುತ್ತದೆ ಎಂದು ನಿಮ್ಮ ಲೆಕ್ಕದಲ್ಲಿ ತೋರಿಸಿದ್ದೀರಿ. ಅದರಲ್ಲಿ $2\frac{1}{2}$ ಲಕ್ಷ ಎಕರೆ ಡೆವಲಪ್ ಆಗಿದೆ, ಇನ್ನೂ $2\frac{1}{2}$ ಲಕ್ಷ ಎಕರೆ ಡೆವಲಪ್ ಆಗಿಲ್ಲ. ಇದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಇನ್ನು ತುಂಗಭದ್ರಾ ಪ್ರಾಜೆಕ್ಟ್ ರೈಟ್ ಬ್ಯಾಂಕ್ ಕೆನಾಲ್‌ನಲ್ಲಿ ಡ್ರೈ ಕಂ ವೆಟ್ ಜಮೀನು ಇದೆ. ನಿಮ್ಮ ಲೆಕ್ಕಾಚಾರದ ಪ್ರಕಾರ ಒನ್ ಕ್ಯೂಸೆಕ್ ಆಫ್ ವಾಟರ್ 160 ಎಕರೆ ಬರುತ್ತದೆ ಎಂದು ಹೇಳುತ್ತೀರಿ. ಈ ಬಗ್ಗೆ ವ್ಯವಸಾಯ ತಜ್ಞರೂ ಹೇಳಿದ್ದಾರೆ. ಮತ್ತು ರೀಸರ್ಚ್ ಸ್ಟೇಷನ್‌ನಲ್ಲೂ ಒನ್ ಕ್ಯೂಸೆಕ್ ಆಫ್ ವಾಟರ್ 95 ಎಕರೆಗೆ ಬರುತ್ತದೆ ಎಂದು ಹೇಳಿದ್ದಾರೆ. ಇದಕ್ಕೆ ತಮ್ಮ ಅಭಿಪ್ರಾಯ ಏನು ? ಇದನ್ನು ಯಾವ ರೀತಿ ಕ್ಲಾಸಿಫಿಕೇಷನ್ ಮಾಡುತ್ತೀರಿ ? ಇದನ್ನು (ಸಿ) ಕ್ಲಾಸ್‌ಗೆ ಸೇರಿಸುತ್ತೀರಾ ಅಥವಾ (ಡಿ) ಕ್ಲಾಸ್‌ಗೆ ಅಳವಡಿಸುತ್ತೀರಾ ? ಇನ್ನು ಬಳ್ಳಾರಿ ಜಿಲ್ಲೆಯಲ್ಲಿ 92 ಲಕ್ಷ ಎಕರೆ ನೀರಾವರಿಯಾಗುತ್ತದೆ ಎಂದು ನಿಮ್ಮ ಲೆಕ್ಕಾಚಾರದ ಪ್ರಕಾರ ಹೇಳುತ್ತೀರಿ. ಅದರಲ್ಲಿ ಸುಮಾರು 25 ಸಾವಿರ ಎಕರೆ ಡೆವಲಪ್ ಆಗಿಲ್ಲ. ಇದನ್ನು ಯಾವ ರೀತಿ ಕ್ಲಾಸಿಫಿಕೇಷನ್ ಮಾಡಬೇಕೆಂದು ಯೋಚನೆ ಮಾಡಿದ್ದೀರಾ ? ಈ ರೀತಿ ಇರುವಾಗ ಇದನ್ನು (ಇ) ಕ್ಲಾಸ್ ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ. ಇವರು ವಾಟರ್ ರೇಟ್ ಕಟ್ಟುವುದಕ್ಕೂ ಶಕ್ತಿ ಇಲ್ಲ ಏಕೆಂದರೆ ಅವರು ನೀರೇ ತೆಗೆದುಕೊಂಡಿಲ್ಲ. ಆದುದರಿಂದ ವಾಟರ್ ರೇಟ್ ಕೊಶ್ಚನ್ ಬರುವುದೇ ಇಲ್ಲ. ಮೊನ್ನೆ ದಿವಸ ಈ ಬಗ್ಗೆ ಒಂದು ಪ್ರಶ್ನೆ ನಾನು ಕೇಳಿದಾಗ ತಾವು ಉತ್ತರ ಹೇಳಿದ್ದೀರಾ. 9 ಲಕ್ಷ ರೂಪಾಯಿ ಮನ್ನಾ ಮಾಡಿದೆ ಎಂದು ಹೇಳಿದ್ದೀರಾ. ಈಗ ತಾವು ಲ್ಯಾಂಡ್ ರೀಫಾರಂಸ್ ತಂದಿದ್ದೀರಾ. ಆದರೆ ಇದರಲ್ಲಿ ಕ್ಲಾಸಿಫಿಕೇಷನ್ ಮಾಡುವಾಗ ಮಾನ್ಯ ಮಂತ್ರಿಗಳು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಇನ್ನು ಟೇಲ್‌ಎಂಡ್‌ನಲ್ಲಿ ಕೆಲವು ಕಡೆ ಒಂದು ಬೆಳೆಯೂ ಕೂಡ ಮಾಡುವುದಕ್ಕೆ ಶಕ್ಯ ಇಲ್ಲ. ನಿಮ್ಮ ಲೆಕ್ಕಾಚಾರದ ಪ್ರಕಾರ 2 ಬೆಳೆ ಆಗುತ್ತದೆ ಎಂದು ತೆಗೆದುಕೊಂಡಿದ್ದೀರಿ. ಇದನ್ನು ಸರ್ಕಾರ ತೀವ್ರ ಪರ್ಯಾಲೋಚನೆ ಮಾಡಬೇಕು. ಏತಕ್ಕೆಂದರೆ ಯಾರೊಬ್ಬರಿಗೂ ತೊಂದರೆ ಆಗದಂತೆ ಕ್ಲಾಸಿಫಿಕೇಷನ್ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಫ್ಯಾಮಿನ್ ಏರಿಯಾ ಸುಮಾರು 98 ತಾಲ್ಲೂಕು ಎಂದು ಹೇಳಿದ್ದೀರಾ. ಇದರಲ್ಲಿ ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ ಮತ್ತು ಪಾರ್ಟ್ ಆಫ್ ಬಿಜಾಪುರ ಮತ್ತು ಬೆಳಗಾಂ ಡಿಸ್ಟ್ರಿಕ್ಟ್ ಇವು ಯಾವಾಗಲೂ 2—3 ವರ್ಷಕ್ಕೊಂದು ಸಲ ಬರಗಾಲ ಇದ್ದೇ ಇರುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಗಮನದಲ್ಲಿಟ್ಟುಕೊಂಡು ಕ್ಲಾಸಿಫಿಕೇಷನ್ ಮಾಡಬೇಕು. ಮತ್ತು ಈ ಭೂಸುಧಾರಣೆಯನ್ನು ತಂದಿರುವುದನ್ನು ನಾನು ನಿಜವಾಗಿಯೂ ಸ್ವಾಗತಿಸ ಮಾಡುತ್ತೇನೆ.

ಎಲ್ಲೆಲ್ಲಿ ಆವಶ್ಯಕತೆ ಇದೆ ಮತ್ತು ಡ್ರಾಟ್ ಕಂಡೀಷನ್ಸ್ ಇರುವ ಕಡೆ 20 ಪರ್ಸೆಂಟ್ ಸೀಲಿಂಗ್ ಹೆಚ್ಚು ಮಾಡಬಹುದು ಎಂದು ಕೂಡ ಸೆಂಟ್ರಲ್ ಲ್ಯಾಂಡ್ ರಿಫಾರ್ಮ್ಸ್ ಕಮಿಟಿಯವರು ಹೇಳಿದ್ದಾರೆ. ಆ ಪ್ರಕಾರ ಮಾಡಿರುವುದಕ್ಕಾಗಿ ಅವನ್ನು ಸ್ವಾಗತಿಸಬೇಕಾಗುತ್ತದೆ. ಈಗ ಗುಲ್ಬರ್ಗ, ಬಿದರೆ ಮುಂತಾದ ಕಡೆ ಕ್ಷಾಮ ಬಂದು ಈ ಹೊತ್ತಿಗೂ ಕುಡಿಯಲು ನೀರಿಲ್ಲದ ಪರಿಸ್ಥಿತಿ ಇದೆ. ಬಂಡಿಗಳಲ್ಲಿ ಲಾರಿಗಳಲ್ಲಿ ನೀರುಸರಬರಾಜು ಮಾಡತಕ್ಕ ಪ್ರಸಂಗವಿದೆ. ಅಂಥದ್ದರಲ್ಲಿ ತಾವು ಎಲ್ಲ ವಿಚಾರಗಳನ್ನೂ ಗಮನದಲ್ಲಿಟ್ಟುಕೊಂಡು 98 ತಾಲ್ಲೂಕುಗಳೇನಿವೆ ಅದಕ್ಕೆ ಹೆಚ್ಚು ಅನುಕೂಲ ಮಾಡಿಕೊಟ್ಟಿರುವುದು ಸ್ವಾಗತಾರ್ಹ ಎಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಭೂ ಸುಧಾರಣಾ ತಿದ್ದುಪಡಿ ಮಸೂದೆಯ ಮೇಲೆ ಜಂಟಿ ಪರಿಶೀಲಕ ಸಮಿತಿ ಕೊಟ್ಟಿರುವ ವರದಿ ನಮ್ಮ ಮುಂದೆ ಪರಿಶೀಲನೆಗೆ ಬಂದಿದೆ. ಈ ಸಂದರ್ಭದಲ್ಲಿ ನಾನು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ. ಬಹುಶಃ ಸರ್ಕಾರ ಅದಕ್ಕೆ ಸೂಕ್ತವಾದ ಮಾರ್ಪಾಡನ್ನು ಮಾಡುವುದು ಉಚಿತವೆನ್ನುವ ದೃಷ್ಟಿಯಿಂದ ಕೆಲವು ವಿಷಯಗಳನ್ನು ಪುನಃ ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಕಳೆದ ಸಾರಿ ಈ ತಿದ್ದುಪಡಿ ಮಸೂದೆ ಸಭೆಯ ಮುಂದೆ ಬಂದಾಗ ಸಾಕಷ್ಟು ವಿಷಯ ಪ್ರಸ್ತಾಪ ಮಾಡಿದ್ದೇನೆ. ಈಗ ಅಷ್ಟು ಪ್ರಸ್ತಾಪ ಮಾಡುವ ಆವಶ್ಯಕತೆ ಇದೆ ಎಂದು ನಾನು ತಿಳಿದುಕೊಂಡಿಲ್ಲ. ಮಾನ್ಯ ರೆವಿನ್ಯೂ ಸಚಿವರು ಬಹಳ ಪ್ರಗತಿಪರರು ಅನ್ನಿಸಿಕೊಳ್ಳತಕ್ಕ ಆಸೆಯಿಂದ ಅನೇಕ ಬದಲಾವಣೆಗಳನ್ನು ಜಂಟಿ ಪರಿಶೀಲಕ ಸಮಿತಿಯಲ್ಲಿ ಮಾಡಿ ಈ ರಿಪೋರ್ಟನ್ನು ತಯಾರುಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಭೂ ಸುಧಾರಣಾ ತಿದ್ದುಪಡಿ ಮಸೂದೆ ಸಭೆಯ ಮುಂದೆ ಇತ್ತು. ಆಗ ಸಭೆಯಲ್ಲಿ ಅದರ ಬಗ್ಗೆ ಎದುರು ಪಕ್ಷದಿಂದ ಮತ್ತು ಈ ಪಕ್ಷದಿಂದ ಅಭಿಪ್ರಾಯಗಳು ನಾವು ಇನ್ನೂ ಮುಂದೆ ಹೋಗಬೇಕು ಎಂದು ಸ್ಪಷ್ಟವಾಗಿ ಸೂಚನೆ ಮಾಡಿದ್ದರಿಂದ ಸೆಲೆಕ್ಟ್ ಕಮಿಟಿಗೆ ಹಾಗೆ ಮಾಡದೆ ಬೇರೆ ಮಾರ್ಗವೇ ಇರಲಿಲ್ಲ. ಅನಿವಾರ್ಯವಾಯಿತು. ನಾನಾಗಲೀ ಸಮಿತಿಯ ಸದಸ್ಯರಾಗಲೀ ಪ್ರಗತಿಪರರೆನ್ನಿಸಿ ಕೊಳ್ಳಬೇಕು ಎನ್ನುವ ದೃಷ್ಟಿಯಿಂದ ತಂದದ್ದಲ್ಲ. ಸಭೆಯಲ್ಲಿ ವ್ಯಕ್ತಪಟ್ಟಂಥ ಅಭಿಪ್ರಾಯಗಳ ಆಧಾರದ ಮೇಲೆ ಇದನ್ನು ಮಾಡಿದೆ ಎಂದು ಮಾನ್ಯ ಸಭೆಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಚ್. ಡಿ. ದೇವೇ ಗೌಡ.—ನಾನು ಕಂದಾಯ ಸಚಿವರ ಪ್ರಾಮಾಣಿಕತೆಯ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಅವರು ಮಾಡಿರತಕ್ಕದ್ದರ ಬಗ್ಗೆ ಸಭೆಯ ನಿರ್ದೇಶನಗಳನ್ನು ಉಲ್ಲಂಘಿಸಿ ಹೋಗಿದ್ದಾರೆ ಎನ್ನುವ ಆರೋಪ ವನ್ನು ಕೂಡ ಮಾಡುತ್ತಿಲ್ಲ. ತಿದ್ದುಪಡಿ ಮಸೂದೆ ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಹೋದಾಗ ಅದರ ಪರಿ ಮಿತಿಯಲ್ಲಿ ಮಾರ್ಪಾಡನ್ನು ಮಾಡತಕ್ಕದ್ದು ಸಾಮಾನ್ಯವಾಗಿ ಸಂಪ್ರದಾಯ. ಲಾ ಡಿಪಾರ್ಟ್‌ಮೆಂಟಿನವರು ಹೊಸ ತಿದ್ದುಪಡಿ ಸೂಚಿಸತಕ್ಕದ್ದನ್ನು ಅಥವಾ ಇರುವ ತಿದ್ದುಪಡಿಯನ್ನು ಕಿತ್ತು ಹಾಕುವುದಕ್ಕೆ ಒಪ್ಪಿಗೆ ಕೊಟ್ಟಿ ದ್ದಾರೆ ಎಂದು ಲಾ ಮಿನಿಸ್ಟರ್ ಸಮರ್ಥನೆ ಮಾಡುವುದಾದರೂ ಕೂಡ ತಾವು ಒಂದು ಹೆಜ್ಜೆ ಮುಂದೆ ಹೋಗಿ ದ್ದೀರಿ. ಕ್ಲಾಜ 14 ಕಿತ್ತುಹಾಕಿದ್ದೀರಿ. ಅದರ ಬಗ್ಗೆ ಆ ಮೇಲೆ ಬರುತ್ತೇನೆ.

ಮೊದಲನೆಯದಾಗಿ ಜಾಯಿಂಟ್ ಸೆಲೆಕ್ಟ್ ಸಮಿತಿಯವರು ಬಹಳ ಕಷ್ಟಪಟ್ಟು ಕೆಲಸ ಮಾಡಿರುವುದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಲವತ್ತೂರು ಸಿಟ್ಟಿಂಗ್ಸ್ ಕೂತಿದ್ದಾರೆ ಎಂದು ಹೇಳಿರುವುದನ್ನು ಓದಿದ್ದೇನೆ. ಶಾಸನ ಸಭೆಯ ಕಾರ್ಯಕಲಾಪವಿದ್ದಾಗಲೂ ಕೂಡ ಕೆಲವು ದಿವಸ ರಾತ್ರಿ 9-30 ಅಥವಾ 10 ಗಂಟೆಯವರೆಗೂ ಕುಳಿತು. ಆಸಕ್ತಿ ತೋರಿಸಿ ಇದಕ್ಕೆ ಅಂತಿಮ ನಿರ್ಣಯ ಮಾಡಬೇಕೆಂಬ ಮಹದಾಕ್ಷಾಂಕ್ಷೆ ಯಿಂದ ಈ ಕೆಲಸವನ್ನು ನಿರ್ವಹಣೆ ಮಾಡಿದ್ದಾರೆ ಎನ್ನುವ ದೃಷ್ಟಿಯಿಂದ ಅವರಿಗೆ ಅಭಿನಂದಿಸುತ್ತೇನೆ. ಏಕೆಂದರೆ ಕಳೆದ 15 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಂಥ ಸಮಸ್ಯೆ ಇದು. ಒಬ್ಬೊಬ್ಬರು ಒಂದೊಂದು ರೀತಿ ಭೂ ಸುಧಾರಣೆ ಬಗ್ಗೆ ವ್ಯಾಖ್ಯಾನ ಮಾಡಿಕೊಂಡು ಬಂದಿದ್ದಾರೆ. ಭೂಸುಧಾರಣೆ ಬಗ್ಗೆ ಅವಿಭಾಜ್ಯ ಕಾಂಗ್ರೆಸ್ ಒಂದು ತೀರ್ಮಾನಕ್ಕೆ ಬಂದಿತ್ತು. ಈ ಹೊತ್ತು ನಮ್ಮ ಮುಂದೆ ಇರತಕ್ಕ ಸಮಸ್ಯೆ ಸೀಲಿಂಗ್ ಮಿತಿ ಎಷ್ಟು ಇರಬೇಕು ಎನ್ನುವುದು. ಈ ಜಿಜ್ಞಾಸೆಯಲ್ಲಿ ನಮಗೂ ನಿಮಗೂ ಭಿನ್ನಾಭಿಪ್ರಾಯವಿರಬಹುದು. ಅದನ್ನು ಬಿಟ್ಟರೆ ಭೂ ಸುಧಾರಣೆ ತರತಕ್ಕದ್ದನ್ನು ತಾತ್ವಿಕವಾಗಿ ನಾವೆಲ್ಲರೂ ಒಪ್ಪಿದ್ದೇವೆ. ನಾನು 15 ಎಕರೆ ಇರಬೇಕು ಎಂದರೆ ರೀಆಕ್ಷನರಿ ಆಗುತ್ತೇನೆ. ಹತ್ತು ಎಕರೆ ಇರಬೇಕು ಎನ್ನುವವರು ಪ್ರೋಗ್ರೇಸಿವ್ ಆಗುತ್ತಾರೆ, ಐದು ಎಕರೆ ಇರಬೇಕು ಎನ್ನುವವರು ಬಹಳ ಪ್ರೋಗ್ರೆಸಿವ್ ಆಗುತ್ತಾರೆ. ಶ್ರೀ ಕಕ್ಕಿಲಾಯ, ಶ್ರೀ ವಿ. ಎನ್. ಪಾಟೀಲ್ ಅಂಥವರು ರಾಷ್ಟ್ರೀಕರಣ ಮಾಡಬೇಕು ಎನ್ನುವವರ ವಿಚಾರದಲ್ಲಿ ಸೂಪರಲೇಟಿವ್ ಡಿಗ್ರಿಯಲ್ಲಿ ಹೇಳಬೇಕು. ಹದಿನೈದು ಎಕರೆ ಎಂದು ಹೇಳಿದ ಮಾತ್ರಕ್ಕೆ ರೀಆಕ್ಷನರಿ ಎನ್ನುವ ಬ್ರಾಂಡ್ ಮಾಡತಕ್ಕದ್ದು ಸ್ವಾಭಾವಿಕವಾಗಿ ಬಂದಿರತಕ್ಕ ರಾಜಕೀಯದ ಒಂದು ಆಟವೆಂದರೆ ತಪ್ಪಾಗಲಾರದು. ಶ್ರೀನಗರದಲ್ಲಿ ಅಥವ ಇನ್ನೊಂದು ಕಡೆ ಎರಡು ಸಿನಿಮಾ ಥಿಯೇಟರ್ ಇಟ್ಟುಕೊಂಡು ಐದು ಎಕರೆಯ ಮಿತಿ ಸಾಕು ಎಂದು ಕೇಂದ್ರದ ಮಂತ್ರಿಗಳು ಭಾಷಣ ಮಾಡಬಹುದು. ಸೋಷಿಯಲಿಸ್ಟಿಕ್, ಪ್ರೋಗ್ರೆಸಿವ್ ಐಡಿಯಾಲಜೀಸ್ ಇದೆ ಎಂದು ಬೇಕಾದರೂ ಹೇಳಬಹುದು. ನಾನು ಯಾರ ಹೆಸರೂ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ಕಾಲ ಬರುತ್ತದೆ, ಅದರ ಬಗ್ಗೆ ವಿಚಾರಣೆಯಾಗತಕ್ಕ ಕಾಲ ಬರುತ್ತದೆ. ಬಹಳ ಕಾಲ ಮೋಸ ಮಾಡುವುದಕ್ಕೆ ಸಾಧ್ಯವಿಲ್ಲ. ರೈತನಿಗೆ ಪ್ರತಿಭಟನೆ ಮಾಡತಕ್ಕ ಶಕ್ತಿ ಇಲ್ಲ, ಸಂಘಟನೆ ಮಾಡಿಕೊಳ್ಳತಕ್ಕ ಶಕ್ತಿ ಕೂಡ ಇಲ್ಲ. ಚುನಾವಣೆಗಳು ಬಂದಾಗ ಗೌಡರು ಆರಿಸಿ ಹೋದರೆ ಏನಾದರೂ ಮಾಡಿಯಾರು ಎಂದು ನನಗೂ, ಮಾನ್ಯ ಹುಚ್ಚಮಾಸ್ತಿ ಗೌಡರಿಗೂ ವೋಟು ಕೊಡಬಹುದು. ಅದು ಬಿಟ್ಟರೆ ಅವನ ಕಥೆ ಮುಗಿಯಿತು, ಅಷ್ಟೇ.

ತಾವು ಕೆಲವು ಕಡೆ ಭಾಷಣ ಮಾಡಿದಾಗ ಭೂ ಸುಧಾರಣೆ ಮತ್ತು ಅರ್ಬನ್ ಸೀಲಿಂಗ್ ಎರಡನ್ನೂ ಒಟ್ಟಿಗೇ ತರುತ್ತೇವೆಂದು ಹೇಳಿದ್ದೀರಿ. ಅಧಿಕಾರಕ್ಕೆ ಬಂದ ಪ್ರಥಮದಲ್ಲಿ ಆ ರೀತಿ ಹೇಳಿರತಕ್ಕದ್ದನ್ನು ನಾನು ನೋಡಿದ್ದೇನೆ. ಅದನ್ನು ತಾವು ಈಗ ಇಲ್ಲ ಎಂದು ಹೇಳುವುದಿಲ್ಲ. ನಾನು ಜಂಟಿ ಪರಿಶೀಲಕ ಸಮಿತಿಯವರು ಕೊಟ್ಟಿರುವ ಅಭಿಪ್ರಾಯವನ್ನು ಮೀರಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಅವರು ಯಾವ ಮಾರ್ಪಾಡನ್ನು ಮಾಡಿದ್ದಾರೆ ಅದರ ಮೇಲೆ ಮಾತನಾಡಬೇಕಾಗುತ್ತದೆ ಎನ್ನುವುದನ್ನು ಬಲ್ಲೆ. ಈ ರಿಪೋರ್ಟ್ ಜೊತೆಗೆ ಡಿಸೆಂಟಿಂಗ್ ನೋಟ್ ಹಾಕಿದ್ದಾರೆ. ಅದರಲ್ಲಿ ಪಟ್ಟಣಗಳ ಆಸ್ತಿ ಮಿತಿಯನ್ನು ಕೂಡ ತರತಕ್ಕದ್ದು, ಎರಡನ್ನೂ ಒಂದೇ ಸಾರಿ ಕಾರ್ಯಗತ ಮಾಡುವುದರ ಬಗ್ಗೆ ಪ್ರಯತ್ನಮಾಡಿರಿ ಎಂದು ಹೇಳಿದ್ದಾರೆ. ಆದರೆ ಸರ್ಕಾರ ದವರು ಅದನ್ನು ಕೇಂದ್ರ ಸರ್ಕಾರಕ್ಕೆ ಬಿಟ್ಟಿದ್ದಾರೆ. ಈ ಸಭೆ ತೀರ್ಮಾನ ಮಾಡಿ ನೀವು ಕಾಯಿದೆ ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ವಹಿಸಿಕೊಟ್ಟಿದೆ. ಅದರ ಬಗ್ಗೆ ಈಗ ಕೇಂದ್ರದ ವರಿಷ್ಠರ ಬಾಯಿಂದ ಏನೂ ಬರುತ್ತಿಲ್ಲ

ಒಂದು ಕಮಿಟಿ ಮಾಡಿ ಒಂದು ಮಸೂದೆ ಮಾಡುತ್ತೇವೆಂದು ನಿಮ್ಮ ಪಕ್ಷದ ವತಿಯಿಂದ ಹೇಳಿದರು. ಅದು ಎಲ್ಲಿದೆ ಎನ್ನುವುದು ಗೋಚರವಾಗುತ್ತಿಲ್ಲ. ಇತ್ತೀಚೆಗೆ ಪತ್ರಿಕಾ ಹೇಳಿಕೆಗಳಲ್ಲಾಗಲೀ ಕೇಂದ್ರದ ಮುಖಂಡರ ಭಾಷಣದ ಸಾರಾಂಶವನ್ನಾಗಲೀ ನೋಡುವುದಾದರೂ ಎಲ್ಲಿಯೂ ಈಚೆಗೆ ಈ ಬಗ್ಗೆ ಏನೂ ಬಂದಿಲ್ಲ. ಅರ್ಬನ್ ಸೀಲಿಂಗ್ ಬಗ್ಗೆ ಮಾತನಾಡತಕ್ಕ ಪ್ರವೃತ್ತಿಯನ್ನು ಬಿಟ್ಟಿದ್ದಾರೆ ಎನ್ನುವ ಭಾವನೆ ಬರುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರ ಆರ್ಥಿಕ ಪ್ರಗತಿಯನ್ನು ನಿರ್ನಾಮ ಮಾಡತಕ್ಕ ಒಂದು ಕುಟಿಲ ನೀತಿ ಇದಾಗಿದೆ ಎಂದರೆ ತಪ್ಪಾಗುವುದಿಲ್ಲ.

3-00 ಪಿ.ಎಂ.

ಅವಿಭಾಜ್ಯ ಕಾಂಗ್ರೆಸ್ಸಿನವರೇ ಇದನ್ನು ಒಪ್ಪಿಲ್ಲವೇ ಎಂದು ತಾವು ಯಾರಾದರು ಕೇಳಬಹುದು : ಆದರೆ ಇಲ್ಲಿ ಮೂಲ ಪ್ರಶ್ನೆ ಇರುವುದು, ಎಕನಾಮಿಕ್ ಹೋಲ್ಡಿಂಗ್ಸ್ ಎಷ್ಟಿರಬೇಕೆಂಬುದು ? ಹತ್ತು ಎಕರೆ ಇದ್ದರೆ ಜೀವನ ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ಕೇಳುತ್ತೇನೆ ? ಹೊಟ್ಟೆಗೆ ಇಲ್ಲದಿರುವವರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಬೇಕೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ರಾಷ್ಟ್ರದಲ್ಲಿ ಒಂದು ವರ್ಗದವರನ್ನು ಬಿಟ್ಟು ಇನ್ನೊಂದು ವರ್ಗದವರ ಪೀಳಿಗೆ ಆರ್ಥಿಕವಾಗಿ ತಲೆಯೆತ್ತದಂತೆ ಈ ಮೂಲಕ ಮಟ್ಟ ಹಾಕುವುದು ಸರಿಯೇ ಎಂದು ಕೇಳುತ್ತೇನೆ. ಪಟ್ಟಣದ ಆಸ್ತಿಯ ಮೇಲೆ ಮಿತಿ ಹಾಕದಿದ್ದರೆ, ನಾಳೆದಿವಸ ರಾಜಕೀಯ ಜೀವನದಲ್ಲಿರಬೇಕಾದರೆ, ಕಪ್ಪುಹಣ ಹೊಂದಿರುವ ಜನರ ಹಂಗಿನಲ್ಲಿ, ಅಂಕುಶದಲ್ಲಿ ಮತ್ತು ಅವರ ಒಂದು ಆಶ್ರಯದಲ್ಲಿ ಇರಬೇಕಾದ ಕಾಲ ಬರುತ್ತದೆ. ಮತ್ತು ಅವರಿಗೆ ನಮಸ್ಕಾರಮಾಡುವ ಕಾಲವೂ ಸಹಾ ಬರುತ್ತದೆ. ಒಂದು ಕಡೆ ಗ್ರಾಮಾಂತರ ಪ್ರದೇಶದ ಜನರ ಆರ್ಥಿಕ ಪ್ರಗತಿಯನ್ನು ನಿರ್ನಾಮ ಮಾಡು ವುದಕ್ಕೆ ಹೊರಟ್ಟಿದ್ದೀರಿ, ಇನ್ನೊಂದು ಕಡೆ ಪಟ್ಟಣಗಳಲ್ಲಿರುವ ಜನರು ಸೌಧದ ಮೇಲೆ ಸೌಧ ಕಟ್ಟಿಸುವುದಕ್ಕೆ ಅವಕಾಶ ಕೊಡುತ್ತಿದ್ದೀರಿ. ಇದು ಯಾವ ನ್ಯಾಯ ? ಮಾನ್ಯ ಕೃಷ್ಣನವರು ಏನಾದರು ಅಧಿಕಾರಕ್ಕೆ ಬಂದರೆ. ಇಡೀ ಖಾಸಗೀ ಆಸ್ತಿಯೆಲ್ಲಾ ಸರ್ಕಾರದ್ದು ಎಂದು ಡಿಕ್ಲೇರ್ ಮಾಡಬಹುದೆಂದು ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನೀವು ನಮ್ಮ ಜೊತೆಯಲ್ಲಿ ಸೇರಿಕೊಂಡರೆ ಅದು ಬೇಗ ಆಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ನಿಮ್ಮ ಜೊತೆ ಸೇರಿಕೊಂಡರೆ. ನಿಮ್ಮ ತತ್ವವನ್ನು ಮುರಿಯಲಿಕ್ಕೆ ಬಂದಿದ್ದೇನೆಂದು ನನ್ನ ಮೇಲೆ ಆಪಾದನೆ ಬರಬಹುದು. ಆದಕಾರಣ ನನ್ನನ್ನು ನಿಮ್ಮ ಜೊತೆ ಸೇರಿಸಿಕೊಳ್ಳು ವುದರಿಂದ ನಿಮಗೆ ತೊಂದರೆಯಾಗಬಹುದು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈ ಒಂದು ಮಸೂದೆ ಯನ್ನು ಜಾರಿಗೆ ತರುವುದರ ಮೂಲಕ ಶೇಕಡ 75 ರಷ್ಟು ಗ್ರಾಮಾಂತರ ಪ್ರದೇಶದಲ್ಲಿರುವ ಜನತೆಯ ಆರ್ಥಿಕ ಪ್ರಗತಿಯನ್ನು ಸ್ಥಗಿತಗೊಳಿಸುತ್ತೀದ್ದೀರಿ. ಇಂದು ನಮ್ಮ ದೇಶದಲ್ಲಿ ಪರ್-ಕ್ಯಾಪಿಟಾ ಇನ್‌ಕಮ್ 585 ರೂಪಾಯಿಗಳು ಮಾತ್ರ ಇದೆ. ಅದೇ ಅಮೇರಿಕಾದಲ್ಲಿ ಪರ್-ಕ್ಯಾಪಿಟಾ ಇನ್‌ಕಂ 38 ಸಾವಿರ ಇದೆ ಎಂದು ಕೇಳಿದ್ದೇನೆ. ಈಗ ತಾವು 10 ಎಕರೆಗೆ ಮಿತಿಗೊಳಿಸುವುದಾದರೆ, ಮುಂದೆ ಆತನ ಮಕ್ಕಳು ಅದನ್ನು ಭಾಗ ಮಾಡಿಕೊಂಡರೆ, ಅದು ಮತ್ತೆ ಕಡಿಮೆಯಾಗುತ್ತದೆ. ಈ ರೀತಿ ಅದು ಬರುಬರುತ್ತಾ ಕಡಿಮೆಯಾಗುತ್ತಾ ಹೋದರೆ, ಆರ್ಥಿಕವಾಗಿ ಮತ್ತು ಹೆಚ್ಚು ಶಕ್ತಿಯುತವಾಗಿ ಅವರು ಬೆಳೆಯುವುದಕ್ಕೆ ಎಲ್ಲಿ ಸಾಧ್ಯವಿದೆ ? ಇಂದು ನಮ್ಮ ದೇಶದಲ್ಲಿ ಹೊಟ್ಟೆಗೆ ಇಲ್ಲದ ಜನರು ಬಹಳ ಮಂದಿ ಇದ್ದಾರೆ ಟೆನೆಂಟ್ಸ್ ಬಹಳ ಮಂದಿ ಇದ್ದಾರೆ, ಲೇಬರರ್ಸ್ ಬಹಳ ಮಂದಿ ಇದ್ದಾರೆ. ಅವರಿಗೆ ಅನುಕೂಲ ಮಾಡಬೇಕಾಗಿದೆ ಎಂದು ಹೇಳುವ ತತ್ವವನ್ನು ಒಪ್ಪಿಕೊಳ್ಳಬಹುದು. ಆದರೆ ಈ ರೀತಿ ಹತ್ತು ಎಕರೆಯ ಮಿತಿಯನ್ನು ಇಡುವುದರಿಂದ ಯಾವ ಸಮಸ್ಯೆಯೂ ಬಗೆಹರಿಯುವುದಿಲ್ಲ. ಮತ್ತು ಇದರಿಂದ ಈ ದೇಶ ಸಿರಿವಂತ ದೇಶವಾಗುವುದಿಲ್ಲ. ಮುಂದೆ ಪರರಾಷ್ಟ್ರದ ಜೊತೆಯಲ್ಲಿ ತಲೆಯೆತ್ತಿ ನಾವು ಆರ್ಥಿಕವಾಗಿ ಮುಂದುವರೆದಿದ್ದೇವೆಂದು ಹೇಳಿಕೊಳ್ಳುವ ಶಕ್ತಿಯೂ ಸಹ ಇದರಿಂದ ಬರುವುದಿಲ್ಲ. ಮಾನ್ಯ ಮಂತ್ರಿಗಳು ಸಹ ಗ್ರಾಮಾಂತರ ಪ್ರದೇಶದಿಂದ ಬಂದಿರುವವರೇ ಆಗಿದ್ದಾರೆ. ಆದ್ದರಿಂದ ಗ್ರಾಮಾಂತರ ಪ್ರದೇಶದ ಜನರ ಕಷ್ಟಸುಖಗಳು ಅವರಿಗೆ ಗೊತ್ತಿದೆ. ಇಂದು ಪಟ್ಟಣದ ಜನತೆಯ ಆಸ್ತಿಪಾಸ್ತಿಗಳು ಬೆಳೆಯುವುದಕ್ಕೆ ಎಲ್ಲ ಅವಕಾಶಗಳು ಇರುವಾಗ, ಗ್ರಾಮಾಂತರ ಪ್ರದೇಶದ ಜನರ ಆಸ್ತಿ ಪಾಸ್ತಿಗಳ ಮೇಲೆ ಮಿತಿ ಹಾಕುವುದು ಸರಿಯೇ ? ದಲಿತ ವರ್ಗದವರನ್ನು ಮುಂದೆ ತರುವ ದೃಷ್ಟಿಯಿಂದ ಇದನ್ನು ಮಾಡಲಾಗುತ್ತಿದೆ ಎಂದು ತಾವು ಹೇಳುವುದಾದರೆ, ಪಟ್ಟಣದ ಆಸ್ತಿಯ ಮೇಲೂ ಸಹ ಜಾಗ್ರತೆ ಮಿತಿ ತರಬೇಕೆಂದು ತಾವು ಕೇಂದ್ರದ ಮೇಲೆ ಒತ್ತಾಯ ತರಬೇಕು. ಮತ್ತು ಅವರು ಪಟ್ಟಣದ ಆಸ್ತಿಯ ಮೇಲೆ ಮಿತಿ ತಂದಮೇಲೆ, ಈ ಮಸೂದೆಯನ್ನು ಜಾರಿಗೆ ಕೊಡುತ್ತೀರಾ ಎಂಬುದನ್ನು ಸಹ ತಿಳಿಸಬೇಕು. ಎರಡನ್ನೂ ಒಟ್ಟಿಗೆ ಜಾರಿಗೆ ತರದಿದ್ದರೆ ಪಟ್ಟಣದಲ್ಲಿರುವ ಬಡವರಿಗೆ ತೊಂದರೆಯಾಗುತ್ತದೆ. ಲ್ಯಾಂಡ್ ಲೇಬರರ್ಸ್‌ಗೆ ರಿಲೀಫ್ ಕೊಡುವುದಕ್ಕೆ ತಾವು ಈ ಮೂಲಕ ಹೊರಟಿರುವಾಗ, ಪಟ್ಟಣಗಳಲ್ಲಿರುವ ಅನೇಕ ನಿರ್ಗತಿಕರಿಗೂ ಸಹ ಸವಲತ್ತು ಕೊಡಬೇಕಾಗುತ್ತದೆ. ಈ ಕಾರಣಗಳಿಂದ ತಾವು ನಗರಾಸ್ತಿಯ ಮೇಲೆ ಮಿತಿ, ಮತ್ತು ಭೂಮಿತಿ ಇವೆರಡನ್ನೂ ಒಂದೇ ಸಲ ಜಾರಿಗೆ ತರುವುದಕ್ಕೆ ಈ ಸಭೆಗೆ ಆಶ್ವಾಸನೆಯನ್ನು ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಈ ತಿದ್ದುಪಡಿ ಮಸೂದೆಯಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕೆಲವೊಂದು ಮಾರ್ಪಾಡು ಮಾಡಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಫ್ಯಾಮಿಲಿ ಎನ್ನುವುದಕ್ಕೆ ಇಲ್ಲಿ ಈ ರೀತಿ ಹೇಳಿದ್ದಾರೆ :—

"in the case of an indivisual who has a spouse or spouses, such individual, the spouse spouses and their minor sons and their unmarried daughters, if any ;"

ಅಂದರೆ ಒಬ್ಬ ವ್ಯಕ್ತಿ ಗಂಡಸಾಗಿದ್ದರೆ, ಆತ ಮತ್ತು ಆತನ ಹೆಂಡಂದಿರು, ವ್ಯಕ್ತಿ ಹೆಂಗಸಾಗಿದ್ದರೆ, ಆಕೆ ಮತ್ತು ಆಕೆಯ ಗಂಡಂದಿರು ಎಂದು ಅರ್ಥ ಬರುತ್ತದೆ. ಬಹುಶಃ ಒಬ್ಬ ಹೆಂಗಸಿಗೆ ನಾಲ್ಕಾರು ಜನ ಗಂಡಂದಿರು ಇರುವುದಕ್ಕೆ ಸಾಧ್ಯವಿಲ್ಲ. ಮಹಾಭಾರತದಲ್ಲಿ ದ್ರೌಪದಿಗೆ ಐದು ಜನ ಗಂಡಂದಿರು ಇದ್ದರು ಎಂದು ಕೇಳಿದ್ದೇವೆ. ಆ ಕಾಲದಲ್ಲಿ ನಾವೇನೂ ಇದ್ದು ನೋಡಿರಲಿಲ್ಲ. ಇಲ್ಲಿ ಫ್ಯಾಮಿಲಿ ಎನ್ನುವುದಕ್ಕೂ ಸಹ ಒಂದು ಮಿತಿ ಹಾಕಿದ್ದಾರೆ. ಗಂಡ, ಹೆಂಡತಿ ಮತ್ತು ಮೂರು ಜನ ಮೈನರ್ ಮಕ್ಕಳು. ಇಲ್ಲಿ ಎಂದು ಹೇಳಿದ್ದೀರಿ. ಅಂದರೆ ಒಬ್ಬ ಗಂಡಸಿಗೆ ನಾಲ್ಕು ಜನ ಹೆಂಡಂದಿರು ಇದ್ದರೂ ಸಹ ಫ್ಯಾಮಿಲಿ ಯೂನಿಟ್ ಇಷ್ಟಕ್ಕೆ ಸೀಮಿತಗೊಳ್ಳುತ್ತದೆ. ಮೈನರ್ ಮಕ್ಕಳು ಇದ್ದರೆ, ಒಬ್ಬರಿಗೆ ಒಂದು ಯೂನಿಟ್ ಎಂದು ಹೇಳಿದ್ದೀರಿ. ಆದರೆ ನಾಲ್ಕು ಜನ ಹೆಂಡತಿಯರಿದ್ದು, ಒಬ್ಬೊಬ್ಬ ಹೆಂಡತಿಯರಿಗೂ ಒಂದೊಂದು ಡಜನ್ ಮಕ್ಕಳು ಇದ್ದರೆ ಅವರು ಎಲ್ಲಿ ನಿಲ್ಲಬೇಕು ? ಉದಾಹರಣೆಗೆ ಹೇಳುವುದಾದರೆ ಮಹಮಡನ್ಸ್‌ನಲ್ಲಿ ಒಬ್ಬೊಬ್ಬರಿಗೆ 4—5 ಜನ ಹೆಂಡತಿಯರಿರುತ್ತಾರೆ ಆದರೆ ನಮ್ಮಲ್ಲಿ ಬಹುಪತ್ನಿತ್ವ ಇದೆಯೋ ಅಥವಾ ಇಲ್ಲವೋ ಗೊತ್ತಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಮೊದಲು ಮಾಡಿಕೊಂಡಿರುವರು ಇದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಒಬ್ಬ ಮನುಷ್ಯನ ಶಕ್ತಿಯನ್ನು ಅಳೆಯಬೇಕಾದರೆ ಹುಬ್ಬಳ್ಳಿಯ ಜನರು ಹೇಳುವ ಪ್ರಕಾರ ಆತನಿಗೆ ಎಷ್ಟು ಜನ ಹೆಂಡತಿಯರಿದ್ದಾರೆಂಬುದನ್ನು ನೋಡುತ್ತಾರಂತೆ. ಈ ರೀತಿ ಬಹು ಪತ್ನಿತ್ವವಿರುವ ಸಮಾಜದವರು ಏನಿದ್ದಾರೆ, ಅವರಿಗೆ ನಾಲ್ಕೈದು ಜನ ಹೆಂಡತಿಯರಿದ್ದು, 15—20 ಮಕ್ಕಳು ಇದ್ದರೆ ಅವರ ಪರಿಸ್ಥಿತಿ ಏನು ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು ಒಂದು ಕಡೆ ನ್ಯಾಯ ದೊರಕಿಸಿ ಕೊಡುತ್ತೇವೆಂದು ಹೇಳುತ್ತಾರೆ ; ಆದರೆ ಇಲ್ಲಿ ಭೂಮಿ ಹಂಚಿಕೆ ಮಾಡಿರುವುದನ್ನು ನೋಡಿದರೆ ನ್ಯಾಯ ದೊರಕಿಸಿಕೊಟ್ಟಂತೆ ಕಾಣುವುದಿಲ್ಲ. ಒಬ್ಬ ವ್ಯಕ್ತಿಗೆ ಹೆಂಡತಿ ಮತ್ತು ಮೂರು ಜನ ಮೇಜರ್ ಮಕ್ಕಳು ಇದ್ದರೆ ಈ ಆಕ್ಟ್ ಕೆಳಗೆ 40 ಎಕರೆ ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ, ಅದೇ ಒಬ್ಬ ವ್ಯಕ್ತಿಗೆ ನಾಲ್ಕು ಜನ ಹೆಂಡತಿಯರಿದ್ದು, ಪ್ರತಿಯೊಬ್ಬರಿಗೂ ನಾಲ್ಕೈದು ಜನ ಮಕ್ಕಳು ಇದ್ದರೆ, ಆತನಿಗೆ ಕೇವಲ ಇಪ್ಪತ್ತು ಎಕರೆ ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಟ್ಟರೆ ಅವರು ಏನು ಮಾಡಬೇಕು ? ಮುಂದೆ ಆ ಮಕ್ಕಳು ದೊಡ್ಡವರಾದ ಮೇಲೆ ಒಬ್ಬೊಬ್ಬರು ಒಂದೊಂದು ಅಥವಾ ಅರ್ಧ ಎಕರೆಯಂತೆ ಆ ಜಮೀನನ್ನು ಹಂಚಿಕೊಳ್ಳಬೇಕಾಗುತ್ತದೆ.

ನಮ್ಮ ಊರಿನಲ್ಲಿ ಖಾಸಿಂ ಎನ್ನುವ ಒಬ್ಬರು ಸಾಹೇಬರು ಇದ್ದಾರೆ. ಅವರಿಗೆ 67 ಜನ ಮಕ್ಕಳು ಇದ್ದಾರೆ ಎಂದು ಅವರು ಹೇಳಿಕೊಳ್ಳುತ್ತಿದ್ದಾರೆ. ಸ್ಪೌಸ್ ಎನ್ನುವುದಕ್ಕೆ ಅರ್ಥವನ್ನು ಡಿಕ್ಷನರಿ ತೆಗೆದು ವೆರಿಫೈ ಮಾಡಿದಾಗ ಅದನ್ನು ನೋಡಿ ನನಗೆ ಸಂಶಯ ಬಂದಿದೆ. ಆದ್ದರಿಂದ ಇದರ ಬಗ್ಗೆ ವಿವರಣೆ ಕೊಡಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಫ್ಯಾಮಿಲಿ ಡಿಫಿನಿಷನ್ (ಬಿ) ನಲ್ಲಿ

(*b*) in the case of an individual who has no spouse, such individual and his or her minor sons and unmarried daughters ;

(*c*) in the case of an individual who is a divorced person and who has not remarried, such individual and his minor sons and unmarried daughters whether in his custody or not ;

ಎಂದು ಹೇಳಿದ್ದಾರೆ. ಇದರೊಳಗೆ ಎರಡು ಆರ್ಗ್ಯುಮೆಂಟ್ ಬರುತ್ತವೆ. ನಾನು ನನ್ನ ಹೆಂಡತಿಯನ್ನು ಡೈವರ್ಸ್ ಮಾಡಿಕೊಳ್ಳುತ್ತೇನೆ. ಅದರಿಂದ ನನಗೆ 10 ಎಕರೆಯ ಒಂದು ಯೂನಿಟ್ ಬರುತ್ತದೆ. ಇದರ ಆಬ್ಜೆಕ್ಟ್ ಏನು ಎಂಬುದು ನನಗೆ ಅರ್ಥವಾಗಲಿಲ್ಲ. ಇವೊತ್ತು ಗಂಡ ಹೆಂಡತಿ ಭೂಮಿಯನ್ನು ಮಾಡಿಕೊಳ್ಳುವುದಕ್ಕಾಗಿ ಹೆಂಡತಿಯನ್ನು ಬಿಟ್ಟಿದ್ದೇನೆ ಎಂದು ಹೇಳುತ್ತಾರೆ. ಇದು ಸಾಧುವಾದದ್ದೇ ಎಂದು ನಾನು

ಕೇಳುತ್ತೇನೆ ? ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುತ್ತೇನೆ. ನಾನು ನನ್ನ ಹೆಂಡತಿಯನ್ನು ಡೈವರ್ಸ್ ಮಾಡಿ ಓಡಿಸುತ್ತೇನೆ. ಡೈವರ್ಸ್ ಆದ ಹೆಂಡತಿ ಆಕೆಯ ತಂದೆಯ ಮನೆಗೆ ಹೋಗುತ್ತಾಳೆ. ಅಲ್ಲಿ ವಾಸವಾಗಿರುತ್ತಾಳೆ. ಫ್ಯಾಮಿಲಿ ಡಿಫಿನಿಷನ್ ಪ್ರಕಾರ ಆಕೆ ತಂದೆಯ ಆಸ್ತಿಯನ್ನು ಹೊಂದುವುದಕ್ಕೆ ಸಾಧ್ಯವಿಲ್ಲ. ಈಗ ಒಬ್ಬ ಗಂಡ ಇರುತ್ತಾನೆ ಅವನು ತನ್ನ ಹೆಂಡತಿಯನ್ನು ಡೈವರ್ಸ್ ಮಾಡಿ ಓಡಿಸುತ್ತಾನೆ, ಅವನಿಗೆ ಏನೂ ಪ್ರಾಪರ್ಟಿ ಇರುವುದಿಲ್ಲ. ಅವನು ಬೀದಿ ಬಸವಣ್ಣ ಆಗಿರುತ್ತಾನೆ. ಆಗ ಆಕೆ ತಂದೆ ಮನೆಗೆ ಹೋಗಿ ವಾಸ ಮಾಡಿಕೊಂಡಿರುತ್ತಾಳೆ. ಇಂಥಾ ಸಂದರ್ಭದಲ್ಲಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೆ ಮತ್ತು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಮಗಳು ಎನ್ನುವ ಫೀಲಿಂಗ್ಸ್ ಬರುವುದಿಲ್ಲವೇ ? ಅವಳು ಏನಾದರೂ ಯಾವ ಪಾಪ ಮಾಡಿ ಹುಟ್ಟಿದ್ದಾಳೆ ? ಆಕೆ ನತದೃಷ್ಟ ಗಂಡನನ್ನು ಕೈಹಿಡಿದದ್ದು ತಪ್ಪೇ ಎನ್ನುವ ಪ್ರಸಂಗ ಬರುತ್ತದೆ. ಅಂಥಾ ಸಂದರ್ಭದಲ್ಲಿ ಆಕೆ ತನ್ನ ತಂದೆಯ ಪ್ರಾಪರ್ಟಿಯನ್ನು ಹೊಂದುವುದಕ್ಕೆ ಸ್ಕೋಪೇ ಇಲ್ಲ. ಮತ್ತು ಇದರಲ್ಲಿ ಡೈವರ್ಸ್ ಮಾಡಿರತಕ್ಕ ಗಂಡನ ಮಕ್ಕಳ ಲೆಕ್ಕವನ್ನು ಹಿಡಿಯುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಾ ? ಇದನ್ನೆಲ್ಲಾ ನೋಡಿ ಇದರಲ್ಲಿರತಕ್ಕ ಆಂಬುಗ್ಯುಟಿ ಏನಿದೆ ಅದನ್ನು ಪರಿಶೀಲನೆ ಮಾಡತಕ್ಕದ್ದು ಸೂಕ್ತ. ಇದನ್ನು ತಮ್ಮ ಅಭಿಪ್ರಾಯಕ್ಕೆ ಬಿಡುತ್ತೇನೆ. ಅನೇಕ ಕಡೆ ಕೆಲವರು ತನ್ನ ಹೆಂಡತಿಗೆ ಪಾಲು ಕೊಡದೆ ಆಕೆಯನ್ನು ಡೈವರ್ಸ್ ಮಾಡಿ ತಾಳಿಯನ್ನೂ ಕಿತ್ತುಕೊಂಡು ಓಡಿಸಿರತಕ್ಕದ್ದನ್ನು ನಾನು ನೋಡಿದ್ದೇನೆ. ಇಂಥವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುತ್ತೀರಾ ? ನೀವು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುತ್ತೇವೆ ಎನ್ನುವ ಹೆಸರಿನಲ್ಲಿ ಇವೊತ್ತು ದೇಶದಲ್ಲಿ ಕೆಲವರು ಬೀದಿ ಬಿಕಾರಿಗಳಾಗಿದ್ದಾರೆ. ಇದು ಸಾಮಾಜಿಕ ನ್ಯಾಯವಲ್ಲ, ಇದನ್ನು ಸಾಮಾಜಿಕ ನ್ಯಾಯ ಎಂದು ಕರೆಯುವುದಕ್ಕೆ ನಾನು ತಯಾರಿಲ್ಲ. ಮತ್ತು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಇವೊತ್ತು ಅನ್ ಮ್ಯಾರೀಡ್ ಡಾಟರ್ಸ್ ಇದ್ದರೆ ಅದನ್ನು ಗಣನೆಗೆ ತೆಗೆದುಕೊಳ್ಳುತ್ತೀರಾ ಹೇಗೆ ? ಈಗ ಒಬ್ಬ ತಂದೆಗೆ ಒಬ್ಬಳು ಮಗಳು ಇದ್ದಾರೆ ಆಕೆ ತಾನು ಮದುವೆಯಾಗುವುದಿಲ್ಲ ನಾನು ನಮ್ಮ ತಂದೆತಾಯಿಯನ್ನು ನೋಡಿಕೊಳ್ಳಬೇಕು ಎಂದು ಹೇಳುತ್ತಾಳೆ ; ಆಕೆ ತನ್ನ ತಂದೆತಾಯಿಯ ಜೊತೆಯಲ್ಲಿಯೇ ಇರುತ್ತೇನೆ ಎಂದು ಹೇಳುತ್ತಾಳೆ. ಆಗ ಅವಳಿಗೆ ಸ್ಕೋಪೇ ಇಲ್ಲ.

ಇನ್ನೊಂದು ವಿಷಯ. ಒಬ್ಬ ತಂದೆಗೆ ಒಬ್ಬಳೇ ಮಗಳು ಇರುತ್ತಾಳೆ. ಆಗ ಆಕೆಯ ತಂದೆ ಒಬ್ಬ ಅಳಿಯನನ್ನು ಕರೆದುಕೊಂಡು ಬಂದು ಮಗಳಿಗೆ ಮದುವೆಮಾಡಿ ಮನೆವಾಳತನಕ್ಕೆ ಇಟ್ಟುಕೊಳ್ಳುತ್ತಾನೆ. ಆಗ ಆ ಮನೆವಾಳತನದ ಅಳಿಯ ಮಾವನ ಜಮೀನನ್ನು ಹೊಂದುವುದಕ್ಕೆ ಡೆಫಿನಿಷನ್‌ನಲ್ಲಿ ಅವಕಾಶ ಇದೆಯೇ ? ಆ ತರಹ ಮನೆವಾಳತನಕ್ಕೆ ಅಳಿಯನನ್ನು ಇಟ್ಟುಕೊಳ್ಳುವುದಕ್ಕೆ ಸ್ಕೋಪು ಇದೆಯೇ ? ಮತ್ತು ಆ ರೀತಿ ಮನೆವಾಳತನಕ್ಕೆ ಇಟ್ಟುಕೊಂಡ ಅಳಿಯನಿಗೆ 3—4 ಜನ ಮಕ್ಕಳಾಗುತ್ತಾರೆ. ಆ ಮಕ್ಕಳಿಗೆ ತಮ್ಮ ತಾತನ ಆಸ್ತಿಯನ್ನು ಹೊಂದುವುದಕ್ಕೆ ಹಕ್ಕು ಇದೆಯೇ ಹೇಗೆ ? ಬೇಡ ಎಂದರೆ ಅವರನ್ನು ಓಡಿಸೋಣ. ಶ್ರೀಮಾನ್ ಹುಚ್ಚಮಾಸ್ತಿಗೌಡರ ಹೆಸರು ಆಚಂದ್ರಾರ್ಕವಾಗಿ ಉಳಿಯಲಿ. ಅದಕ್ಕೆ ನನ್ನ ಅಡ್ಡಿಯಿಲ್ಲ. ದಯವಿಟ್ಟು ಈ ಮನೆವಾಳುತನವನ್ನು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬಂದರೆ ಒಳ್ಳೆಯದು. ಈ ಬಗ್ಗೆ ನನಗೆ ಕೋರ್ಟಿನಲ್ಲಿ ವಾದ ಮಾಡಿ ಅನುಭವ ಇಲ್ಲ. ನಾನು ಕಾನೂನು ತಜ್ಞನಲ್ಲ. ಆದ್ದರಿಂದ ನನಗೆ ಪೂರ್ಣ ಮಾಹಿತಿ ಗೊತ್ತಿಲ್ಲ. ಈ ಫ್ಯಾಮಿಲಿ ಡೆಫಿನಿಷನ್‌ನಲ್ಲಿ ಕೆಲವು ತೊಂದರೆಗಳು ಇರುವುದರಿಂದ ಇದರ ಬಗ್ಗೆ ತಾವು ಆಲೋಚನೆ ಮಾಡುವ ಪರಿಸ್ಥಿತಿ ಇದೆ ಎಂದು ನಾನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಇವೊತ್ತು ಇವರು ಕೆಲವು ತಿದ್ದುಪಡಿಗಳನ್ನು ಮಾಡಿದ್ದಾರೆ. ಈ ತಿದ್ದುಪಡಿಗಳ ಬಗ್ಗೆ ಸ್ವಲ್ಪ ಕಟುವಾಗಿ ಮಾತನಾಡಬೇಕಾಗುತ್ತದೆ. ಇದು ಬಹಳ ಪ್ರೋಗ್ರೆಸೀವ್ ಆದ ಕಾನೂನು ಎಂದು ಹೇಳುತ್ತಾರೆ. ಅವರು ಈ ಬಗ್ಗೆ ಬೇಸರ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ. ಭೂಮಾಲೀಕ ಯಾರು ಎಂಬುದನ್ನು ಡೆಫಿನಿಷನ್‌ನಲ್ಲಿ ನೋಡಬೇಕು. ಇದು ಒಂದು ದೊಡ್ಡ ಹೆಸರು, ಯಾರು ಭೂಮಿಯನ್ನು ಇಟ್ಟುಕೊಂಡಿರುತ್ತಾನೆಯೋ ಅವನು ಲ್ಯಾಂಡ್‌ಲಾರ್ಡ್ ಎಂದಾಗುತ್ತದೆ. ಈಗ ಯಾರೋ ಒಬ್ಬ ವಿಧವೆ ಒಂದು ಎಕರೆಯೋ ಅಥವಾ ಅರ್ಧ ಎಕರೆಯೋ ಜಮೀನನ್ನು ಲೀಜಿಗೆ ಕೊಟ್ಟಿರುತ್ತಾಳೆ. ಅಥವಾ ಸೆಕ್ರೆಟೇರಿಯಟ್‌ನಲ್ಲಿರುವ ಒಬ್ಬ ಜವಾನ ಒಂದು ಎಕರೆ ಭೂಮಿಯನ್ನು ಲೀಜಿಗೆ ಕೊಟ್ಟಿರುತ್ತಾನೆ. ಅವನು ಒಬ್ಬ ಲ್ಯಾಂಡ್‌ಲಾರ್ಡೇ ?

" Definition of a landlord is a person who has leased his land to a tenant and includes a person who is entitled to receive the rent from the tenant. "

3-30 P.M.

ಉದಾಹರಣೆಗೆ ಒಬ್ಬಳು ವಿಧವೆ ಒಂದು ಅರ್ಧ ಎಕರೆ ಒಂದು ಎಕರೆ ಲೀಸ್ ಔಟ್ ಮಾಡಿದರೆ ಅವಳು ಸಹ ಲ್ಯಾಂಡ್‌ಲಾರ್ಡ್ ಆಗುತ್ತಾಳೆ. ಮಾನ್ಯ ಬದ್ರಿನಾರಾಯಣ ಐಯ್ಯಂಗಾರ್‌ರವರು ಸಹ ಲ್ಯಾಂಡ್ ಲಾರ್ಡ್.

ಮಾನ್ಯ ಕೃಷ್ಣನ್‌ರವರು ದೇಶದಲ್ಲಿ ನೂರಾರು ವರ್ಷ ಗುತ್ತಿಗೆಗೆ ತೆಗೆದುಕೊಂಡವರ ರಕ್ತವನ್ನು ಕೆಲವು ಜನರು ಹೀರಿದ್ದಾರೆಂದು ವಾದ ಮಾಡುತ್ತಿದ್ದಾರೆ. ಆದರೆ ಅರ್ಧ ಒಂದು ಎಕರೆ ಇಟ್ಟುಕೊಂಡವರನ್ನು ಮತ್ತು 3,000—4,000 ಎಕರೆ ಇಟ್ಟುಕೊಂಡಂಥ ದೇಸಾಯಿ ಮುಂತಾದವರನ್ನು ಲ್ಯಾಂಡ್ ಲಾರ್ಡ್ ಎಂದು ಕರೆದರೆ ಇದಕ್ಕೆ ಏನು ಅರ್ಥ ಇದೆ ? ಆದ್ದರಿಂದ ಇದನ್ನು ಸರಿಯಾಗಿ ಡಿಫೈನ್ ಮಾಡಬೇಕಾಗಿತ್ತು. ಒಂದು ಸಾವಿರದ ಇನ್ನೂರು ರೂಪಾಯಿಗಿಂತ ಕೆಳಗಡೆ ಬರತಕ್ಕವರನ್ನು ಸ್ಮಾಲ್ ಹೋಲ್ಡರ್ಸ್ ಎಂದು ಹೇಳುತ್ತಿದ್ದೀರಿ. ಅದೇ ರೀತಿ ಒಂದೆರಡು ಎಕರೆ ಗುತ್ತಿಗೆಗೆ ಕೊಟ್ಟವರನ್ನು ಸಹ ಸ್ಮಾಲ್ ಲ್ಯಾಂಡ್ ಓನರ್ಸ್ ಎಂದು ಕರೆಯ ಬಹುದಲ್ಲ. ಮಾನ್ಯ ಕೃಷ್ಣನ್‌ರವರ ಆರ್ಗುಮೆಂಟ್ ಯಾವ ರೀತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಹೇಳುವಂತೆ ಒಂದು ಆದರ್ಶ ನಿರ್ಮಾಣ ಆಗುತ್ತದೆ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಕನಸಿನ ಮಾತಾಗುತ್ತದೆ. ಇವತ್ತು ಯಾವುದೇ ಪಾರ್ಟಿಯ ತತ್ವ ಮುಖ್ಯವಲ್ಲ ; ಅದನ್ನು ಅನುಷ್ಠಾನಕ್ಕೆ ತರತಕ್ಕಂತಹ ಮನುಷ್ಯರು ಮತ್ತು ಅದರ ಬಗ್ಗೆ ಪ್ರಾಮಾಣಿಕತೆಯಿಂದ ನಡೆದುಕೊಳ್ಳತಕ್ಕವರ ಮೇಲೆ ಅದು ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲ್ಯಾಂಡ್ ಲಾರ್ಡ್ ಅಂದರೆ ಭೂಮಾಲಿಕ ಎಂದು ಅದು ಒಂದು ಎಕರೆ ಇರಬಹುದು ಅಥವಾ 10 ಸಾವಿರ ಎಕರೆ ಇರಬಹುದು. ಆತ ಭೂಮಿಗೆ ಅಂಟಿಕೊಂಡಿರತಕ್ಕವನು ಎಂದು ಅರ್ಥ.

ಶ್ರೀ ಎಚ್. ಡಿ. ದೇವೇಗೌಡ.—ಈ ಒಂದು ದೆಸೆಯಲ್ಲಿ ಕ್ಲೈಫರ್ಕೇಶನ್ ಮಾಡಬೇಕಾದ ಅವಶ್ಯಕತೆ ಇದೆಯೋ ಎಂದು ನಾನು ಕೇಳುತ್ತೇನೆ.

ನಾನು ಈ ವಿಷಯ ಏಕೆ ಹೇಳುತ್ತಿದ್ದೇನೆಂದರೆ, ತಾವು ಏನೊಂದು ತಾವು ಇವತ್ತು ಸೆಕ್ಷನ್ 14ನ್ನು ಡಿಲಿಟ್ ಮಾಡಿದ್ದೀರಿ. ಇದರ ಬಗ್ಗೆ ತಮ್ಮ ಆಫೀಸಿನಿಂದ ಒಂದು ಇನ್‌ಫಾರ್ಮೇಶನ್ ತರಿಸಬೇಕೆಂದು ಪ್ರಯತ್ನ ಮಾಡಿದೆ. ನಮ್ಮ ಲೆಜಿಸ್ಲೇಚರ್ ಸೆಕ್ರೆಟರಿ ಮುಖಾಂತರ ರೆವಿನ್ಯೂ ಸೆಕ್ರೆಟರಿಗೆ ಒಂದು ಪತ್ರ ಬರೆದು ಇನ್ ಫಾರ್ಮೇಶನ್ ತರಿಸಬೇಕೆಂದು ಪ್ರಯತ್ನ ಮಾಡಿದೆ. ಆದರೆ ಅವರಿಂದ ಉತ್ತರ ಹೀಗೆ ಬಂತು. :

"This information is not readily available. Collection of this information from the Munsiff Courts will take much time."

ಆದರೆ ಈ 60 ಸಾವಿರ ಅಪ್ಲಿಕೇಶನೊಳಗೆ ಎಷ್ಟು ಡಿಸ್ಪೋಸ್ ಮಾಡಿದ್ದೀರಿ ; ಇದರೊಳಗೆ ಸ್ಮಾಲ್ ಹೋಲ್ಡರ್ ಎಷ್ಟು ಜನ ಇದ್ದಾರೆಂದು ಲೆಕ್ಕ ಇದೆಯೇ ? ಆ ಮೇಲೆ 20 ಸಾವಿರ ಟೆನೆಂಟ್‌ಗಳಲ್ಲಿ ಸಣ್ಣ ಟೆನೆಂಟುಗಳು ಎಷ್ಟು ಜನ ಇದ್ದಾರೆ ಎಂಬುದನ್ನು ತಿಳಿಸಿರಿ ಎಂದು ಕೇಳಿದರೆ ಆವಿಚಾರ ಕಲೆಕ್ಟ್ ಮಾಡುವುದಕ್ಕೆ ಕಷ್ಟ ಇದೆಯೆಂದು ಹೇಳುತ್ತಿದ್ದಾರೆ. ತಮ್ಮ ದೃಷ್ಟಿಕೋನದಲ್ಲಿ ಎಷ್ಟೋ ವರ್ಷಗಳಿಂದ ಗುತ್ತಿಗೆ ಮಾಡಿಸಿಕೊಂಡು ಜೀವನ ನಡೆಸಿಕೊಂಡು ಬರುತ್ತಿದ್ದವನಿಗೆ ಮನಸ್ಸಿಗೆ ಸಂತೋಷ ಉಂಟಾಗುವರೀತಿಯಲ್ಲಿ ಮಾಡಬೇಕೆಂದಿದ್ದರೆ, ಆತನಿಗೆ ಜಮೀನು ತನ್ನದು ಎಂದು ಹೇಳಿಕೊಳ್ಳುವ ರೀತಿಯಲ್ಲಿ ಮಾಡಬೇಕು. ಆ ರೀತಿಯ ವ್ಯವಸ್ಥೆಯನ್ನು ತಾವು ಮಾಡಿದರೆ ಆತನಿಗೆ ಒಂದು ಸಮಾಧಾನ ಬರುತ್ತದೆ. ಆದರೆ ಯಾರು ಇದರಿಂದಲೇ ಬರತಕ್ಕ ವರಮಾನದಿಂದ ಜೀವನ ಮಾಡುತ್ತಿದ್ದಾರೋ, ಅಂಥವರ ಲೆಕ್ಕವನ್ನು ಸಹ ತಾವು ಮಾಡಬೇಕು. ಅರ್ಧ ಅಥವಾ ಮುಕ್ಕಾಲು ಎಕರೆ ಇಟ್ಟುಕೊಂಡಿರತಕ್ಕಂಥವರ ಅಂಕಿ ಅಂಶಗಳನ್ನು ಸಹ ತಾವು ಸಂಗ್ರಹಣೆ ಮಾಡಬೇಕಾಗಿತ್ತು. ಇಲ್ಲದಿದ್ದರೆ ಇಂಥವರ ಪರಿಸ್ಥಿತಿ ಏನಾಗುತ್ತದೆ ? ಪುನಃ ನೀವು ಅವರನ್ನು ದಾರಿಯಲ್ಲಿ ಹಾಕಿ ಭಿಕ್ಷುಕ ರನ್ನಾಗಿ ಮಾಡುತ್ತಿದ್ದೀರಿ. ನೀವು ಒಂದು ಕಡೆ ಆದರ್ಶ ಸಮಾಜ ನಿರ್ಮಾಣ ಮಾಡುತ್ತೇವೆಂದು ಹೇಳಿಕೊಂಡು ಇನ್ನೊಂದು ಕಡೆ ಇನ್ನೊಂದು ಹೊಸ ವರ್ಗವನ್ನು ನಿರ್ಮಾಣ ಮಾಡುತ್ತಿದ್ದೀರಿ. ಬಹುಶಃ ತಾವು ಇದನ್ನು ತಾತ್ವಿಕವಾಗಿ ಒಪ್ಪುವುದಿಲ್ಲವೆಂದು ತಿಳಿಯುತ್ತೇನೆ. ಸೆಕ್ಷನ್ 14ನ್ನು ಕಿತ್ತು ಹಾಕಿ ಇನ್ನೊಂದು ವರ್ಗವನ್ನು ಸೃಷ್ಟಿ ಮಾಡುತ್ತಿದ್ದೀರಿ. ಇದು ಯಾವ ನ್ಯಾಯ ?

ಶ್ರೀ ಕಾಗೋಡು ತಿಮ್ಮಪ್ಪ.—ಇದಕ್ಕೆ ಯಾವುದು ಪರಿಹಾರ ಎಂಬುದನ್ನು ಸೂಚಿಸಿ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದಿನ ಆಕ್ಟ್‌ನಲ್ಲಿ ಮೈನರ್‌ಗಳಿಗೆ ಲೀಸ್ ಮಾಡುವುದಕ್ಕೆ ಅವಕಾಶ ಇದೆ. 61ನೇ ಆಕ್ಟಿನಲ್ಲಿ ವಿಡೋಸ್‌ಗೆ ಲೀಸ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈಗ ನಿಮ್ಮ ಆಕ್ಟ್ ಪ್ರಕಾರ ಹಾಗೂ ನಿಮ್ಮ ಕಾನೂನು ಪ್ರಕಾರ ಮಾಡಿದರೆ ಅದೂ ಕೂಡ ತಪ್ಪಾಗುತ್ತದಲ್ಲವೇ ? When you remove section 14 according to the existing law, this is a blunder that is committed by the person concerned. ಅದನ್ನು ಯಾರೇ ಮಾಡಲಿ, ಸರ್ಕಾರದ ಪರವಾಗಿ ಮಾತನಾಡಿ. ಇವತ್ತು ಅವರ ಸ್ಥಿತಿ ಏನೆಂಬುದನ್ನು ಯೋಚನೆ ಮಾಡಬೇಕು.

ಇನ್ನು ಸೆಕ್ಷನ್ 8ಕ್ಕೆ ಬಂದರೆ ನೀವು ಕೊಡತಕ್ಕ ರೆಂಟ್ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಬಿಗ್ ಲ್ಯಾಂಡ್‌ಲಾರ್ಡ್‌ನಿಂದ ಒಂದು ಸಾವಿರ, ಎರಡು ಸಾವಿರ ಎಕರೆಯಷ್ಟು ಕಂಪನ್ಸೇಷನ್ ಕೊಡದೆ ತೆಗೆದು ಕೊಳ್ಳುತ್ತಾರೆ. ಅಂಥಾದ್ದರಲ್ಲಿ ನೀವು ಸಮಾಜವಾದವನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿದ್ದೇವೆಂದು ಹೇಳಿದರೆ ಹೇಗೆ ? ನಾನು ನನ್ನ ಮುಂದೆ ಇರತಕ್ಕ ನತದೃಷ್ಟ ಜನರ ಬಗ್ಗೆ ಹೇಳುತ್ತಿದ್ದೇನೆ. ಅದರಲ್ಲಿ ಒಂದು ವಾಕ್ಯವನ್ನು ಹೇಳಿದೆ. ಅದು ಈ ರೀತಿ ಇದೆ.

"Rent payable in respect of any land by the tenant shall be paid annually and such rent shall be ten times the land revenue." ಕೋಲಾರದಲ್ಲಿ ಖುಷ್ಕಿ ಬೆಳೆಗೆ ಕಂದಾಯ 2 ರೂಪಾಯಿ. ನಮ್ಮ ಕಡೆ ಮ್ಯಾಗ್ಜಿಮಂ 12 ಆಣೆ ಅಥವಾ ಒಂದೂವರೆ ರೂಪಾಯಿ.

ಶ್ರೀ ಬಿ. ವಿ. ಕಕ್ಕಿಲಾಯ.—ರೈನ್‌ಫೆಡ್ ವೆಟ್‌ಲ್ಯಾಂಡ್ ಎಕರೆಗೆ 9 ರೂಪಾಯಿ ಇದೆ. ಟೆನೆನ್ಸಿ ಇರುವುದೇ ಆ ಕಡೆ.

ಶ್ರೀ ಎಚ್. ಡಿ. ದೇವೇಗೌಡ.—ನಮ್ಮಲ್ಲಿ 12 ಆಣೆ ಇದೆ. 100 ಎಕರೆ ಖುಷ್ಕಿ ಜಮೀನು ಗುತ್ತಿಗೆ ಕೊಟ್ಟಿದ್ದಾರೆ. ಕಂಪನ್ಸೇಷನ್ ಕೊಡುವಾಗ For the purpose of calculating the compensation 20 times for the small-holders = 20 × $7\frac{1}{2}$ = 140. ಅವರು ಇವತ್ತು ಅದರಿಂದ ಜೀವನ ಮಾಡುವುದಕ್ಕಾಗುವುದಿಲ್ಲವೆಂಬುದನ್ನು ಒಪ್ಪಿಕೊಳ್ಳೋಣ. ಇದನ್ನು ಒಂದು ಪ್ರೋಗ್ರೆಸೀವ್ ಐಡಿಯಾಲಜಿ ಮೇಲೆ ಹೇಳುವುದಾದರೆ ಅದಕ್ಕೆ ನನ್ನ ಅಭ್ಯಂತರವೇನಿಲ್ಲ. ಅದನ್ನು ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಶ್ರೀ ಕಕ್ಕಿಲಾಯ ಅವರು ಒಪ್ಪಿಕೊಳ್ಳಬೇಕಾಗಿದೆ. ಈಗ $7\frac{1}{2}$, 8, 10ರಷ್ಟು ಕಂಪೆನ್ಸೇಷನ್ ಡಿಕ್ಲೇರ್ ಮಾಡುವುದಾದರೆ ಅವರ ಪರಿಸ್ಥಿತಿ ಏನಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಸಮಾಜದಲ್ಲಿ ಅವರು ನಿಂತು ಹೇಗೆ ಜೀವನ ಮಾಡಬೇಕು ? ಇದರಲ್ಲಿ ಯಾರೋ ಇಂತಹ ಒಂದು ನತದೃಷ್ಟ ಚುನಾವಣೆಗಳಿಂದ ಶಿಕ್ಷೆಗೆ ಗುರಿಯಾಗಬೇಕಾಗಿದೆ. ಇದರಲ್ಲಿ ಇನ್ನೊಂದು ಹೆಜ್ಜೆ ಮುಂದೆ ಹೋಗಿದ್ದೀರಿ. ಹಿಂದೆ ಎಕ್ಸೈಜು ರೆಂಟ್ ಕೊಟ್ಟಿದ್ದರೂ ಅದನ್ನು ರಿಕವರಿ ಮಾಡಬೇಕೆಂದು ಹೇಳಿದ್ದೀರಿ. 1961ನೇ ಆಕ್ಟ್‌ನಲ್ಲಿ ರೆಂಟ್ ಏನಿತ್ತು ಅದನ್ನು ನೋಡಬೇಕು. ಸೆಕ್ಷನ್ 8ರಲ್ಲಿ ಈ ರೀತಿ ಹೇಳಿದೆ.

"Such rent shall not exceed one-fourth of the gross produce" To-day, you are saying ten times the land revenue. ಸ್ಮಾಲ್ ಹೋಲ್ಡರ್ಸ್ ಅದನ್ನು ವಾಪಸ್ಸು ಕೊಡಬೇಕೆಂದು ಹೇಳುತ್ತೀರಿ. ಈ ಆಕ್ಟ್ ಯಾವತ್ತಿನಿಂದ ಜಾರಿಗೆ ಬರುತ್ತದೆ. Supposing one-fourth gross produce is in excess of the 10 times the land Revenne, now he must refund that.

ಶ್ರೀ ಬಿ. ವಿ. ಕಕ್ಕಿಲಾಯ.—ಈ ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟ್ ಏನಿದೆಯೋ ಅದು ಗ್ರಾಸ್ ಈಲ್ಡ್‌ನ ಸೇಕಡ 4ರಷ್ಟು ಎಂಬುದಾಗಿ ರೆವಿನ್ಯೂ ಡಿಪಾರ್ಟ್‌ಮೆಂಟಿನವರ ಲೆಕ್ಕ. ಲ್ಯಾಂಡ್ ರೆವಿನ್ಯೂವಿನ 10ರಷ್ಟು ಅಂದರೆ, ಸೇಕಡ 40ರಷ್ಟು ಆಯಿತು. 1961ನೇ ಆಕ್ಟ್ ಪ್ರಕಾರ 4 per cent of the gross yield is assessment. Ten times that comes to 40 per cent. The rent as per 1961 Act was one-fourth or one-fifth is 25 per cent or 20 per cent. ಇದು ಹೀಗೆಯೇ ಕಡಿಮೆಯಾಗುತ್ತದೆಂದು ಹೇಳುತ್ತೇನೆ.

Sri H. D. DEVE GOWDA.—You are calculating compensation of the basis of the present amended Act. You are not calculating on the basis of 1961 Act.

The present Act says 10 times the land revenue. If it is wrong, kindly clarify.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಶ್ರೀ ಕಕ್ಕಿಲಾಯ ಅವರು ಹೇಳಿದ್ದು, ಭೂ ಕಂದಾಯವನ್ನು ಗೊತ್ತುಮಾಡುವುದು. ಭೂಮಿ ವರಮಾನದ 4ರಷ್ಟು ಕಂದಾಯವೆಂದು ರೆವಿನ್ಯೂ ಲೆಕ್ಕ ಇರತಕ್ಕದ್ದು. ಆ ರೀತಿ ಕಂದಾಯ ದಾಖಲು ಮಾಡಿರುವುದು. ಅದರ 10ರಷ್ಟು ಎಂದು ಹೇಳಿದರೆ ಒಟ್ಟು ವರಮಾನದ ಶೇಕಡ 40ರಷ್ಟು ಗೇಣಿ ಆಯಿತು. ಈಗ ಇದ್ದಂತೆ ಕಾನೂನು ಪ್ರಕಾರ ಒಟ್ಟು ಉತ್ಪತ್ತಿಯ ಕಾಲು

ಭಾಗ ಅಥವಾ ಐದನೆಯ ಒಂದು ಭಾಗ ಎಂಬುದಾಗಿ ಇದೆ. ಅಂದರೆ ಅದು 20 ಅಥವಾ 25ರಷ್ಟು ಆಯಿತು. ಅದಕ್ಕಿಂತ ಈಗ ಕಂದಾಯ ಮತ್ತು ರೆಂಟ್ ಗೊತ್ತುಮಾಡಿರುವುದು ಇನ್ನೂ ಸ್ವಲ್ಪ ಜಾಸ್ತಿಯಾಗುತ್ತದೆ. ಆ ವಿಷಯದಲ್ಲಿ ಲೆಕ್ಕಾಚಾರ ಹಾಕಿ ರೆಂಟ್ ಎಷ್ಟಾಗುತ್ತದೆ. ಕಂಪನ್ಸೇಷನ್ ಎಷ್ಟು ಜಾಸ್ತಿಯಾಗುತ್ತದೆಂಬುದು ಮಾನ್ಯ ಶ್ರೀ ಕಕ್ಕಿಲಾಯ ಅವರ ವಾದ.

ಶ್ರೀ ಎಚ್. ಡಿ. ದೇವೇಗೌಡ.—ಭೂಕಂದಾಯ ಈಗಾಗಲೇ ನಿರ್ಣಯ ಮಾಡಿದ್ದೀರಿ. ನಿಮ್ಮ ಫೀಲ್ಡ್ ಬಹುಶಃ ಕಾರ್ಮಿಕವರ್ಗದ್ದು ಇರಬೇಕು. ಕಂದಾಯ ಫಿಕ್ಸ್ ಮಾಡಿದ್ದು. ಸರ್ವೆ ರಿ-ಕ್ಲಾಸಿಫಿಕೇಷನ್ ಯಾವ ರೀತಿ ನಡೆದಿದೆಯೆಂಬುದು ನನಗೆ ಗೊತ್ತಿದೆ. ಕಂದಾಯ ಹೇಗೆ ಫಿಕ್ಸ್ ಮಾಡಿದ್ದಾರೆ ಎಂಬುದು ಅವರಿಗೂ ಗೊತ್ತಿದೆ. ನನಗೂ ಗೊತ್ತಿದೆ. ಅದನ್ನು ಈ ಸದನದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಆದರೆ ಇವತ್ತು ಏನಾಗಿದೆ ಅಂದರೆ. 1961ನೇ ಆಕ್ಟ್ ಪ್ರಕಾರ if excess rent has been collected, he must shell down according to the present amendment Bill. ಅವರಿಗೆ ಕೊಡುವ ಕಂಪೆನ್ಸೇಷನ್ನಿನಲ್ಲಿ ರೀಫಂಡ್ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ, ಅದನ್ನು ಅದರಲ್ಲಿ ಕಳೆದು ಕಂಪನ್ಸೇಷನ್ ಕೊಡುವುದಕ್ಕೆ ಪ್ರಾವಿಷನ್ ಮಾಡಿರುವುದರ ಅರ್ಥವೇನೆಂದರೆ 61ನೇ ಇಸವಿಯಲ್ಲಿರ ತಕ್ಕ ಆಕ್ಟ್‌ನ ಪ್ರಕಾರ ರೆಂಟ್ ಕಲೆಕ್ಟ್ ಮಾಡುವುದು ಏನಿದೆಯೋ ಅದನ್ನು 1971ನೇ ಇಸವಿಯಲ್ಲಿ ತಂದಿರುವ ತಿದ್ದುಪಡಿಗಳೊಂದಿಗೆ ಹೋಲಿಸಿ ಪರಾಂಬರಿಸಿ ನೋಡಿದರೆ, ರೆಂಟ್ ಜಾಸ್ತಿಯಾಗಿದೆಯೆಂಬ ಭಾವನೆ ಬಂದಿರುತ್ತದೆ. ಟೆನೆಂಟ್ ಅದನ್ನು ವಾಪಸ್ಸು ಕೊಡಬೇಕಾಗುತ್ತದೆ. ಭೂಮಾಲೀಕನೂ ಸಹ ಆ ಪೀರಿಯಡ್ಡಿಗೆ ಆಗಿರುವಷ್ಟು ಕಂಪನ್ಸೇಷನ್‌ನನ್ನು ವಜಾ ಮಾಡಿಕೊಂಡು ಕೊಡಬೇಕಾಗುತ್ತದೆ.

ಶ್ರೀ ಹುಚ್ಚಮಾಸ್ತಿಗೌಡ.—ಈಗ ಇರತಕ್ಕ ಕಾನೂನಿಗೆ ಮೀರಿ ಗೇಣಿ ವಸೂಲಾಗಿದ್ದರೆ ಅದು ವಾಸ್ತವವೇ ?

ಶ್ರೀ ಎಚ್. ಡಿ. ದೇವೇಗೌಡ.—ಈಗಾಗಲೇ 1971ನೇ ಇಸವಿಯಲ್ಲಿ ಒಂದು ತೀರ್ಮಾನವಾಗಿದೆ. ಇನ್ನು 1973ನೇ ಇಸವಿಯಲ್ಲಿ ಒಂದು ತೀರ್ಮಾನಕ್ಕೆ ಬರುತ್ತದೆ. ಅಂದಮೇಲೆ 1961ನೇ ಇಸವಿಯಲ್ಲಿ ಈ ವಿಷಯಗಳು ಏನು ಗೊತ್ತಿರುತ್ತದೆ ? Who was able to infer that such an Act is going to come in 1973 ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಗಲ್ಲ. ಕಾನೂನು ಪ್ರಕಾರ ಅದನ್ನು ವಸೂಲು ಮಾಡಿಕೊಂಡಿದ್ದರೆ ಪುನಃ ಕಾನೂನು ಪ್ರಕಾರ ಅದನ್ನು ವಾಪಸ್ಸು ಕೊಡುವುದು ಧರ್ಮ.

ಶ್ರೀ ಎಚ್. ಡಿ. ದೇವೇಗೌಡ.—ಆಮೇಲೆ ಇನ್ನೊಂದು-ಈ ಸ್ಮಾಲ್‌ಲ್ಯಾಂಡ್ ಹೋಲ್ಡರುಗಳು ಇವರನ್ನು ಆ ಶ್ರೀ ಗೋಪಾಲಗೌಡರ ಭಾಷೆಯಲ್ಲಿ ಹೇಳಬೇಕಾದರೆ-ಇವರೂ ಕೂಡ ಭೂಸ್ವಾಮಿಗಳೇ. ಇವರು ತಮ್ಮ ಭೂಮಿಯನ್ನು ಅಂದರೆ-ಒಂದು ಎಕರೆ ಅಥವಾ ಅರ್ಧ ಎಕರೆ ಇರತಕ್ಕ ಭೂಮಿಯನ್ನು ಗೇಣಿಗೆ ಕೊಟ್ಟಿದ್ದರೆ- ಆ ಗೇಣೀದಾರ 10 ವರ್ಷಗಳ ಗೇಣಿಯನ್ನು ಇನ್ನೂ ಪಾವತಿ ಮಾಡದಿದ್ದರೆ ಅವನು ಏನು ಮಾಡಬೇಕು ? ಕೇಸ್ ಹಾಕಲೆಬೇಕು ? ಡಿಕ್ರಿ ಪಡೆಯಬೇಕು. ಅದಕ್ಕೆ ಹಣವನ್ನು ಅವನು ಎಲ್ಲಿಂದ ತರಬೇಕು ? ಇದೆಲ್ಲಕ್ಕಿಂತ ಈ ಮಸೂದೆಯಲ್ಲಿ ಅಂಥ ಸಣ್ಣ ಭೂಮಾಲಿಕನಿಗೆ ಏನಾದರೂ ಗುತ್ತಿಗೆ ಬಗ್ಗೆ ಬಾಕಿ ಬರಬೇಕಾದ್ದರೆ ಅವನಿಗೆ ತಿರುಪತಿನಾಮ-ಎಂದು ಏಕೆ ಒಂದು ಕಲಮನ್ನು ಇದರಲ್ಲೇ ಅಡಕಮಾಡಬಾರದು ? ಅವನಿಗೆ ಬರತಕ್ಕ ಏನೇ ಹಳೇ ಬಾಕಿ ಇದ್ದರೂ ಆದಕ್ಕೆಲ್ಲಾ ನೋಡು ಚೀಟಿ ಕೊಟ್ಟಂತೆ ಎಂದು ಹೇಳಿದರೆ ಎಲ್ಲ ಸರಿ ಯೋಗುತ್ತದೆ. ಈ ಆಕ್ಟಿನಲ್ಲೇ ಹಾಗೆ ಒಂದು ಕ್ಲಾಜನ್ನು ಅಡಕಮಾಡಿ ದರೆ ಚೆನ್ನಾಗಿರುತ್ತೆಂದು ನಾನು ಹೇಳುತ್ತೇನೆ. ನಾನು ಹೇಳುತ್ತಿರುವುದು ಇಂಥ ಸಣ್ಣ ಭೂ ಹಿಡುವಳೀದಾರರ ವಿಷಯದಲ್ಲಾದರೂ ಸರ್ಕಾರದವರು ಒಂದು ಅವರು ಹೇಳುತ್ತಿರುವ ಆ ಸಮತಾವಾದ ಸಮಾಜ ನಿರ್ಮಾಣ ಏನಿದೆ ಅದರ ದೃಷ್ಟಿಯಲ್ಲೇ ಇವರನ್ನೂ ಏಕೆ ನೋಡಬಾರದು ಎಂದು ಇಲ್ಲವಾದರೆ ಸರ್ಕಾರದವರು ದೇಶದಲ್ಲಿ ಒಂದು ವರ್ಗದ ಬಡತನವನ್ನು ತಪ್ಪಿಸುವುದರಲ್ಲಿ ಅನೇಕ ಜನ ಬಡವರನ್ನು ಉತ್ಪತ್ತಿಮಾಡುವುದು ಸರಿಯೇ ಎಂದು ಕೇಳುತ್ತೇನೆ ? ಇಂದಿನ ಇವರ ನೀತಿ ಸಮಾಜದಲ್ಲಿ ಹೊಟ್ಟೆಗಿಲ್ಲದವರ ಸಂಖ್ಯೆಯನ್ನು ಬಲಪಡಿಸಬೇಕೆಂದು ಇದ್ದರೆ ಅದರ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಕ್ಲಾಜ್ (5) ರಲ್ಲಿ ಮುಂದೆ ಯಾರು ಭೂಮಿಯನ್ನು ಗೇಣಿಗೆ ಕೊಡಬಾರದೆಂದು ಹೇಳಿದ್ದಾರೆ. ಈ ದಿವಸ ಭೂಮಿ ಇಟ್ಟುಕೊಂಡು ಸ್ವಂತವಾಗಿ ವ್ಯವಸಾಯ ಮಾಡತಕ್ಕ ಒಂದು ಸಂಸಾರದಲ್ಲಿ ಇದ್ದ ಒಬ್ಬ ಗಂಡಸು ಸತ್ತುಹೋದರೆ ಆತನ ಹೆಂಡತಿ ಹೆಗಲ ಮೇಲೆ ಮಡಕೆಯನ್ನು ಹೊತ್ತು ವ್ಯವಸಾಯ ಮಾಡಬೇಕು-

ಇಲ್ಲವೇ ಕೂಲಿಕೊಟ್ಟು ಆಕೆ ವ್ಯವಸಾಯ ಮಾಡಿಸಲಿ ಎಂದು ಸರ್ಕಾರದವರು ಹೇಳಬಹುದು. ಇದರ ಜೊತೆಗೆ ಆ ಗಂಡ ಮತ್ತು ಹೆಂಡತಿ ಇಬ್ಬರೂ ಸತ್ತರೆ ಆ ಮೈನರ್ ಮಕ್ಕಳು ಏನು ಮಾಡಬೇಕು ? ಇಲ್ಲ ಯಾರಾದರೂ ಮೈನರ್ ಗಾರ್ಡಿಯನ್ನರಿರುತ್ತಾರೆ ಅನ್ನಬಹುದು. ಅವರು ಎಷ್ಟೋ ಸಂದರ್ಭಗಳಲ್ಲಿ ಸ್ವತ್ತನ್ನೇ ಲಪಟಾಯಿಸಿರತಕ್ಕ ನಿದರ್ಶನಗಳ ಬಹಳ ಇವೆ. ನಾವು ಇಲ್ಲಿ ಒಬ್ಬ ನಾಲ್ಕನೇ ದರ್ಜೆ ನೌಕರ ಸತ್ತರೆ ಆತನ ಹೆಂಡತಿಗೆ ಫ್ಯಾಮಿಲಿ ಪೆನ್‌ಷನ್ ಆತನ ಮಕ್ಕಳಿಗೆ ವಿದ್ಯಾ ಸೌಕರ್ಯ ಇವೆಲ್ಲಾ ಕೊಡುತ್ತಿದೇವೆ. ಆದರೆ ಇದೇ ದೃಷ್ಟಿ ಆ ರೈತಾಪಿ ವರ್ಗದವರ ಬಗ್ಗೆ ಇಲ್ಲ. ಅವರು ಈ ದಿವಸ ಸತ್ತರೆ ಹೋಗಲಿ ಬಿಡ ಸತ್ತರೆ ಸಾಯುತ್ತಾನೆ ಎನ್ನತಕ್ಕ ಭಾವನೆ ಸಮಾಜದಲ್ಲಿ ಬರಬಾರದು. ನಾವು ಕೆಲವರಿಗೆ ಓಲ್ಡೇಜ್ ಪೆನ್‌ಷನ್ ಕೊಡುತ್ತಿದೇವೆ. ಯಾವಾಗ ? 70 ವರ್ಷ ವಯಸ್ಸಾದ ಮೇಲೆ ಈ ರೈತಾಪಿ ವರ್ಗದಲ್ಲಿರತಕ್ಕವರಿಗೂ ಇಂಥ ಒಂದು ಸೌಕರ್ಯಮಾಡಿದ್ದರೆ ಈ ಸರ್ಕಾರಕ್ಕೆ ನಾನು ಶಹಭಾಸ್‌ಗಿರಿಯನ್ನು ಕೊಡುತ್ತಿದ್ದೆ. ಡಿಸ್‌ಎಬಲ್ಡ್ ಪರ್ಸನ್ಸ್‌ಗೆ ಗೇಣಿಗೆ ಕೊಡಲು ಅವಕಾಶವಿಲ್ಲ, ಅವರು ಲೀಜ್ ಮಾಡುವಂತಿಲ್ಲ. ಉಳುವವರೇ ಹೊಲದ ಒಡೆಯರಾಗಬೇಕೆಂಬುದು ಇರುವ ತತ್ವ. ಹಾಗಾದರೆ ಹೆಂಡತಿಗೆ ಲಕ್ವ ಹೊಡೆದಿದ್ದರೆ ಆಗೇನು ಮಾಡಬೇಕು ? ಅಂಥವರಿಗೆ ಸ್ವಲ್ಪ ಅವಕಾಶ ಕೊಡಬೇಕು. ಇದರಿಂದ ದೊಡ್ಡ ಸಾಧನೆ ಮಾಡುತ್ತೇವೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇದನ್ನು ಲಘುವಾಗಿ ಹೇಳುತ್ತಿಲ್ಲ. ಟೆನೆಂಟ್ ಸತ್ತರೆ ಅವರ ಮೈನರ್ ಮಗನಿಗೆ ಹಕ್ಕಿರುವುದು. ಆ ಮೈನರ್ ಮಗ ಸ್ವತಃ ಸಾಗುವಳಿ ಮಾಡುವುದಕ್ಕಾಗುವುದಿಲ್ಲ, ಇಂದು ಟೆನೆಂಟಿಗೆ ಹಕ್ಕು ಕೊಡುತ್ತಿದ್ದಾರೆ. 57 ನೆಯ ಸೆಕ್ಷನ್‌ನಲ್ಲಿ ಇದನ್ನು ಹೇಳಿದೆ. ಅದೇ ಲ್ಯಾಂಡ್‌ಲಾರ್ಡಿನ ಮಗ ಮೈನರ್ ಆಗಿದ ರೆ ಅವನಿಗೆ ಅವಕಾಶವಿಲ್ಲ....ಹೇಗಿದೆ ನಿಮ್ಮ ಸಾಮಾಜಿಕ ನ್ಯಾಯ ? ಟೆನೆಂಟ್ ಮಗ ಮೆಜಾರಿಟಿಗೆ ಬಂದು ವರ್ಷದಮೇಲೆ ಅಪ್ಲಿಕೇಷನ್ ಹಾಕಿ ಆಕ್ಯುಪೆನ್ಸಿ ರೈಟ್ ಪಡೆಯಬೇಕು. ಅಲ್ಲಿಯವರೆಗೆ ಮೈನರ್ ಮಗ ಟೆನೆಂಟಾಗಿ ಏನು ಮಾಡಬಲ್ಲ ? ಆ ಜಮೀನನ್ನು ವ್ಯವಸಾಯ ಮಾಡದೆ ಬಿಡುವಿರಾ ? ಮೈನರ್ ಮಗ ವ್ಯವಸಾಯ ಮಾಡದೆ ಹಾಗೆಯೇ ಬಿಡಬೇಕೇ ? ಎರಡು ವರ್ಷ ವ್ಯವಸಾಯಮಾಡದೆ ಬಿಟ್ಟರೆ ತಾಸಿಲ್ದಾರರು ಜಮೀನನ್ನು ವಾಪಸು ಪಡೆಯುವರು. ಮೈನರ್ಸ್, ವಿಡೋಸ್ ಮತ್ತು ಡಿಸ್‌ಎಬಲ್ಡ್ ಪರ್ಸನ್ಸ್ ಬಗ್ಗೆ ರೀಕನ್‌ಸಿಡರ್ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆಮಾಡುತ್ತೇನೆ. ನಾನು ಹೇಳಬೇಕಾದ್ದನ್ನು ಸ್ಪಷ್ಟವಾಗಿ ಹೇಳಿದ್ದೇನೆ. ತೀರ್ಮಾನಮಾಡುವಾಗ ಅವರವರ ದೃಷ್ಟಿಕೋನದಿಂದ ಸರಿಯಾಗಿ ಕಾಣಬಹುದು. ಇಂದು ಒಂದು ವರ್ಗಕ್ಕೆ ರಿಲೀಫ್ ಕೊಡುವಾಗ ಮತ್ತೊಂದು ವರ್ಗಕ್ಕೆ ಅತೃಪ್ತಿಯಾಗ ಯಾಗಬಹುದು.

4-00 ಪಿ.ಎಮ್.

ಶ್ರೀ ಪಿ. ಸಿ. ಶೆಟ್ಟರ್.—ಮೈನರ್ ಮಾಲೀಕ ಮತ್ತು ಮೈನರ್ ಟೆನೆಂಟ್ ವಿಚಾರ ನೋಡಿದರೆ ಡಿಸ್‌ಕ್ರಿಮಿನೇಷನ್ ಮಾಡಿರುವಂತೆ ತೋರುವುದು ಎಂದುಬ ರೀತಿಯಲ್ಲಿ ಹೇಳಿದರು. ಇದು ಸಭೆಯನ್ನು ತಪ್ಪುದಾರಿಗೆ ಎಳೆಯುವುದು. ಮೈನರ್ ಓನರ್ ಯಾವರೀತಿ ಸಾಗುಮಾಡಬೇಕು ಎಂಬುದು ಪರ್ಸನಲ್ ಕಲ್ಟಿವೇಷನ್‌ಗೆ ಸಂಬಂಧಪಟ್ಟ ಕ್ಲಾಸ್‌ನಲ್ಲಿ ನಮೂದಾಗಿದೆ. ರೈತಾಪಿ ಹಕ್ಕನ್ನು ಬೇರೆಯವರಿಗೆ ಕೊಟ್ಟು ಸಾಗುವಳಿ ಮಾಡಿಸಲು ಸಾಧ್ಯವೇ ? ಮೈನರ್ ಟೆನೆಂಟ್ ಹೈರ್ಡ್ ಲೇಬರ್‌ನಿಂದ ಸಾಗು ಮಾಡಿಸಬಹುದು.

ಶ್ರೀ ಎಚ್. ಡಿ. ದೇವೇಗೌಡ.—ನಾನು ಅದನ್ನೇ ಹೇಳಿದೆ, ಅವರು ಅರ್ಥಮಾಡಿಕೊಂಡಿಲ್ಲ.

ಶ್ರೀ ಪಿ. ಸಿ. ಸೆಟ್ಟರ್.—ಒಂದು ವೇಳೆ ಮೈನರ್ ಟೆನೆಂಟ್ ಐದು ವರ್ಷದ ಹುಡುಗನಾಗಿದ್ದು ವ್ಯವಸಾಯ ಮಾಡುವುದಕ್ಕೆ ಆಗದಿದ್ದರೆ ಭೂಮಿಯನ್ನು ಪಾಳು ಬಿಡಬೇಕೇ ?

ಶ್ರೀ ಎಚ್. ಡಿ. ದೇವೇಗೌಡ.—ಅವನು ಬೇರೆಯವರನ್ನಿಟ್ಟುಕೊಂಡು ಸಾಗುವಳಿ ಮಾಡಿದರೆ ಅದು ಪರ್ಸನಲ್ ಕಲ್ಟಿವೇಷನ್ ಆಗುತ್ತದೆಯೇ ? 5 ವರ್ಷದ ಹುಡುಗ ವ್ಯವಸಾಯ ಮಾಡಲು ಸಾಧ್ಯವಿದೆಯೇ ? ಅವನಿಗೆ ಗಾರ್ಡಿಯನ್ ಇಲ್ಲದಿದ್ದರೆ ಏನು ಮಾಡಬೇಕು ? ಆ ಸಣ್ಣ ಹುಡುಗ ಹೈರ್ಡ್ ಲೇಬರ್ ತರುತ್ತಾನೆ ಅಂದರೆ ಅದು ಅರ್ಥವಿಲ್ಲದ ಮಾತು.

ಶ್ರೀ ಬಿ. ವಿ. ಕಕ್ಕಿಲಾಯ.—ಲ್ಯಾಂಡ್ ಲಾರ್ಡ್ಸ್ ಆಗಿರಲಿ ಟೆನೆಂಟ್ಸ್ ಆಗಿರಲಿ, ಮೈನರ್ ಮಕ್ಕಳು ಇದ್ದರೆ ವ್ಯತ್ಯಾಸ ಮಾಡುವುದಿಲ್ಲ, ಡಿಸ್ಕ್ರಿಮಿನೇಷನ್ ಇಲ್ಲ. ಆಕ್ಯುಪೆಂಟ್ಸ್ ರಿಜಿಸ್ಟರ್ ಮಾಡಲಿ, ಅವರು ವಯಸ್ಸಿಗೆ ಬಂದಮೇಲೆ ಆಕ್ಯುಪೆನ್ಸಿ ರೈಟ್ಸ್ ರೈಸ್ ಮಾಡಬಹುದು, ಆಕ್ಯುಪೆನ್ಸಿ ರೈಟ್ಸ್ ರೈಸ್ ಮಾಡುವ ತನಕ ವ್ಯವಸಾಯ ಮಾಡಲಿಕ್ಕೆ ಕೂಡದು ಎಂದು ಹೇಳಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಯಾರು ಮಾಡುವವರು ?

ಶ್ರೀ ಬಿ.ವಿ. ಕಕ್ಕಿಲಾಯ.—ಸರ್ಕಾರವೇ ಮಾಡಬಹುದು.

Sri P. C. SHETTER.—You please go through the definition of personal cultivation.

ಶ್ರೀ ವಿ. ಎಸ್. ಪಾಟೀಲ್.—ಈ ಪ್ರಾವಿಷನ್‌ನಲ್ಲಿ ಗಾರ್ಡಿಯನ್ಸ್ ಸತ್ತರೂ ಕೂಡ ಲ್ಯಾಂಡ್ ಲಾರ್ಡ್ಸ್ ಇದ್ದೇ ಇರುತ್ತಾರೆ, ಟೆನೆಂಟ್ಸ್ ಸತ್ತರೂ ಕೂಡ ಇವರು ಇದ್ದೇ ಇರುತ್ತಾರೆ. ಟೆನೆಂಟ್ ಗಾರ್ಡಿಯನ್ಸ್ ಬೇರೆ ಲ್ಯಾಂಡ್ ಲಾರ್ಡ್ ಗಾರ್ಡಿಯನ್ಸ್ ಬೇರೆ ಏನು ? It will be under the custody of the State and the State will look after it till the minor attains the age of majority. The present land reforms Act cannot over-ride the provisions of Wards and Guardians Act. ಪರ್ಸನಲ್ ಕಲ್ಟಿವೇಷನ್ ಎಂದರೆ, ಹೈರ್ಡ್ ಲೇಬರ್ ಕ್ಲಿಯರ್ ಕಟ್ ಡಿಫಿನಿಷನ್ ಬರುತ್ತದೆ. ಸಬ್ ಲೀಸ್ ಮಾಡುವುದಕ್ಕೆ ಪವರ್ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—Let the Hon'ble Minister clarify the position ಅವರು ಏನು ಹೇಳಿದರು. ಗಾರ್ಡಿಯನ್ಸ್ ಆಕ್ಟ್ ಏನು ಇದೆ ಅದು ಅಪ್ಲಿಕಬಲ್ ಎಂದು. ಈಗ ಒಬ್ಬ ಲ್ಯಾಂಡ್ ಲಾರ್ಡ್ ಸತ್ತುಹೋಗಿ, ಮೈನರ್ ಮಕ್ಕಳು ಇದ್ದರೆ, ಮೈನರ್ ಮಕ್ಕಳು ಬೇರೆಯವರಿಗೆ ಆಸ್ತಿಯನ್ನು ವಹಿಸಿ ಸಾಗು ಮಾಡಬಹುದು. ಸರ್ಕಾರದವರೆ ಮಾಡಬಹುದು. ಅಂದಮೇಲೆ ಆಸ್ತಿ...... ಬೇರೆಯವರ ಸ್ವಾಧೀನ ಕೊಡುವುದಕ್ಕೆ ಸ್ಕೋಪ್ ಇದೆ. ದಯಮಾಡಿ ಇದನ್ನು ಕ್ಲಾರಿಫೈ ಮಾಡಿರಿ. My knowledge is limited. Please enlighten me with your clarification on this.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ತರಹ ಚರ್ಚೆಯಾದರೆ. ಇದು ಬಗೆಹರಿಯುವುದಿಲ್ಲ, ಇದನ್ನು ಮಾನ್ಯ ಸದಸ್ಯರೊಂದಿಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಆಗ ಸಮಸ್ಯೆ ಏನು ಇದೆ ಅದನ್ನು ನಿರ್ಧಿಷ್ಟವಾಗಿ ಬಗೆಹರಿಸಬಹುದು. ಈ ತರಹ ಪ್ರಶ್ನೆ ಕೇಳುವುದು, ಉತ್ತರ ಹೇಳುವುದು, ಅದರಮೇಲೆ ವ್ಯಾಖ್ಯಾನ ಮಾಡುವುದು ಇದು ಸರಿಹೋಗುವುದಿಲ್ಲ. ಮಾನ್ಯ ಸದಸ್ಯರು ಅವರ ಅಭಿಪ್ರಾಯ ಏನು ಇದೆ ಅದನ್ನು ಹೇಳಿದ ಮೇಲೆ ನಂತರ ನನಗೆ ತಿಳಿದಿದ್ದನ್ನು ನಾನು ಹೇಳುತ್ತೇನೆ. ದಯಮಾಡಿ ಅವರ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ನಾನು ನನ್ನ ಅಭಿಪ್ರಾಯವನ್ನು ಹೇಳುತ್ತಾ ಇದ್ದಾಗ ನಮ್ಮ ಪ್ರೋಗ್ರೆಸ್ಸೀವ್ ಫ್ರೆಂಡ್ಸ್ ಏನು ಸಮಾಧಾನ ಕೊಟ್ಟರೂ ನನಗೆ ಸರಿಯೆನಿಸಲಿಲ್ಲ, ಸಮಾಧಾನವಾಗಬೇಕಾದರೆ, ಅದು ಹಾರ್ಸ್ ಮಾತಿನಿಂದ ಬಂದರೆ ಸಮಾಧಾನವಾಗುತ್ತದೆ. ಮುಖ್ಯವಾಗಿ ಎರಡು ದೃಷ್ಟಿಯಿಂದ ಈ ಪ್ರಶ್ನೆಯನ್ನು ಪೋಸ್ ಮಾಡಿದೆ, ಮಂತ್ರಿಗಳು ಒಪ್ಪಿಕೊಂಡುಬಿಟ್ಟರೆ ತಂಟೆಯಿಲ್ಲ. ಮೈನರ್ ಮಕ್ಕಳಿಗೆ ಆಸ್ತಿಯನ್ನು ಸರ್ಕಾರವೇ ವಹಿಸಿಕೊಂಡರೆ ಅದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ. ನನಗೆ ಏನು ಅಪ್ರುಹೆನ್‌ಷನ್ ಇದೆ ಎಂದರೆ that will not apply particularly under this Act. ಆಮೇಲೆ, ಸೆಕ್ಷನ್ 19ರಲ್ಲಿ 60 ಸಾವಿರ ಅಪ್ಲಿಕೇಷನ್ಸ್ ಸೆಕ್ಷನ್ 14ರ ಪ್ರಕಾರ ಡಿಸ್ಪೋಸ್ ಆಗಿವೆ. ಯಾರು ಯಾರು ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ ಅವರು 15 ವರ್ಷದವರೆಗೆ ಮಾಡಬಾರದು ಎಂದು ಇದೆ. ಈ 15 ವರ್ಷದಲ್ಲಿ ಮಕ್ಕಳ ಮದುವೆ ಮಾಡಬೇಕಾಗಿತ್ತು, ಎಂದರೆ ಅವರು ಏನು ಮಾಡಬೇಕು, ಅರ್ಧ ಎಕರೆ ಒಂದು ಎಕರೆ ಇರುವವರಿಗೆ, ಸ್ಮಾಲ್ ಹೋಲ್ಡರ್ಸ್‌ಗೆ ಒಂದು, ಪ್ರಾವಿಷನ್ ಮಾಡಿಕೊಡಿ. ಯಾವುದೋ ಒಂದು ಸಂದರ್ಭದಲ್ಲಿ ಮಕ್ಕಳ ಮದುವೆ ಮಾಡಬೇಕು ಎಂದರೆ ಅವನಿಗೆ ಹಣ ಬೇಕು ಎಂದಾಗ 3-4 ವರ್ಷವಾದಮೇಲೆ ಇದನ್ನು ಮಾರುವುದಕ್ಕೆ ಒಂದು ಪ್ರಾವಿಷನ್ ಮಾಡಿಕೊಡಿ. 15 ವರ್ಷವನ್ನು ಸೀಲಿಂಗ್ ಆಗಿ ಇಡಿ. 50-100 ಎಕರೆ ರಿಸೆಂಪ್ಷನ್ ತೆಗೆದುಕೊಂಡಿರುವವರಿಗೆ ಬೇರೆ ಮಾಡಿರಿ, ಸಣ್ಣ ಪುಟ್ಟವರು ಮಾಡಿಕೊಂಡು ಅವನ ತಿಥಿಗೋ, ಪಿಂಡ ಹಾಕಿಕೊಳ್ಳುವುದಕ್ಕೋ ಇಲ್ಲವೆ ಮಕ್ಕಳ ಮದುವೆಗೋ ಇಂಥವುಗಳಿಗೆ ಒಂದು ಅವಕಾಶ ಮಾಡಿಕೊಡಿ. ಇದಕ್ಕೆ ಇಷ್ಟೊಂದು ರಿಸ್ಟ್ರಿಕ್ಷನ್ ಏತಕ್ಕೆ ಇಡಬೇಕು ?

ಶ್ರೀ ಎಚ್. ಎಸ್. ಸಿದ್ದಪ್ಪ.—ಅವನು ಆಸ್ಪತ್ರೆಗೆ ಹೋಗಿ ಸೇರಿಕೊಂಡರೆ, ಲಕ್ವ ಹೊಡೆದರೆ, ಹಾರ್ಟ್ ಅಟಾಕ್ ಆದರೆ ಮಾರಿಕೊಳ್ಳುವುದಕ್ಕೆ ಅವಕಾಶಮಾಡಿಕೊಡಿ.

ಶ್ರೀ ಎಚ್. ಡಿ. ದೇವೇಗೌಡ.—ಆಮೇಲೆ ಸೆಕ್ಷನ್ 20ರಲ್ಲಿ Failure to cultivate etc..

(1) Where a person who has taken possession of any land by evicting a tenant in order to cultivate it personally or use it for non-agricultural purposes, fails within one year from the date he took possession or ceases within three years from such date to do so, the Tahsildar shall on application by the tenant or otherwise, if satisfied that such person has so failed or ceased, declare by notification, that............"

ಸೆಕ್ಷನ್ 20ರಲ್ಲಿ ಅದೇ ಟೆನೆಂಟಿಗೂ ಕೊಟ್ಟಿರುವುದನು, ನೋಡಿ. ಸೆಕ್ಷನ್ 14ರ ಕೆಳಗೆ ವಾಪಸ್ ತೆಗೆದ ಕೊಂಡು, ಒಂದೆರಡು ಮೂರು ವರ್ಷ ಕಳೆದಮೇಲೆ ಪುನಃ ಅವನ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಹೊರಟಿದ್ದಾರೆ. For example, a widow who has secured land under section 14, under the orders of the Court.

ಸೆಕ್ಷನ್ 20ರ ಕೆಳಗೆ ಏನು ಇವರಿಗೆ ಇಂಪೋಸ್ ಮಾಡಿದ್ದೀರಿ.? The same restriction was not imposed for a tenant. Why do you want to have such a discrimination .

ಇನ್ನು ಸೆಕ್ಷನ್ 21ಕ್ಕೆ ಬಂದರೆ (ಡಿ)ನಲ್ಲಿ "Section 21 (d) Sub-division, sub-letting and assignment prohibited.

(*d*) if such area is less than a fragement the shares shall be entitled to enjoy the income jointly, but the land shall not be divided by metes and bounds".

ಇದು ಸಾಧ್ಯವೇ ?

(*Mr. Deputy Speaker in the Chair*)

ವಾಸ್ತವಿಕತೆಯಿಂದ ನೋಡಿ. (d)ನಲ್ಲಿ if such area is less than a fragment ಎಂದು ಹೇಳಿದ್ದೀರಿ. ಒಂದು ಕಡೆ ಭೂಮಿ ಹಂಚಿಕೆ ನಡೆಯುವ ಬಗ್ಗೆ ವಾದ ಮಾಡುತ್ತೀರಿ, ಇನ್ನೊಂದು ಕಡೆ ಫ್ರಾಗ್ಮೆಂಟೇಷನ್ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೊರಟಿದ್ದೀರಿ ಇಲ್ಲಿ ಅರ್ಧ ಎಕರೆ ಹಂಚುವುದಕ್ಕೆ ಪ್ರಾವಿಷನ್ ಇದೆ "Why should it not apply in the case of a small holder"?

Sri KAGODU THIMMAPPA.—It applies to one and all.

ಶ್ರೀ ಎಚ್. ಡಿ. ದೇವೇಗೌಡ.—60 ಸಾವಿರ ಅಪ್ಲಿಕೇಷನ್ ಡಿಸ್ಪೋಜಲ್‌ಗೆ ತೆಗೆದುಕೊಂಡಿರುವಾಗ ಇದು ಅಪ್ಲೈ ಆಗುವುದಿಲ್ಲ. ಇವರಿಗೆ ಅಪ್ಲೈ ಆಗುತ್ತದೆ. ಲಾಯರು ಫೀಜು ಸಿಕ್ಕಲಿ ಎಂದು ಸುಮ್ಮನೇ ಕೇಸುಗಳನ್ನು ಅಡ್ಜರ್, ಮಾಡಿಕೊಳ್ಳುತ್ತಾ ಹೋಗುತ್ತಿರುತ್ತಾರೆ. ಅವುಗಳಲ್ಲಿ 15 ಸಾವಿರ ಇತ್ಯರ್ಥವಾಗಿ ಉಳಿದವರಿಗೆ ಹೊಡೆತ ಬೀಳಬೇಕೆ ? ಇನ್‌ಕಂ ಶೇರ್ ಮಾಡಿಕೊಳ್ಳುವುದು. Is is practical ?

Sri KAGODU THIMMAPPA.—There is a provision in the Fragmentation of Holdings Act.

Sri H. D. DAVE GOWDA.—It will not apply to cetrain Sections. Will it apply to lands under Section 14 ? It will to apply.

I am coming to Section 22 Eviction of tenant for default, etc.

Section 22 says :—

"(1) Notwithstanding any agreement, usage, decree or order of a court of law, or anythting contained in any enactment or law repealed by section 142 or in any other law in force before the commencement of such enactment or law, and subject to the provisions of section 14 no person shall be evicted from any land held by him as a tenant except on any of the following grounds, namely :—

(2) that the tenant has failed to apy the rent of such land on or before the due date during two consecutive years, provided the landlord has issued every year within three months after the due date a notice in writing to the tenant that he has failed to pay the rent for that year."

ನೀವು ಇಲ್ಲಿ ಟೆನೆಂಟಿಗೆ 2 ವರ್ಷದ ಗೇಣಿಯನ್ನು ಕೊಟ್ಟಿದ್ದರೆ. Even if he holds the decre ಅವರನ್ನು ಎವಿಕ್ಟ್ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ಹೇಳುತ್ತೀರಿ. ಅದೇ ಟೆನೆಂಟ್ ಕೋ-ಆಪರೇಟಿವ್ ಸೊಸೈಟಿ ಅಥವಾ ಮತ್ತೆ ಯಾವುದೇ ಬ್ಯಾಂಕಿಂಗ್ ಇನ್ಸ್‌ಟಿಟ್ಯೂಷನ್ ಅಥವಾ ಫೈನಾನ್ಸ್ "ಕಾರ್ಪೊರೇಷನ್ ನಿಂದ ಸಾಲ ತೆಗೆದುಕೊಂಡಿದ್ದು ಸಾಲ ಕೊಡದೇ ಡಿಫಾಲ್ಟರ್ ಆದಾಗ ಅವನ ಮೇಲೆ ಸೊಸೈಟಿಯವರು ಅಥವಾ ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್‌ನವರು ಡಿಕ್ರಿ ಹೋಗಲು ಅವಕಾಶ ಮಾಡಿದ್ದೀರಿ.

Under such circumstances can be evicted or not ?

ಶ್ರೀ ಕಾಗೋಡು ತಿಮ್ಮಪ್ಪ.—ಇಲ್ಲಿ ಕ್ಯಾಪಾಸಿಟಿ ಬೇರೆ, ಅಲ್ಲಿ ಕ್ಯಾಪಾಸಿಟಿ ಬೇರೆ.

ಶ್ರೀ ಎಚ್. ಡಿ. ದೇವೇಗೌಡ.—ಲ್ಯಾಂಡ್ ಲಾರ್ಡ್‌ಗೆ ಕೊಡಬೇಕಾದ ರೆಂಟಿನ ಪ್ರಶ್ನೆ ಬಂದಾಗ ಟೆನೆಂಟನ್ನು ಎವಿಕ್ಟ್ ಮಾಡುವುದಕ್ಕೆ ಆಗುವುದಿಲ್ಲ. ಹಾಗೇನೇ ಫೈನಾನ್‌ಷಿಯಲ್ ಇನ್ಸ್‌ಟಿಟ್ಯೂಷನ್ ಸಾಲ ಕೊಟ್ಟಾಗ ಕೂಡ ಅವನನ್ನು ಎವಿಕ್ಟ್ ಮಾಡುವುದು ಬೇಡ. Why the same benefit should not be given he has taken the benefit from the financial institutions ?

ರೆಂಟ್ ಕೊಡದಿದ್ದರೆ ಅವನನ್ನು ಎವಿಕ್ಟ್ ಮಾಡಬಾರದು. ಸರ್ಕಾರದ ದುಡ್ಡು, ಆದುದರಿಂದ ನಿಮಗೆ ಪಿಂಚ್ ಆಗುತ್ತದೆ. ಆದುದರಿಂದ You want to send him out ? ಇದು ಸರಿಯಲ್ಲ. ಇನ್ನು "Right of tenant to be heritable" ಬಗ್ಗೆ ಕ್ಲಾಜ್ 24ರಲ್ಲಿ ಇದೆ. ಮೈನರ್ ಮಕ್ಕಳಿಗೆ ಗಾರ್ಡಿಯನ್ ಷಿಪ್ ಸರ್ಕಾರ ವಹಿಸಿಕೊಂಡು ಅವರು ಮೆಜಾರಿಟಿ ಬರುವವರೆಗೆ ಸವಲತ್ತು ಕೊಡದೇ ಹೋದರೆ, ನಮ್ಮ ಆಬ್ಜೆಕ್ಟ್ ಡಿಫೀಟ್ ಆಗುತ್ತದೆ ? ಹೀಗೆ ಏನಾದರೂ ಅವರು ಕಲ್ಟಿವೇಟ್ ಮಾಡದೇ ಹೋದರೆ ಮತ್ತೆ ಸರ್ಕಾರದಿಂದ ವಾಪಸ್ಸು ಪಡೆಯಬೇಕೆಂದು ಪ್ರಾವಿಷನ್ ಮಾಡಿಕೊಂಡಿದ್ದೀರಿ. ಚಿಕ್ಕ ಮೈನರ್ ಮಕ್ಕಳು ಏನಾದರೂ ಇದ್ದರೆ ಅವರು 4-5 ವರ್ಷ ಕಲ್ಟಿವೇಟ್ ಮಾಡದೇ ಹೋದರೆ. ಸೆಕ್ಷನ್ 24 ಡಿಫೀಟ್ ಆಗುತ್ತದೆ. Clause 24 cannot be implemented in case they are not going to cultivate the land either by hired labour or any other labour.

ಸೆಕ್ಷನ್ 24ನ್ನು ಪ್ರಾಕ್ಟಿಕಲ್ ಆಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವುದು ನನ್ನ ಅಭಿಪ್ರಾಯ. ಇದರ ಬಗ್ಗೆ ಸರ್ಕಾರದವರು ಕ್ಲಾರಿಫೈ ಮಾಡಬೇಕೆಂದು ಕೇಳುತ್ತೇನೆ.

ಇನ್ನು ಕ್ಲಾಜ್ 34ರಲ್ಲಿ Bar to attachment or sale by process of court. ವಿಷಯವಿದೆ. ಕ್ಲಾಜ್ 34ರ ಪ್ರಾವಿಸೋ ಹೀಗೆ :

'Save as expressly provided in this Act or in the Mysore Co-operative Societies Act, 1959, no interest of a tenant in any land held by him as a tenant shall be liable to be attached, seized or sold in execution of a decree or order of a civil court.'. ಕೋ ಆಪರೇಟಿವ್ ಇನ್ಸ್ಟಿಟ್ಯೂಷನ್ನಿಗೆ ಸಾಲ ಕೊಡುವ ಬಗ್ಗೆ ಮಾತ್ರ ಅವನ ಮೇಲೆ ಪ್ರೊಸೀಡ್ ಮಾಡಲು ಅವಕಾಶ ಇಟ್ಟುಕೊಂಡಿದ್ದೀರಿ. ಬೇರೆಯವರಿಗೆ ಇಲ್ಲ. ಇನ್ನು ಒಂದು ಹೆಜ್ಜೆ ಮುಂದು ಹೋಗುವುದಾದರೆ ಆಕ್ಯುಪೆನ್ಸಿ ರೈಟ್ 20 ವರ್ಷಗಳು ಆದ ಮೇಲೆ ಬರುತ್ತದೆ. ಒಂದು ವರ್ಷ ಜಮೀನನ್ನು ಪಡೆದು ಮೊದಲನೇ ವರ್ಷ ಸೊಸೈಟಿಯಿಂದ 500 ರೂಪಾಯಿ ಕ್ಯಾಷ್ ಲೋನ್ ತೆಗೆದುಕೊಂಡು, ಅದನ್ನು ಕೊಡದೇ ಡಿಫಾಲ್ಟರ್ ಆದರೆ, ಏನು ಮಾಡುತ್ತೀರಿ ? ತ್ರಿಶಂಕು ಸ್ವರ್ಗದಂತೆ ಆಗುತ್ತದೆ. ಸೊಸೈಟಿಯ ಶೇರ್ ಹೋಲ್ಡರ್ಸ್ ಆ ಸಾಲವನ್ನು ಹಂಚಿಕೊಳ್ಳಬೇಕು. Without insisting any compensation ಪುಕ್ಕಟೆಯಾಗಿ occupancy rights ಆತನಿಗೆ ಕೊಡಿ. ನೂರಾರು ವರ್ಷಗಳಿಂದ ಮಾಡಿಕೊಂಡು ಬಂದಿದ್ದೀರಿ ಅದಕ್ಕೋಸ್ಕರ ಭೂ ಮಾಲಿಕ ಎಂದು ಹೇಳಿಬಿಡಿ. ಅವನು ಏನಾದರೂ ಮಾಡಿಕೊಂಡು ಹೋಗಲಿ. ಕೋ-ಆಪರೇಟಿವ್ ಇನ್ಸ್ಟಿಟ್ಯೂಷನ್ಸ್ ಅಥವಾ ಫೈನಾಷಿಯಲ್ ಇನ್ಸ್ಟಿಟ್ಯೂಷನ್ಸ್‌ನಿಂದ ಕ್ರಾಪ್-ಲೋನ್ ಪಡೆದಿದ್ದರೆ ದಾವಾ ಹಾಕಿ ಅದನ್ನು ವಾಪಸ್ ಪಡೆಯುವ ಬಗ್ಗೆ ಸ್ಕೋಪ್ ಇಟ್ಟುಕೊಂಡಿದ್ದಾರೆ. "If the Co-operative institution were to take away the land from the tenant, then the purpose of your Act will be defeated." ಸ್ಮಾಲ್ ಹೋಲ್ಡರ್ಸ್‌ಗೆ ರೆಂಟ್ ಕೊಡಬೇಕಾದರೆ, ಅದು ಸಪ್ಲೈ ಆಗುವುದಿಲ್ಲ. ಅವನನ್ನು ಎವಿಕ್ಟ್ ಮಾಡಿಸುವುದಕ್ಕೆ ಆಗುವುದಿಲ್ಲ. ಆದರೆ ಫೈನಾನ್ಷಿಯಲ್ ಇನ್ಸ್ಟಿಟ್ಯೂಷನ್ನಿಗೆ ಬಾಕಿ ಬರುವುದಿದ್ದರೆ ಆತನನ್ನು ಓಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಿ. ಇದು ಸರ್ಕಾರದ ಹಣ. ಅದು ಪ್ರೈವೇಟ್ ಪಾರ್ಟಿಗೆ ಸಂಬಂಧಪಟ್ಟಿದ್ದು. ವಿಡೋಸ್‌ಗೆ ರೆಂಟ್ ಬರಬೇಕಾದರೆ ಅವರು ಕೊಡದೆ ಇದ್ದರೆ ಚಿಂತೆ ಇಲ್ಲ ಎಂದು ಹೇಳುತ್ತೀರಿ "If you want to give benefit to the give it, whether he has taken the loan from a Co-operative institution or from any other sourse."

4–30 P.M.

Comming to Section 44 it says that all land should vest with the Government free from encumbrance. ಸೆಕ್ಷನ್ 44ರಲ್ಲಿ All land should vest with the Government free from encumbrance ಎಂದು ಹೇಳುತ್ತೀರಿ. ಅದು ಹೇಗೆ ಸಾಧ್ಯವಾಗುತ್ತದೆ ? ಸೆಕ್ಷನ್ 14ರಲ್ಲಿ ರೆಸಂಪ್‌ಷನ್ ಮಾಡಿಕೊಂಡು. ಏನು ಭೂಮಿಯನ್ನು ಸ್ವಾಧೀನ ಪಡೆಯಬಹುದು, ಆ ಸೆಕ್ಷನನ್ನು ಕಿತ್ತುಹಾಕಿದ್ದೀರಿ, ಅದರ ಮೇಲೆ 2,000 ಸಾಲ ಇದೆ ಎಂದು ಇಟ್ಟುಕೊಳ್ಳಿ, ನನಗೆ ಇರುವುದು $1\frac{1}{2}$ ಎಕರೆ ಗದ್ದೆ. ಸರ್ಕಾರದವರೇನೇ ಒಂದು ಎಕರೆ ಊರು ಪಕ್ಕದಲ್ಲಿದೆ ಎಂದು ಹೇಳಿ. ಸಾವಿರ ರೂಪಾಯಿ ಸಾಲ ಕೊಟ್ಟಿರುವುದು ಇದೆ. ನೀವು ಕಾಂಪನ್‌ಸೇಷನ್ ಫಿಕ್ಸ್ ಮಾಡಿರುವುದು ಕಂದಾಯದ 10ರಷ್ಟು. ಅದು ಲೆಕ್ಕ ಹಾಕಿಕೊಂಡರೆ 150 ರೂಪಾಯಿ ಬರುತ್ತದೆ. It must vest with the Government from encumbrance ಎಂದು ಹೇಳುತ್ತೀರಿ. ಅದು ಹೇಗೆ ಆಗುತ್ತದೆ ? ಅವರ ಹತ್ತಿರ ಏನು ಹಿಡಿದುಕೊಳ್ಳುತ್ತೀರಿ. ಅವರಿಗೆ ಒಂದು ಎಕರೆ ಇರುತ್ತದೆ. ಸೆಕ್ಷನ್ 14ರ ಪ್ರಕಾರ ಅರ್ಜಿ ಹಾಕಿದ್ದೇನೆ. ನಮ್ಮ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಪರಿಣಿತರಿಂದ ಈ ವಿಷಯಗಳನ್ನು ತಿಳಿದುಕೊಳ್ಳಬೇಕು ಎಂದು ನಾನು ಪ್ರಶ್ನೆ ಹಾಕುತ್ತೇನೆ. ಆಗ ಏನು ಮಾಡಬೇಕು ? ಅದಕ್ಕೆ ನಾನು ಹೇಳುತ್ತೇನೆ. "Suppose if the compensation amount is more the encumbrance," ಅದರಲ್ಲಿ ಡಿಡೆಕ್ಟ್ ಮಾಡಿಕೊಳ್ಳಿ ಎಂದು ಹೇಳುತ್ತೀರಿ...ಆದರೆ If the encumbrance is more than the compensation amount ಆಗ ಯಾರಿಗೆ ಅದನ್ನು ಎಷ್ಟೆಷ್ಟು ರೈಟಾಫ್ ಮಾಡಬೇಕು ? ಅದು ಅಷ್ಟು ಸುಲಭವಾಗಿ ರೈಟ್ ಆಫ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. How Tahsildar should apportion the compensation amount. If the Co-operative institution or the Government has advanced the loan this should stand in queue to receive the proportionate amount. ಸರ್ಕಾರದ ಸಾಲ ವಸೂಲು ಮಾಡಿಕೊಂಡು ಖಾಸಗಿಯವರು ಕೊಟ್ಟಿದ್ದಕ್ಕೆ ಟೋಪಿ ಹಾಕಿ ಎಂದು ಹೇಳುತ್ತೀರಾ ? You have empowered the Tahsildar how to apportion the compensation amount.

ಆಮೇಲೆ I am coming to section 48 Constitution of Tribunals. ಏಕೆಂದರೆ ನಾನು ಅಧಿಕಾರಿಗಳ ಪರ ವಾದ ಮಾಡಿದರೆ ಕಾಗೋಡು ತಿಮ್ಮಪ್ಪನವರು ಅವರು ಭ್ರಷ್ಟಾಚಾರಿಗಳು ಎನ್ನುವ ಕನ್‌ಕ್ಲೂಜನ್‌ಗೆ ಬರಬಹುದು. ರಾಜಕಾರಣಿಗಳು ದೇಶದಲ್ಲಿ ಕರಪ್ಟ್ ಅಲ್ಲ. ನೀತಿಯ ಉನ್ನತ ಶಿಖರದಲ್ಲಿರ ತಕ್ಕಂಥ ಜನ ಎಂದು ಹೇಳುತ್ತಾರೆ. ನಾವು ಚುನಾವಣೆಯಲ್ಲಿ ಗೆದ್ದು ಬಂದಿರುವವರು. ಚುನಾವಣೆಯಲ್ಲಿ ಗೆದ್ದಿರುವವರು. ಈ ಭಾಗದಲ್ಲಿರುವವರೆಗೆ ಯೋಗ್ಯರು. ಆ ಜಾಗದಲ್ಲಿ ಕತ್ತೆ ಇದ್ದರೂ ಜನ ಹಾರ ಹಾಕುತ್ತಾರೆ. 1972 ಆದ ಮೇಲೆ ಎಷ್ಟು ಜನ ಭೂಮಿಯನ್ನು ಮಾಡಿಕೊಂಡಿದ್ದಾರೆ ಎಂದು ಪ್ರಶ್ನೆ ಇದೆ. ಮೊನ್ನೆ ಮಂತ್ರಿಗಳು ತಮ್ಮ ಆಸ್ತಿಯನ್ನು ಡಿಕ್ಲೇರ್ ಮಾಡಿದರು. A legisiator will sit in judgment in the tribunal. Suppose he himself has cheated the tenant. How can he sit in judgment ? I do not want to name any legistlator here. ಉದಾಹರಣೆಗೆ ಬದ್ರಿನಾರಾಯಣ ಅಯ್ಯಂಗಾರ್ಯರಿಗೆ 30 ಎಕರೆ ಲ್ಯಾಂಡ್ ಇದೆ ಎಂದು ಕೊಟ್ಟಿದ್ದಾರೆ. I am quoting only an instance. I am not making any criticism. ಮಂತ್ರಿಗಳಾದ ಮೇಲೆ. ಎಂ.ಎಲ್.ಎ.ಗಳಾದ ಮೇಲೆ ಯಾರ್ಯಾರು ಎಷ್ಟೆಷ್ಟು ಜಮೀನು ಮಾಡಿಕೊಂಡಿದ್ದಾರೆ ಮಾರಿಕೊಂಡಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. We must probe into the matter. ಈವೊತ್ತು ಅಲ್ಲಿ ಕೂತು ಜಡ್ ಮೆಂಟ್ ಮಾಡುತ್ತಾರೆ. Because he happens to be a legistator, he is above board. That is your presumption. ಟ್ರಿಬ್ಯುನಲ್ಸ್‌ನಲ್ಲಿನ 4 ಜನರ ಪೈಕಿ ಅಸಿಸ್ಟೆಂಟ್ ಕಮಿಷನರ್ ಒಬ್ಬರು. ಇನ್ನು 3 ಜನ ನಾನ್ ಅಫಿಷಿಯಲ್ಸ್ ಯಾರು? ಬಹಿರಂಗವಾಗಿ ಹೇಳೋಣ. ಹಿಡಿದಿರ ತಕ್ಕವರು ನೀವು. ನಮ್ಮ ಪಕ್ಷದವರನ್ನು ಹಾಕಿಕೊಳ್ಳುತ್ತೀರಿ. ಬೇಡ ಎಂದು ಹೇಳಿದರೂ ಹಾಕಿಕೊಳ್ಳುತ್ತೀರಿ. ಲ್ಯಾಂಡ್‌ಗ್ರ್ಯಾಂಟ್ ಕಮಿಟಿಯೊಳಗೆ ತಮ್ಮ ಪಕ್ಷದವರನ್ನು ಹಾಗೆ ಹಾಕಿಕೊಂಡಿದ್ದೀರಿ ; ಅಧಿಕಾರ ಇದೆಯೆಂದು ಹಾಕಿಕೊಳ್ಳುತ್ತೀರಿ. ಜನತೆಯಿಂದ ಚುನಾಯಿಸಲ್ಪಟ್ಟಿರುವ ಲೆಜಿಸ್ಲೇಟರ್ಸ್, ಮಂತ್ರಿಗಳು ತಮ್ಮ ಆಸ್ತಿಯನ್ನು ಸೀಲಿಂಗ್ ಲಿಮಿಟ್ ಒಳಗಡೆ ತರುವುದಕ್ಕೆ ಪ್ರಯತ್ನ ಮಾಡಿರುವ ಘಟನೆಗಳಿರುವಾಗ. ordinary social worker to whichever party he may belong, can you expect honesty from him– ಇವತ್ತು ಸೀಲಿಂಗ್ ಪರಿಮಿತಿಯೊಳಗೆ ತರುವುದಕ್ಕೆ ಪ್ರಯತ್ನ ಮಾಡಿರತಕ್ಕ ಸಂದರ್ಭಗಳು ನಮ್ಮ ಮುಂದೆ ಇರುವಾಗ. Social worker to whichever party he may belong ಅವನಿಗೆ ಜೀವನದಲ್ಲಿ ಸ್ಟೇಕ್ ಏನಿರುತ್ತದೆ ? you cannot expect integrity and honesty at all levels.

Sri A. SUBBIAH SETTY.—Do you mean to say that integrity and honesty is mortgaged only to official ?

Sri H. D. DEVEGAWDA.—Even among officials, there may be corrupt people and there may also be dishonest people. Atleast we must allow the juidical authoirty to take up this matter.

ಇನ್ನು ಜುಡಿಷಿಯರಿ ಬಗ್ಗೆ ನನಗೆ ವಿಶ್ವಾಸ ಇದೆ. ಇವೊತ್ತು ಜುಡಿಷಿಯರಿನಲ್ಲೂ ಸಹ ಕರಪ್ಟ್ ಆಗಿದೆ ಎಂದು ಮಾತನಾಡುವುದಕ್ಕೆ ತಯಾರಿಲ್ಲ. ಜುಡಿಷಿಯರಿನಲ್ಲಿ ಈ ಬಗ್ಗೆ ಇಂಡಿಪೆಂಡೆಂಟ್ ಆಗಿ ಆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ ಅಥವಾ ಬೇಕಾದರೆ ಪ್ರತಿ ತಾಲ್ಲೂಕಿಗೂ ಒಂದು ಸ್ಪೆಷಲ್ ಕೋರ್ಟ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಟ್ರಿಬ್ಯೂನಲ್ ಕೊಟ್ಟಂಥ ತೀರ್ಮಾನಗಳನ್ನು ಒಳಗೂ ಮತ್ತು ಹೊರಗೂ ಟೀಕೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಜುಡಿಷಿಯರಿನಲ್ಲಾದರೆ ಅವರು ಕೊಟ್ಟಂಥ ತೀರ್ಮಾನಗಳನ್ನು ಟೀಕೆ ಮಾಡುವುದಕ್ಕೆ ಅವಕಾಶವಾಗುವುದಿಲ್ಲ.

Sri M. S. KRISHNAN.—You are saying that a large number of politicians are corrupt. From the point of exposing them they may behave properly with the poor peasantry.

Sri H. D. DEVE GOWDA.—There is no scope here. Whatever the decision of the Tribunal it is final. To comment upon such a Judgment, where is the scope ?

Sri V. N. PATIL.—We have right to speak on the Judgment of the Tribunal.

Sri M. S. KRISHNAN.—I would like to pose a question. Are we not commencing upon the Judgment of the Court ? We are exposing the Judgment of the Courts which are against the people.

Sri V. N. PATIL.—The Jurisdiction of the High Court remains uninterrupted. But we can challenge the decision of the Court. It is final to the extent it cannot be challenged. But it is still open for comment. In the form of writ it can be challenged.

Mr. DEPUTY SPEAKER.—After the acceptance of the amendments, this Bill will be come an Act. Interpretation of the amendments could be made. The comments made on the Bill are not final. Let there be no disturbance.

ಶ್ರೀ ಎಚ್.ಡಿ. ದೇವೇಗೌಡ.—The Hon. Member is saying it can be challenged by a writ. ಹೈಕೋರ್ಟಿನವರು ಕೊಟ್ಟ ತೀರ್ಮಾನವನ್ನು ಅಳಿಯತಕ್ಕಂಥಾದ್ದಕ್ಕೆ ಸಾಧ್ಯವಿಲ್ಲ. ಟ್ರಿಬ್ಯೂನಲ್ ಕೊಟ್ಟ ತೀರ್ಮಾನದ ಮೇಲೆ ಒಂದು ವೇಳೆ ಇನ್‌ಜಸ್ಟೀಸ್ ಎಂದು ಹೇಳಬಹುದು. ಉದಾಹರಣೆಗೆ ಹುಮ್ನಾಬಾದ್ ತಾಲ್ಲೂಕಿನಲ್ಲಿ ವಿ. ಎನ್. ಪಾಟೀಲರೇ ಅನ್ಯಾಯ ಮಾಡಿದ್ದಾರೆ ಎಂದು ಇಟ್ಟುಕೊಳ್ಳೋಣ. ಅಲ್ಲಿ ಆರೀತಿ ಅನ್ಯಾಯ ನಡೆದಿದೆ ಎಂದು ಕಂಡುಬಂದರೆ ಅದನ್ನು ಫ್ಲೋರ್‌ಮೇಲೆ ಎಕ್ಸ್‌ಪೋಸ್ ಮಾಡಿದರೆ ನ್ಯಾಯ ಸಿಕ್ಕುತ್ತದೆಯೇ ?

Sri V. N. PATIL.—Even in public meeting it can be exposed.

ಶ್ರೀ ಹೆಚ್. ಡಿ. ದೇವೇಗೌಡ.—ಪಬ್ಲಿಕ್ ಮೀಟಿಂಗ್‌ನಲ್ಲಿ ಎಕ್ಸ್‌ಪೋಸ್ ಮಾಡಿದರೆ ಜಸ್ಟಿಫಿಕೇಷನ್ ಸಿಕ್ಕುತ್ತದೆಯೇ ? ಈ ಟ್ರಿಬ್ಯೂನಲ್‌ನಲ್ಲಿ ಪಾಲಿಟಿಷಿಯನ್ಸ್ ಇಟ್ಟು ತೀರ್ಮಾನ ಕೊಡುವುದಾದರೆ ಅವರು ಪಾರ್ಟಿ ಒಳಗೆ ಇರಬಾರದು ಎಂದು ಹೇಳುತ್ತೇನೆ. ಏತಕ್ಕೆಂದರೆ ಅವರು ಇದರಲ್ಲಿ ಇನ್‌ವಾಲ್ವ್ ಆಗಬಹುದು. ಆದುದರಿಂದಲೇನೇ ಇವರನ್ನು ಇಟ್ಟು ತೀರ್ಮಾನ ಕೊಡುವುದಾದರೆ ಇದಾದಮೇಲೆ ಅಪೀಲು ಮಾಡುವುದಕ್ಕೆ ಮತ್ತೊಂದು ಅವಕಾಶ ಮಾಡಿಕೊಡಿ ಇಲ್ಲದೇ ಹೋದರೆ ನ್ಯಾಯ ದೊರಕಿಸಿಕೊಡುವುದಕ್ಕೆ ಕಷ್ಟವಾಗುತ್ತದೆ. ಆದರೆ ಇದನ್ನು ಜುಡಿಷಿಯರಿಗೇನೇ ಬಿಟ್ಟುಕೊಡುವುದಾದರೆ ಒಳ್ಳೆಯದು ಅಥವಾ ಇದಕ್ಕೆ ಪ್ರತಿ ತಾಲ್ಲೂಕಿಗೂ ಒಂದು ಸ್ಪೆಷಲ್ ಕೋರ್ಟ್ ಮಾಡಿದರೂ ಒಳ್ಳೆಯದು. ಅವರು ಇದನ್ನು ಡಿಸ್‌ಪೋಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಡ್ವೈಸರಿ ಕಮಿಟಿಯವರು ಯಾವನು ಸರಿಯಾದ ಟೆನೆಂಟ್ ಎಂಬುದನ್ನು ತಿಳಿದುಕೊಳ್ಳಲು ಅವಕಾಶ ಮಾಡಿಕೊಡಿ. ಹಾಗೆ ಮಾಡಿದರೆ ಅವರು ಸಂಬಂಧಪಟ್ಟ ವ್ಯಕ್ತಿಯ ಮೇಲೆ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಅದುಬಿಟ್ಟು ಇದಕ್ಕೆ ರಾಜಕೀಯ ಕಾರಿಣಿಗಳನ್ನು ಇಟ್ಟರೆ ಅವರ ಇಚ್ಛೆಗನುಗುಣವಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ತಮ್ಮ ಗಮನಕ್ಕೆ ಇನ್ನೂ ಒಂದು ಮಾತು ಹೇಳುವುದಾದರೆ ಈವೊತ್ತಿನ ದಿವಸ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸಿಗೌಡರೇ ಹೇಳಿದ್ದಾರೆ ; ನಮ್ಮ ರಾಜ್ಯದಲ್ಲಿ 30,345 ಜನ ಅಬೋ ಸರ್‌ಪ್ಲಸ್ ಸೀಲಿಂಗ್ ಇದ್ದಾರೆ ಎಂದು. ಇದು ಕಾಲ್ಪನಿಕ ಎಂದು ಹೇಳುತ್ತೇನೆ. ಏತಕ್ಕೆಂದರೆ ಈ ಅಂಕಿಅಂಶಗಳನ್ನು ನೋಡಿದರೆ ಶ್ರೀಮಾನ್ ಜತ್ತಿಯವರ ಕಾಲದಲ್ಲಿ ಇದ್ದಂಥ ಫಿಗರ್ಸ್ ಹೇಳಿದ್ದೀರಿ. 1961 ರಿಂದ ಈ ಆಕ್ಟನ್ನು ಜಾರಿಗೆ ಕೊಟ್ಟಿದ್ದರೆ ಅದರ ವಿಚಾರವೇ ಬೇರೆ. ಇದನ್ನು 1971 ರಿಂದ ಈಚೆಗೆ ಅಂತ ಕೊಟ್ಟಿದ್ದೀರಿ. ಈಗಾಗಲೇ ಎಷ್ಟೋ ಜನ ಡಿವಿಷನ್, ಗಿಫ್ಟ್, ಪಾರ್ಟಿಷನ್ ಇತ್ಯಾದಿ ಮಾಡಿಕೊಂಡಿದ್ದಾರೆ. ಕಾಗೋಡು ತಿಮ್ಮಪ್ಪನವರು ಟೆನೆಂಟ್ ಅಂತ ಹೇಳಿ ಅವರೇ

ಜಮೀನು ಬರೆಸಿಕೊಳ್ಳಬಹುದು. ಈರೀತಿ ಆಗುವುದು ಸ್ವಾಭಾವಿಕ. ಈರೀತಿ ಮಾಡದೇ ಇದ್ದರೆ ಕೈಕಚ್ಚುತ್ತೆ ಎಂದು ಗೊತ್ತಾಗುತ್ತದೆ. ಆದುದರಿಂದ ಅವರು ಆ ಎಲ್ಲೆಯೊಳಗೇ ತರುವುದಕ್ಕೆ ಪ್ರಯತ್ನ ಮಾಡುತ್ತಾರೆ. ರಾಜ್ಯದಲ್ಲಿ ದೊಡ್ಡ ದೊಡ್ಡ ಭೂಮಾಲೀಕರುಗಳೇ 30—40 ಎಕರೆ ಇದೆ ಎಂದು ಡಿಕ್ಲರೇಷನ್ ಕೊಟ್ಟಿದ್ದಾರೆ. ಇನ್ನು 30.345 ಜನ ಹಿಡುವಳಿದಾರರು ಏನು ಇದ್ದಾರೆ ಅವರಿಗೆ ಇದು It is notional land reform. As I put it here the small hard holders will beh it by this Act. ಎಂದು ಹೇಳಿದರೆ ತಪ್ಪಾಗಲಾರದು. ಇದರಲ್ಲಿ ಸ್ಮಾಲ್ ಹೋಲ್ಡರ್ಸ್ ಹೊಡೆತ ತಿನ್ನುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಇನ್ನು ಸ್ಮಾಲ್ ಹೋಲ್ಡರ್ಸ್‌ನವರು ದೊಡ್ಡ ದೊಡ್ಡ ಭೂಮಾಲೀಕರಿಗಿಂತಲೂ ಬುದ್ಧಿವಂತರಾಗಿದ್ದಾರೆ. ಈಗಾಗಲೇ ಅವರು ಏನು ಬೇಕೋ ಅದನ್ನು ಮಾಡಿಕೊಂಡಿದ್ದಾರೆ. ಬಹುಶಃ ಇದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಈಪೊತ್ತು ಇದಕ್ಕೆ ನೀವು ಟ್ರಿಬ್ಯೂನಲ್ ಏನು ಮಾಡುತ್ತೀರೋ ಅದಕ್ಕೆ ನಾನು ವಿರೋಧ ಮಾಡುತ್ತೇನೆ. ಏತಕ್ಕೆಂದರೆ ಪಾಲಿಟೀಷಿಯನ್ಸ್ ಕರಪ್ಟ್ ಆಗಿದ್ದರೆ ಅವರ ಬಗ್ಗೆ ಸರಿಯಾಗಿ ತೀರ್ಮಾನ ಮಾಡದೇ ಇದ್ದರೆ He can be exposed in the Public Platform ಅಂತ ಶ್ರೀಮಾನ್ ಪಿ.ಎನ್. ಪಾಟೀಲರು ಹೇಳಿದರು. ಆದುದರಿಂದ ಮುನಿಷಿಫ್ ಮ್ಯಾಜಿಸ್ಟ್ರೇಟ್ ಇಟ್ಟು ಅಸಿಸ್ಟೆಂಟ್ ಕಮೀಷನರನ್ನು ಆ ಕಮಿಟಿಯಲ್ಲಿ ಹಾಕಿ. ಒಬ್ಬ ಲೆಜಿಸ್ಲೇಟರ್ ಸಹ ಜನಗಳ ಪ್ರತಿನಿಧಿಯಾಗಿ ಇರಲಿ. ಆರ್.ಎಸ್.ಎಸ್. ವರ್ಕರ್ಸ್ ಆಗಲಿ, ಎಸ್.ಎಸ್.ಪಿ. ವರ್ಕರ್ಸ್ ಆಗಲಿ ಅವರನ್ನು ಹಾಕಿಕೊಂಡು ಇಲ್ಲದಿದ್ದನ್ನೆಲ್ಲಾ ಮಾಡಿಕೊಂಡು ಹೋಗುವುದಕ್ಕೆ ಅವಕಾಶ ಕೊಡಬೇಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಾಲ್ಕು ಪಾರ್ಟಿಯವರನ್ನೂ ಹಾಕಿದರೆ ನ್ಯಾಯ ಸರಿಯಾಗಿ ದೊರಕುವುದಿಲ್ಲವೇ ?

ಆಯಾ ಕ್ಷೇತ್ರದ ಲೆಜಿಸ್ಲೇಟರನ್ನು ಒಳಗೊಂಡು ಮುನಸೀಫ್ ಮ್ಯಾಜಿಸ್ಟ್ರೇಟ್, ಅಸಿಸ್ಟೆಂಟ್ ಕಮಿಷನರನ್ನು ಸೇರಿಸಿ ಒಂದು ಕಮಿಟಿ ಅವರಿಗೆ ಈ ಕೆಲಸವನ್ನು ಒಪ್ಪಿಸಿ. ಆಗ ಅಧಿಕಾರಿಗಳ ಕೈವಾಡ ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಲೆಜಿಸ್ಲೇಟರ್ ಯಾವ ಪಕ್ಷಕ್ಕೇ ಸೇರಿರಲಿ ಅವರನ್ನು ಆ ಸಮಿತಿಯಲ್ಲಿ ಹಾಕಿರಿ. ಆದರೆ ಮೂರು ನಾಲ್ಕು ಜನರನ್ನು ಹಾಕುವುದಕ್ಕೆ ಏನು ಅವಕಾಶ ಕೊಟ್ಟಿದ್ದೀರಿ ಅದರಿಂದ ಕಷ್ಟವಾಗುತ್ತದೆ. ಆ ಮೂರು ಜನರೂ ಅಧಿಕಾರಿಗಳ ಜೊತೆ ಕೊಲ್ಯೂಡ್ ಆದರೆ, ಲೆಜಿಸ್ಲೇಟರ್ ಆದವನು ಪ್ರಾಮಾಣಿಕವಾಗಿ ಹೊಡೆದಾಡಿದರೂ ಕಷ್ಟವಾಗುತ್ತದೆ. ಮೂರು ಜನ ಕಾಂಗ್ರೆಸ್ (ಆರ್) ಕಾರ್ಯಕರ್ತರನ್ನು ಹಾಕುತ್ತೀರಿ ಎಂದು ಇಟ್ಟುಕೊಳ್ಳೋಣ. ನಾನೊಬ್ಬ ಪ್ರಾಮಾಣಿಕವಾಗಿ ಒಂದು ವಿಷಯವನ್ನು ಇಡುತ್ತೇನೆಂದು ಇಟ್ಟುಕೊಂಡರೆ. ಅವರು ಮೂರು ಜನ ಅಧಿಕಾರಿಗಳನ್ನು ಹೆದರಿಸಿ ಅವರು ಹೇಳಿದ ಹಾಗೆ ಬರೆಯದೆ ಹೋದರೆ. ಮೂರು ಜನರ ಮೆಜಾರಿಟಿ ಇರುವುದರಿಂದ ನಿನ್ನ ಕಥೆ ಮುಗಿಸುತ್ತೇವೆಂದು ಅಧಿಕಾರಿಗಳಿಗೆ ಅವರು ಹೇಳಿದರೆ. ಅವರು ಹೇಳಿದಂತೆ ಬರೆಯಬೇಕಾಗಿ ಬರುತ್ತದೆ. ಆದುದರಿಂದ ಮುನಸೀಫ್ ಮ್ಯಾಜಿಸ್ಟ್ರೇಟ್ ಅಥವಾ ತಾಲ್ಲೂಕು ಮ್ಯಾಜಿಸ್ಟ್ರೇಟರಾದರೂ ಸರಿ ಅಸಿಸ್ಟೆಂಟ್ ಕಮಿಷನರ್ ಇವರ ಜೊತೆಗೆ ಸ್ಥಳದ ಒಬ್ಬ ಶಾಸಕರನ್ನು ರಚನೆ ಮಾಡಬೇಕು. ಅಲ್ಲದೆ ಆ ಕಮಿಟಿಯವರು ಮಾಡಿದ ತೀರ್ಮಾನದ ಮೇಲೆ ಅಪೀಲು ಹೋಗುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದೂ ಸೂಕ್ತ ಎನ್ನುವ ಮಾತನ್ನು ತಿಳಿಸುತ್ತೇನೆ.

ಕ್ಲಾಜ್, 51—ಮೋಡ್ ಆಫ್ ಪೇಮೆಂಟ್. ಇದರಲ್ಲಿ ನಾಲ್ಕೂವರೆ ಪರ್ಸೆಂಟ್ ಬಡ್ಡಿಕೊಡುವ ವಿಚಾರವನ್ನು ಹೇಳಿದ್ದಾರೆ. ದೊಡ್ಡ ಜಮೀನ್ದಾರರಿಗೆ ಏನು ಪರಿಹಾರವನ್ನೂ ಕೊಡುವುದು ಬೇಡ ಎಂದು ಒಂದು ರೆಸಲ್ಯೂಷನ್ ತನ್ನಿ. ಅದಕ್ಕೆ ನನ್ನ ಆಕ್ಷೇಪಣೆ ಇಲ್ಲ. ನಾನು ಕೆಲವು ಬ್ಯಾಂಕುಗಳಲ್ಲಿ ವ್ಯವಹಾರವನ್ನು ಇಟ್ಟುಕೊಂಡಿದ್ದೇನೆ. ಹದಿನಾಲ್ಕು ಪರ್ಸೆಂಟ್ ಬಡ್ಡಿ ಕೊಡುತ್ತಿದ್ದೇನೆ. ಹೀಗಿರುವಾಗ ನಾಲ್ಕೂವರೆ ಪರ್ಸೆಂಟ್ ಬಡ್ಡಿ ಕೊಡುತ್ತೇವೆಂದು ಹೇಳುವುದು ಬಹಳ ಸ್ವಲ್ಪ. ಒಬ್ಬನಿಗೆ ಹತ್ತು ಸಾವಿರ ರೂಪಾಯಿ ಕಾಂಪೆನ್ಸೇಷನ್ ಬರುತ್ತದೆ ಎಂದು ಇಟ್ಟುಕೊಳ್ಳೋಣ. ಅವನಿಗೆ ನಾಲ್ಕೂವರೆ ಪರ್ಸೆಂಟ್ ಪ್ರಕಾರ ಬಡ್ಡಿ ಕೊಟ್ಟರೆ ಎಷ್ಟು ಹಣ ಬರಬಹುದು ? ಅದರಿಂದ ಅವನು ಏನು ಮಾಡುವುದಕ್ಕೆ ಸಾಧ್ಯ : ಜೀವನಾವಶ್ಯಕ ವಸ್ತುಗಳ ಬೆಲೆಗಳು ವಿಪರೀತ ಏರುತ್ತಿವೆ. ಸಮಾಜವಾದವನ್ನು ನಿಮ್ಮ ತಲೆ ಮೇಲೆ ಹೊತ್ತುಕೊಂಡಿದ್ದೀರಾ ? ಇದು ಎಂಥ ಸಮಾಜವಾದ ? ಕಾಂಪೆನ್ಸೇಷನ್ ಕೊಡುವುದರಲ್ಲಿ ಈ ಹೊತ್ತು ಸ್ವಲ್ಪ ಬದಲಾವಣೆ ಮಾಡಿರಬಹುದು. ಅದಕ್ಕೆ ಒಂದು ಲಿಮಿಟ್ ಹಾಕಿ 20—25 ಸಾವಿರಕ್ಕೆ ಮೇಲ್ಪಟ್ಟು ಕಾಂಪೆನ್‌ಶೇಷನ್ ಬರುವ ಜನರಿದ್ದರೆ ಅವರಿಗೆ ಬಡ್ಡಿ ಇಲ್ಲದೆ ಕೊಡಬೇಕು ಎನ್ನುವ ತೀರ್ಮಾನ ಬೇಕಾದರೂ ಮಾಡಿ. ಅದನ್ನು 20 ವರ್ಷಕ್ಕೆ ತೆಗೆದುಕೊಳ್ಳಿ ಎಂದು ಹೇಳಿ. ಫಿಕ್ಸೆಡ್ ಡಿಪಾಜಿಟಿನಲ್ಲಿಟ್ಟರೆ 8 ಪರ್ಸೆಂಟ್ ಬಡ್ಡಿ ಬರುತ್ತದೆ. ಈ ಹೊತ್ತು ಸಣ್ಣ ಹಿಡುವಳಿದಾರರಿಗೆ ಕೊಡುವ ಕಾಂಪೆನ್ಸೇಷನ್ ಏನಿದೆ ವಾರ್ಷಿಕ 1.200 ರೂಪಾಯಿಗೆ ಮೀರದಂತೆ ವರಮಾನ ಬರುವವರಿಗೆ ದ್ವಿಗುಣ ಮಾಡಿಕೊಟ್ಟರೂ ಚಿಂತೆಇಲ್ಲ. ಬಂದಾಗ ಅವರಿಗೆ ಐದು ಅಥವಾ

ಹತ್ತು ಸಾವಿರ ರೂಪಾಯಿ ಕೈಗೆ ಬಂದರೆ ಒಂದು ಪೆಟ್ಟಿಗೆ ಅಂಗಡಿ ಹಾಕಿಕೊಂಡಾದರೂ ಜೀವನ ಮಾಡಿಕೊಳ್ಳ ಬಹುದು. ದೊಡ್ಡ ಭೂ ಮಾಲೀಕರಿಗೆ ಕೊಡದೆ ಇರುವಂತೆ ಮಾಡಿರಿ, ನಾನು ಅದಕ್ಕೆ ಅಡ್ಡಿ ಬರುವುದಿಲ್ಲ. ಆದರೆ ಸಣ್ಣವರಿಗೆ ಎಲ್ಲಿಯಾದರೂ ಹೊಟ್ಟೆ ಹೊರೆದುಕೊಳ್ಳಲು, ಜೀವನ ಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಕೊಡಿರಿ. ಅದಿಲ್ಲದೆ ಹೋದರೆ ಒಂದು ಕಡೆ ನೀವು ಸಾಮಾಜಿಕ ನ್ಯಾಯದ ಹೆಸರಿನಲ್ಲಿ ಇನ್ನೊಂದು ಕಡೆ ಸಮಾಜಕ್ಕೆ ಅನ್ಯಾಯವುಂಟಾಗುವಂತೆ ಮಾಡುತ್ತೀರಿ. ಇದು ಸರಿಯಲ್ಲ ಎನ್ನುವುದು ನನ್ನ ಭಾವನೆ.

Section 60 says :

> "Notwithstanding anything contained in any law, if at any time after the tenant has been registered as occupant under any of the foregoing provisions, such tenant fails to cultivate the land personally, for three consecutive years he shall, unless the Tahsildar condones such failure for sufficient reasons, be evicted"

ಮೈನರ್ ಟೆನೆಂಟ್ಸ್‌ಗೆ ಇದು ಅನ್ವಯವಾಗುವುದಿಲ್ಲ. ಇದರಲ್ಲಿ ಆ ವಿಚಾರ ಬಹಳ ಸ್ಪಷ್ಟವಾಗಿದೆ. It clearly says that unless he personally cultivates, he shall be evicted. ಇದರ ಬಗ್ಗೆ ಲಾ ಇಲಾಖೆಯವರು ಸ್ಪಷ್ಟೀಕರಣ ನೀಡಬೇಕು. ಟೆನೆಂಟ್ ಸ್ವಂತವಾಗಿ ಸಾಗುವಳಿ ಮಾಡದೆಹೋದರೆ ಒಂದು ವರ್ಷವಾದರೆ ಸುಮ್ಮನೆ ಇರಬಹುದು. ಕಂಟಿನ್ಯುಯಸ್ ಆಗಿ ಪಾಳು ಬಿಟ್ಟಿದ್ದರೆ ಏನು ಮಾಡಬೇಕು ? ಐದು ವರ್ಷದ ಹುಡುಗ 18 ವರ್ಷಕ್ಕೆ ಬರುವವರೆಗೂ ಪಾಳು ಬಿಟ್ಟಿರುವುದಕ್ಕೆ ಸಾಧ್ಯವಿದೆಯೇ ?

Sri KAGODU THIMMAPPA.—"Such tenant fails to cultivate the land personally for three consecutive years, he shall, unless the Tahsildar condones such failure for sufficient reasons". This is what it says.

ಶ್ರೀ ಎಚ್. ಡಿ. ದೇವೇಗೌಡ.—ಹತ್ತು—ಹದಿನೈದು ವರ್ಷ ಕಾಲ ಮೆಜಾರಿಟಿಗೆ ಬರುವವರೆಗೂ ಪಾಳ ಬಿಟ್ಟಿದ್ದರೆ ಅವನನ್ನು ಎವಿಕ್ಟ್ ಮಾಡಿಸುವುದಿಲ್ಲವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. Inference can be drawn like that. I consulted with the Law Department also. There is ambiguity. ಮೈನರ್ ಟೆನೆಂಟ್ ಡಿಸ್ ಏಬಲ್ಡ್ ಟೆನೆಂಟ್ ಇರುತ್ತಾನೆ, ಅವನು ಸಾಗುವಳಿ ಮಾಡುವುದಕ್ಕಾಗು ವುದಿಲ್ಲ. ಕೋರ್ಟು ಗಾರ್ಡಿಯನ್ ಅಪಾಯಿಂಟ್‌ಮಾಡಬಹುದು ಎಂದು ಹೇಳುವುದಾದರೆ ಹಾಗೆ ಎಲ್ಲಿ ಹೇಳಿದೆ ಎನ್ನುವುದನ್ನು ತಿಳಿಸಿದರೆ ಒಪ್ಪಿಕೊಳ್ಳುತ್ತೇನೆ.

ಇನ್ನು ಕ್ಲಾಸ್ 77ರಲ್ಲಿ ಡಿಸ್‌ಪೋಸಲ್ ಬಗ್ಗೆ ಹೇಳಿದ್ದಾರೆ. "Tahsildar shall give preference the tenant..........." ಎಂದು ಹೇಳಿದ್ದಾರೆ. ಅಂದರೆ ಯಾವ ರೀತಿ ಪ್ರಿಫರೆನ್ಸ್ ಕೊಡುವುದಕ್ಕಾಗುತ್ತದೆ ? ಈ ಬಗ್ಗೆ ಮಾನ್ಯ ಮಂತ್ರಿಗಳು ನ್ಯಾಯಾಂಗ ಇಲಾಖೆಯ ಓಪೀನಿಯನ್ ತೆಗೆದುಕೊಂಡು ಬಂದು ಇಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

5-00 ಪಿ.ಯಂ.

ಇನ್ನು ಸೀಲಿಂಗ್ ವಿಚಾರಕ್ಕೆ ಬಂದರೆ, ಇವೊತ್ತು ಆಣೆವಾರಿ ಸಿಸ್ಟಮ್ ತಂದಿದ್ದಾರೆ. ಇದನ್ನು ಬರೆದವರು ಸರ್ವೆ ಸೆಟಲ್‌ಮೆಂಟ್ ಇಲಾಖೆಯವರು. ಆಣೆವಾರಿ ಎಂದರೆ ಕ್ಲಾಸಿಫಿಕೇಷನ್. ಸರ್ವೇಯರುಗೆ ಹಿಂದಗಡೆ ಹೋಗಿ ರೊಕ್ಕ ಕೊಟ್ಟು ಆಣೆವಾರಿ ಬರೆಸಿರುವುದೂ ಸಹ ಉಂಟು. ಈ ಕಾರಣದಿಂದ ಮೊಜುಣಿದಾರರು, ಆಣೆವಾರಿ ಏನು ಬರೆದಿದ್ದಾರೆ ಅದು ಶಾಸ್ತ್ರೀಯವಾಗಿಲ್ಲ ಎಂದು ಹೇಳಬಹುದು. ಒಂದು ತೆಂಗಿನಗಿಡವಾಗಲೀ ಒಂದು ಅಡಕೆ ಗಿಡವಾಗಲೀ ಇಲ್ಲದಿರುವ ಜಮೀನನ್ನು ಬಾಗಾಯ್ತು ಎಂದು ಬರೆದಿರುವ ರೆಕಾರ್ಡ್ ಹಾಲಿ ಇದೆ. ನನ ಕ್ಷೇತ್ರದ ಬಗ್ಗೆಯೇ ನಾನು ಹೇಳುತ್ತಿರುವುದು. ಈ ಬಗ್ಗೆ ಅರ್ಜಿ ಬರೆದು ಅದನ್ನು ಬದಲಾಯಿಸಬೇಕೆಂದು ಹೇಳಿದರೆ, ಆ ರೀತಿ ಬದಲಾವಣೆ ಮಾಡಲು ಕಾನೂನು ಇಲ್ಲ ಎಂದು ಹೇಳುತ್ತಾರೆ. ಮೂವತ್ತು ವರ್ಷಕ್ಕೆ ಒಂದು ಸಲ ರೀ-ಕ್ಲಾಸಿಫಿಕೇಷನ್ ಮಾಡಬೇಕೆಂಬ ನಿಯಮವಿದೆ. ಅದರಂತೆ ಮೊನ್ನೆತಾನೆ ರೀ-ಕ್ಲಾಸಿಫಿ ಕೇಷನ್ ಆಯಿತು.

(Madam Speaker in the Chair)

ನನ್ನ ಕ್ಷೇತ್ರದಲ್ಲಿ ಒಂದು ಕಡೆ ಪಕ್ಕದ ಹೊಲ ಡ್ರೈ-ಲ್ಯಾಂಡ್ ಎಂದು ತೋರಿಸಿದ್ದಾರೆ. ಆದರೆ ಮಧ್ಯದಲ್ಲಿರುವ ಹೊಲವನ್ನು ಗಾರ್ಡನ್ ಎಂದು ತೋರಿಸಿದ್ದಾರೆ. ಆದರೆ ಈ ಗಾರ್ಡನ್‌ನಲ್ಲಿ ತೆಂಗಿನಗಿಡವೇ ಇಲ್ಲ. ಇದನ್ನು ಬದಲಾವಣೆ ಮಾಡಿ ಎಂದರೆ ನಮಗೆ ಪವರ್ಸ್ ಇಲ್ಲ ಎಂದು ಸರ್ವೆ ಸೆಟಲ್‌ಮೆಂಟ್ ಇಲಾಖೆಯವರು ಹೇಳುತ್ತಾರೆ. ಈ ರೀತಿ ಅವರು ಹೇಳುವುದರಿಂದ, ಏನಾದರು ಲೋಪವಿದ್ದರೆ ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದೆ ? ಈ ಹಿಂದೆ ಕೂಡ ಇಂತಹ ತಪ್ಪುಗಳನ್ನು ಸರಿಪಡಿಸಬೇಕೆಂದು ಇಲ್ಲಿ ಚರ್ಚೆ ಕೂಡ ಆಗಿದೆ. ಆದಕಾರಣ ಇದರಲ್ಲಿ ಸರ್ಕಾರದ ತಪ್ಪಿದ್ದರೆ ಸರ್ಕಾರ ಕೂಡ ತಿದ್ದಿಕೊಳ್ಳಬೇಕಾಗುತ್ತದೆಂದು ಹೇಳುತ್ತೇನೆ. ಏಕೆಂದರೆ ಆಣೆವಾರಿ ಪದ್ಧತಿಯ ಮೇಲೆ ಜಮೀನಿನ ವರ್ಗೀಕರಣ ಮಾಡಿ ಮುಂದಿನ ಭವಿಷ್ಯ ನಿರ್ಣಯ ಮಾಡುವುದಕ್ಕೆ ತಾವು ಹೊರಟಿರುವುದರಿಂದ, ಅದರಲ್ಲಿ ಏನಾದರು ತಪ್ಪಿದ್ದರೆ ಸರಿಪಡಿಸಬೇಕಾಗುತ್ತದೆ. ಆ ರೀತಿ ಸರಿಪಡಿಸದಿದ್ದರೆ ಮುಂದೆ ನಮ್ಮ ಮಕ್ಕಳಗತಿ ಏನಾಗಬೇಕು ? ನಾನು ಕೊನೆಯುವರೆಗೂ ಎಂ.ಎಲ್.ಎ. ಆಗಿರುತ್ತೇನೆಂಬ ನಂಬಿಕೆ ಏನೂ ಇಲ್ಲ. ಈ ಕೆಲಸ ಹೋದ ಮೇಲೆ ಯಾರೂ ಬೇರೆ ಕೆಲಸ ಕೊಡುವುದಿಲ್ಲ. ಮತ್ತು ನಮ್ಮ ಪೀಳಿಗೆಗೆ ಕೆಲಸ ಕೊಡಿಸುವುದಕ್ಕಾಗುವುದಿಲ್ಲ. ಇಂದು ಪಿ.ಎಸ್.ಸಿ. ಯಲ್ಲಿ ಏನು ಸ್ಪರ್ಧಾ ಪರೀಕ್ಷೆಗಳನ್ನು ನಡೆಸಲಾಗುತ್ತದೆ, ಅದರಲ್ಲಿ ಹಳ್ಳಿಗಾಡಿನಿಂದ ಬರುವ ಅಭ್ಯರ್ಥಿಗಳಿಗೆ ರಿಯಾಯಿತಿ ತೋರಿಸಬೇಕೆಂದು ಹೇಳಿದರೂ ಸಹ ಅದನ್ನು ಇನ್ನೂ ಮಾಡಿಲ್ಲ. ಇನ್ನು ಹಳ್ಳಿಗಾಡಿನ ಜನರಿಗೆ ಕೆಲಸ ಒದಗಿಸಿ ಕೊಡುತ್ತಾರೆಂಬ ನಂಬಿಕೆಯಾದರೂ ಏನು ? ಇಂದು ರಾಜ್ಯಾಂಗದಲ್ಲಿ 18 ಪರ್ಸೆಂಟ್ ರಿಜರ್‌ವೇಷನ್ ಎಂದು ಇಟ್ಟಿರುವುದರಿಂದ ಆ ಜನಾಂಗದವರಿಗೆ ಕೆಲಸಗಳು ಸಿಗುತ್ತಿವೆಯೋ ಹೊರತು, ಇಲ್ಲದಿದ್ದರೆ ಅವರಿಗೂ ಸಹ ಸಿಗುತ್ತಿರಲಿಲ್ಲ.

ಇನ್ನು ಕ್ಲಾಸ್ 63ರಲ್ಲಿ Ceiling on land ಬಗ್ಗೆ ಹೇಳಿದ್ದಾರೆ. ಅದೇ ಕ್ಲಾಸ್ 63 ಸಬ್-ಕ್ಲಾಸ್ 8ರಲ್ಲಿ

"No person who holds lands cultivated by plantation crops in excess of ten units shall be entitled to hold any other agricultural land."

ಎಂದು ಹೇಳಿದ್ದಾರೆ. ನನಗೆ ಇದರ ಹಿನ್ನೆಲೆ ಅರ್ಥವಾಗಲಿಲ್ಲ ? ಇದರ ಪ್ರಕಾರ 800 ಅಥವಾ ಸಾವಿರ ಎಕರೆ ಕಾಫಿ ತೋಟವನ್ನು ಒಬ್ಬ ಮನುಷ್ಯ ಇಟ್ಟುಕೊಂಡರೆ ಅದನ್ನು ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ. ಅದೇ ಒಬ್ಬ ಮನುಷ್ಯ 20 ಎಕರೆ ಕಾಫಿ ತೋಟದ ಜೊತೆಗೆ 40 ಎಕರೆ ಬೇರೆ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಈ ಆಕ್ಟ್ ಕೆಳಗೆ ಸಾಧ್ಯವಾಗುವುದಿಲ್ಲ.

ಹೊರಗಡೆಯಿಂದ ಬಂದಂತಹ ಚೆಟ್ಟಿಯಾರ್, ದೊಡ್ಡ ದೊಡ್ಡ ಲ್ಯಾಂಡ್‌ಲಾರ್ಡ್ಸ್, ಮತ್ತು ಪ್ಲಾಂಟರ್ಸ್ ಏನಿದ್ದಾರೆ ಅವರಿಗೆ ಷಲ್ಟರ್ ಇದೆ. ನಮ್ಮವರು ಪ್ಲಾಂಟೇಷನ್ ಜೊತೆಗೆ ಸ್ವಲ್ಪ ವ್ಯವಸಾಯದ ಭೂಮಿ 10. 15. 20 ಎಕರೆ ಇಟ್ಟುಕೊಂಡಿದ್ದರೆ ಅದನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಪ್ರೊಗ್ರೆಸೀವ್ ಐಡಿಯಾ ಇಟ್ಟುಕೊಂಡು ಇದನ್ನು ತಂದಿದ್ದೇವೆ ಎಂದು ಹೇಳುತ್ತಾರೆ. ಇದನ್ನು ಪ್ರೊಗ್ರೆಸೀವ್ ಎಂದು ಕರೆಯುವುದಕ್ಕಾಗುತ್ತದೆಯೇ ? ಈಗ ಪ್ಲಾಂಟೇಷನ್ ಒಳಗಡೆ ವ್ಯವಸಾಯದ ಭೂಮಿ ಇರುತ್ತದೆ. ಆ ಭೂಮಿಯ ಹತ್ತಿರ ಯಾವ ಕಡೆಯಿಂದಲೂ ಹೋಗುವುದಕ್ಕೆ ಆಗುವುದಿಲ್ಲ. ಇಂಥಾ ಇನ್‌ಟರ್‌ಸ್‌ಪರ್‌ಸ್ಡ್ ಲ್ಯಾಂಡ್ ಏನಿದೆ ಇದಕ್ಕೆ ಕೇರಳದಲ್ಲಿ ಎಗ್ಜೆಂಪ್ಷನ್ ಕೊಟ್ಟಿದ್ದಾರೆ. ಆದರೆ ಇಲ್ಲಿ ಈ ಲ್ಯಾಂಡಿಗೆ ಎಗ್ಜೆಂಪ್ಷನ್ ಕೊಡುವುದಕ್ಕೆ They have given discretionary powers to Tahasildars. Congress R is more progressive than CPI. ಆದ್ದರಿಂದ ಸೆಕ್ಷನ್ 63 ಸಬ್-ಸೆಕ್ಷನ್ 8ರಲ್ಲಿ ಏನು ಹೇಳಿದೆ ಅದು ಯೋಗ್ಯವಲ್ಲ. ದಯಮಾಡಿ ಇದನ್ನು ಡಿಲೀಟ್‌ಮಾಡಿ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಆಮೇಲೆ ಸೆಕ್ಷನ್ 104 ರಲ್ಲಿ "subject to the provisions of section 110, provision of section 63 other than sub section 8 there of section 79A, 79B and 80B shall not apply to plantations." ಎಂದು ಕ್ಲಿಯರ್ ಆಗಿ ಹೇಳಿದ್ದಾರೆ. ಅದನ್ನು ಡಿಲೀಟ್ ಮಾಡಬೇಕು. ಸಣ್ಣ ಸಣ್ಣ ಪ್ಲಾಂಟರುಗಳಿಗೆ ಎಗ್ಜೆಂಪ್ಷನ್ ಕೊಡುವುದಕ್ಕೆ ಇಷ್ಟವಿಲ್ಲದಿದ್ದರೆ ಯಾರಿಗೂ ಎಗ್ಜೆಂಪ್ಷನ್ ಕೊಡಬೇಡಿ. ಅಲ್ಲಿಯೇ ಹುಟ್ಟಿ ಬೆಳೆದಂತಹ ಸಣ್ಣ ಸಣ್ಣ ಪ್ಲಾಂಟರುಗಳ ಹೊಟ್ಟೆಯ ಮೇಲೆ ಹೊಡೆಯುವುದಕ್ಕೆ ಹೋಗಬೇಡಿ.

ಸೆಕ್ಷನ್ 110 ರಲ್ಲಿ you have taken powers whenever you like you can withdraw this exemption by notification ಒಂದು ನೋಟಿಫಿಕೇಷನ್‌ನಿಂದ ಎಗ್ಜಂಷನ್ ವಿತ್‌ಡ್ರಾ ಮಾಡುವುದಕ್ಕೆ ಅವಕಾಶ ಇದೆ ಎಂದರೆ ಅವರು ಒಂದು ಹೇಳಿಕೆಯನ್ನು ಕೊಟ್ಟರೆ ಚೆಟ್ಟಿಯಾರ್ 4 ಲಕ್ಷ 10 ಲಕ್ಷ ಹೊತ್ತುಕೊಂಡು ಬರುತ್ತಾರೆ. ಆಗ ರೆವಿನ್ಯೂ ಮಂತ್ರಿಗಳು ಏನು ಮಾಡಬಹುದು ಎಂಬುದನ್ನು ಹೇಳಿ. After all, this House is competent. You must come before the House for that. I am not questioning the integrity of the Revenue Minister. He may be sometimes dishonest or corrupt minister. Why such an anamoly? Why do you want to take that power by a notification? If you want to decide–you decide it once for all–it is a Democlese sword hanging over the head. It is not correct that Government should take such power. The House must decide to give exemption in individual cases. I oppose this. There is plenty of scope for misuse of power for the sake of personal ends. It is not correct. ಇವೊತ್ತು ನೀವು ಅಧಿಕಾರದಲ್ಲಿ ಇರಬಹುದು, ನಾಳೆ ಇನ್ನೊಬ್ಬರು ಬರಬಹುದು. ಯಾವುದೇ ಸರ್ಕಾರ ಆ ಅಧಿಕಾರವನ್ನು ತೆಗೆದುಕೊಂಡರೆ ದುರುಪಯೋಗ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಅಂಥಾ ಪವರನ್ನು ಸರ್ಕಾರ ತೆಗೆದುಕೊಳ್ಳುವುದು ಯೋಗ್ಯವಲ್ಲ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ.

ಫ್ಯೂಚರ್ ಅಕ್ವಿಜಿಷನ್ನಿಗೆ ಕಾಫಿ ಪ್ಲಾನ್‌ಟೇಷನ್ನಿಗೆ 100 ಎಕರೆ ಎಂದು ಹಾಕಿದ್ದಾರೆ. ಈಗ ಒಂದು ಕಾಫಿ ಪ್ಲಾನ್‌ಟೇಷನ್ನಿಗೆ ಕಾಫಿಬೋರ್ಡಿನಿಂದ ಸಾಲ ಕೊಟ್ಟಿರುತ್ತಾರೆ, ಒಂದು ಎಸ್ಟೇಟಿಗೆ ಸಾಲ ಕೊಟ್ಟಿರುತ್ತಾರೆ. ಡೆವಲಪ್‌ಮೆಂಟ್ ಲೋನ್ ತೆಗೆದುಕೊಂಡಿದ್ದನ್ನು ವಾಪಸ್ಸು ಕೊಡಬೇಕು. The Board will have to sue or it may be commercial bank advancing the loan-they will have to reecover money by public auction. If the estate is above 100 acres, who will purchase? We have been prohibited under ehis act. The land cannot be auctioned, if it is more than 100 acres is it practicable? When you allowed that man to raise a loan from financial institutions. if he becomes a defaulter. how to recover the loan? ಎಷ್ಟೋ ಕಾಫಿ ಪ್ಲಾಂಟರುಗಳು ಶ್ರೀಮಂತರು ರೆಫ್ರಿಜರೇಟರ್ ಇಟ್ಟುಕೊಂಡಿರುತ್ತಾರೆ. ಕಾರಿನಲ್ಲೇ ತಿರುಗಾಡುತ್ತಾರೆ. ಮುಂದೆ ಬರುವ ಬೆಳೆಯ ಮೇಲೆ ಆಗಲೇ ಸಾಲ ತೆಗೆದುಕೊಂಡಿರುತ್ತಾರೆ. ಆದ್ದರಿಂದ ಇದನ್ನು ಸ್ವಲ್ಪ ವಿಮರ್ಶೆಮಾಡದೆ ಸುಮ್ಮೋ ಮೋಟೋ ಹಾಕುವುದು ಸರಿಯಲ್ಲ. ಇದು ನೋಟಕ್ಕೆ ಚೆನ್ನಾಗಿ ಕಾಣಬಹುದು. ಆದರೆ ಇದನ್ನು ಕಾರ್ಯಗತ ಮಾಡುವಾಗ ಇರುವ ಕಷ್ಟವನ್ನು ಆಲೋಚನೆ ಮಾಡಬೇಕಾಗುತ್ತದೆ. ಆಮೇಲೆ 79 ಬಿ. ಪ್ರೊಹಿಬಿಷನ್ ಆನ್ ಹೋಲ್ಡಿಂಗ್ ಲ್ಯಾಂಡ್, ಸೆಕ್ಷನ್ 84 ಆನ್ ಕಲ್ಟಿವೆಬಲ್ ಲ್ಯಾಂಡ್ ಇದು ನನಗೆ ಅರ್ಥವಾಗುವುದಿಲ್ಲ. ಇದರಂತೆ ಸೀಲಿಂಗ್ ಏರಿಯಾ 55 ಎಕರೆ ಖುಷ್ಕಿ ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿದ್ದಾರೆ. ಹತ್ತು ಎಕರೆ ಜಮೀನನ್ನು ವನ ಹೋಯಿಸುವುದಕ್ಕೆ ಬಿಡುತ್ತೇವೆ ಎಂದರೆ 2 ವರ್ಷ ಭೂಮಿಯನ್ನು ಕಲ್ಟಿವೇಟ್ ಮಾಡದಿದ್ದರೆ ಅದನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಇದು ಸರಿಯಲ್ಲ. ಇವೊತ್ತು ಅದಕ್ಕೆ ಎಗ್ಜಂಮಷನ್ ಕೊಡಬೇಕಾಗುತ್ತದೆ.

ಆಮೇಲೆ ರಿಲೀಜಿಯಸ್ ಸಂಸ್ಥೆಗಳ ಭೂಮಿಯ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ದೇವರ ಫೋಟೋವನ್ನು ಚರಂಡಿಗೆ ಎಸೆಯಿರಿ ಎಂದಾಗ ನಮಗೆ ಕೆಲವರಿಗೆ ಬಹಳ ಸಂತೋಷವಾಯಿತು. ಆದರೆ ಸೆಕ್ಷನ್ 106ರಲ್ಲಿ ದೇವಸ್ಥಾನಗಳಿಗೆ ಇರುವ ಆಸ್ತಿಗಳನ್ನೇ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ಏಕೆಂದರೆ ನಾಲ್ಕು ಲಕ್ಷ ಎಕರೆ ಭೂಮಿಯನ್ನು ಹಂಚುತ್ತೇವೆಂದು ಹೇಳಿದ್ದೀರಿ. ಅದರ ಬಗೆ ಸಹ ನಾನು ರೆವೆನ್ಯು ಸೆಕ್ರೆಟರಿಯವರಿಗೆ ಒಂದು ಪತ್ರವನ್ನು ಬರೆದಿದ್ದೆ. 4 ಲಕ್ಷ ಎಕರೆ ಹೇಗೆ ಬಂತು ಎಂಬುದನ್ನು ತಿಳಿಸಿ ಎಂದು ಕೇಳಿದೆ. ಅವರು ಅಬೌದಿ ಸೀಲಿಂಗ್ ಲಿಮಿಟ್ ಮೂವತ್ತಾರು ಸಾವಿರ ಇದೆ ಎಂದು ಹೇಳಿದ್ದಾರೆ. ನಾನು ಆಗಲೇ ಹೇಳಿದೆ—ನಿಮಗೆ 36 ಸಾವಿರ ಅಲ್ಲ 360 ಕೇಸುಗಳು ಸಹ ಸಿಗುವುದಿಲ್ಲ. ಏಕೆಂದರೆ ಎಷ್ಟೋ ಜಮೀನು ಇರುವವರು ಆ ರೀತಿಯ ವ್ಯವಸ್ಥೆಯನ್ನು ಆಗಲೇ ಮಾಡಿಕೊಂಡಿದ್ದಾರೆ. ಈಗ ನೀವು ದೇವಸ್ಥಾನಗಳಿಗೆ ಎನ್ಯುಟಿಯನ್ನು ಕೊಡುತ್ತೇವೆಂದು ಹೇಳುತ್ತಿದ್ದೀರಿ. ನಿಮ್ಮ 5–10—20 ರೂಪಾಯಿಗಳಿಗೆ ಯಾವ ಅರ್ಚಕರು ಪೂಜೆ ಮಾಡುವುದಕ್ಕೆ ತಯಾರಾಗಿದ್ದಾರೆ? ನೀವು ಬೇಕಾದರೆ ದೇವಸ್ಥಾನಗಳನ್ನು ಗೋಡೌನ್‌ಗಳನ್ನಾಗಿ ಮಾಡಲು ತೀರ್ಮಾನ ಮಾಡಿ. ಏಕೆಂದರೆ ನೀವು ಹೋಲ್‌ಸೇಲ್

ಟ್ರೇಡ್ ತೆಗೆದುಕೊಳ್ಳುವಾಗ ಜಾಗ ಇರುವುದಿಲ್ಲ. ಆಮೇಲೆ ವಿಗ್ರಹಗಳನ್ನು ಫಾರಿನ್ ದೇಶಗಳಿಗೆ ರವಾನೆ ಮಾಡಿ. ಮೊದಲೇ ಅಲ್ಲಿ ವಿಗ್ರಹಗಳಿಗೆ ಒಳ್ಳೆಯ ಡಿಮ್ಯಾಂಡ್ ಇದೆ. ಆದ್ದರಿಂದ ತಾವು ನಡೆಸುವುದಕ್ಕೆ ವ್ಯವಸ್ಥೆ ಮಾಡುವುದಾದರೆ ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಅವುಗಳನ್ನು ಮುಟ್ಟು ವುದಕ್ಕೆ ಹೋಗಬೇಡಿ. ಏಕೆಂದರೆ ಇದರಿಂದ ಯಾರು ಆಸ್ತಿಕರು ಇದ್ದಾರೆ ಅವರಿಗೆ ನೋವಾಗುತ್ತದೆ. ಮಾನ್ಯ ಅಣ್ಣಾದೊರೆಯವರು ಸಹ ಆಪರೇಷನ್ ಮಾಡಿಸುವ ಮೊದಲು ತಿರುಪತಿಗೆ ಹೋಗಿ ಬಂದಿದ್ದಾರೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಬಸವಲಿಂಗಪ್ಪನವರು ಸಹ ಮಂತ್ರಿಯಾದ ತಕ್ಷಣ ತಿರುಪತಿಗೆ ಹೋಗಿ ಬಂದಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಆದರೆ ನಾವು ನಮ್ಮ ಸಂಸ್ಕೃತಿಯ ತಳಹದಿಯ ಮೇಲೆ ಹೋಗಬೇಕೆಂದಿದ್ದರೆ ದೇವಸ್ಥಾನಗಳಿಗೆ ಅಡಚಣೆಯಿಲ್ಲದ ಹಾಗೆ ಮಾಡಬೇಕಾಗುತ್ತದೆ. ಆದರೆ ತಾವು ಮಾಡಿದಂತಹ ರೀತಿಯಲ್ಲಿ ಅದು ಸರಿಯಾಗಿ ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆಮೇಲೆ ಕೆಲವು ಸಂಸ್ಥೆಗಳನ್ನು ತೆಗೆದುಕೊಂಡರೆ, ಅವುಗಳು ಒಳ್ಳೆಯ ಕೆಲಸ ಮಾಡುತ್ತಿವೆ. ಉದಾಹರಣೆಗೆ ಸಿದ್ಧಗಂಗೆಯ ಸಂಸ್ಥೆ ಅಥವಾ ಕಬ್ಬಳ್ಳಿ ವಿದ್ಯಾಸಂಸ್ಥೆ. ಬಹುಶಃ ಅಲ್ಲಿ ಹಲವಾರು ಜನ ಬಡ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತಿದ್ದಾರೆ. ಸಿದ್ಧಗಂಗೆಯ ಸ್ವಾಮಿಯವರು ಬೊಜ್ಜು ಬೆಳೆಸಿಕೊಂಡಿದ್ದಾರೆಂಬ ಆಪಾದನೆ ಏನಾದರೂ ಇದೆಯೋ ಎಂದು ಗೊತ್ತಿಲ್ಲ. ಕೆಲವು ಮಠಾಧಿಪತಿಗಳ ಹೆಸರಿನಲ್ಲಿ ಅನ್ಯಾಯ ನಡೆದಿರಬಹುದು. ಆದರೆ ಅಂಥ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ಏನಾದರೂ ಮಾರ್ಗ ಕಂಡುಹಿಡಿಯಬೇಕಲ್ಲದೆ ಒಂದೇ ಸಮನೆ ಈ ರೀತಿ ಮಾಡಬಾರದು. ಸಂಸ್ಥೆಯಲ್ಲಿ ಏನಾದರೂ ಕರಪ್ಟ್ ಪ್ರಾಕ್ಟೀಸ್, ಮಾಲ್ ಪ್ರಾಕ್ಟೀಸ್ ನಡೆಯುತ್ತಿದೆಯಾದರೆ ಅದನ್ನು ತಡೆಹಿಡಿಯುವುದಕ್ಕೆ ಏನಾದರೂ ಮಾಡಬೇಕು. ಆ ಸಿದ್ಧಗಂಗಾ ಸಂಸ್ಥೆಯಲ್ಲಿ 6–7 ಸಾವಿರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸಮಾಜದಲ್ಲಿರತಕ್ಕಂತಹ ಎಲ್ಲಾ ವರ್ಗದವರು ಸಹ ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ರಾಷ್ಟ್ರದ ಅನೇಕ ಉನ್ನತ ಪದವಿಗಳಲ್ಲಿ ಅವರು ಇದ್ದಾರೆ. ತಾವು ಎಲ್ಲಾ ಜಮೀನುಗಳನ್ನು ನ್ಯಾಷನಲೈಜ್ ಮಾಡುವುದಾದರೆ ನಮ್ಮ ಅಭ್ಯಂತರವಿಲ್ಲ. ನಮಗೆ ತಿಂಗಳಿಗೆ ಒಂದು ನೂರೋ ಇನ್ನೂರೋ ಕೊಟ್ಟರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ನ್ಯಾಷನಲೈಜ್ ಮಾಡುವುದಾದರೆ ಅಡಿಷನಲ್ ಎಕ್ಸಪೆಂಡಿಚರ್ 180—200 ಲಕ್ಷರೂಪಾಯಿಗಳವರೆಗೆ ಆಗುತ್ತದೆ. ನಾಲ್ಕನೆಯ ದರ್ಜೆಯ ಸ್ಕೇಲ್ ತಿಂಗಳಿಗೆ 100 ರೂಪಾಯಿಗಳು ಸಾಕು. ಈಗ ಅದರ ಮೂರರಷ್ಟು ಮಾಡಿದರೆ ಸಾಕು. ಅದನ್ನು ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಯತ್ನ ಮಾಡಲಿ. ಅದಿಲ್ಲದಿದ್ದರೆ ಇನ್ನು ಕೆಲವು ಒಳ್ಳೆಯ ಇನ್‌ಸ್ಟಿಟ್ಯೂಷನ್‌ಗಳು ಇವತ್ತು ಉತ್ತಮ ರೀತಿಯಲ್ಲಿ ಕೆಲಸಮಾಡುತ್ತಿವೆ. ಅವುಗಳಿಗೆ ನಾಳೆಯ ದಿವಸ ಧಕ್ಕೆ ಆಗುವ ಪರಿಸ್ಥಿತಿ ಬರುತ್ತದೆ. ಇನ್ನು ಸೆಕ್ಷನ್ 106ರ ಪ್ರಕಾರ ಇವತ್ತು ಇನ್‌ಸ್ಟಿಟ್ಯೂಷನ್‌ಗಳಿಗೆ ಸಂಬಂಧಪಟ್ಟ ಪ್ರಾಪರ್ಟಿಗಳನ್ನು ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ. ಅಂತಹ ಸನ್ನಿವೇಶ ಏರ್ಪಾಡಾದಾಗ ಇವತ್ತು ಅನೇಕ ಜನ ಬಡವರ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅವರುಗಳಿಗೆ ವಿದ್ಯಾಭ್ಯಾಸವನ್ನು ಕೊಡುವ ಅರ್ಹತೆಯನ್ನು ಸರ್ಕಾರದವರೇ ಹೊರಬೇಕಾಗುತ್ತದೆ. ಅದನ್ನು ಪುನಃ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಕೆಲವರಿಗೆ ಫ್ರೀ ಫೀಡಿಂಗ್‌ಗೆ ಹಣ ಕೊಡುತ್ತಿದ್ದೀರಿ. ಅದನ್ನು ಈಗ 10 ರೂಪಾಯಿಗಳಿಂದ ಸ್ವಲ್ಪ ಎನ್‌ಹ್ಯಾನ್ಸ್ ಮಾಡಿರಬೇಕು. ಷೆಡ್ಯೂಲ್ಡ್ ಕ್ಯಾಸ್ಟ್‌ಗೆ 40 ರೂಪಾಯಿಗಳು ಇರಬಹುದು.

5–30 P.M.

ಕೊನೆಯದಾಗಿ ಕ್ಲಾಸಿಫಿಕೇಷನ್ ವಿಷಯ ಏನಿದೆಯೋ ಅದನ್ನೂ ಕೂಡ ತಾವು ಪುನಃ ಪರಿಶೀಲಿಸಬೇಕು. ಅದರ ಬಗ್ಗೆ ಎಲ್ಲೆಲ್ಲಿ ತೊಂದರೆಗಳಿವೆಯೋ ಆ ತೊಂದರೆಗಳನ್ನು ಪುನರ್ಪರಿಶೀಲನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಕೆಲವು ಕಡೆಗಳಲ್ಲಿ ಬಾಗಾಯಿತು ಲ್ಯಾಂಡ್ ಇದೆ. ಅಲ್ಲಿ ಒಂದು ತೆಂಗಿನಕಾಯಿಯೂ ಕೂಡ ಇರುವುದಿಲ್ಲ.ಅಡಿಕೆ ಕೂಡ ಇರುವುದಿಲ್ಲ. ಅದನ್ನು 10 ಎಕರೆ ಎಂಬುದಾಗಿ ಬರೆದುಕೊಂಡರೆ ತಪ್ಪಾಗುತ್ತದೆ. ಆ ಭಾಗದಲ್ಲಿ ರಿಕ್ಲಾಸಿಫಿಕೇಷನ್ ಆದಮೇಲೆ ಕೆಲವು ಅರ್ಜಿಗಳನ್ನು ಬರೆಯಲು ನಮಗೆ ಪವರ್ಸ್ ಇಲ್ಲವೆಂದು ಹೇಳುತ್ತಾರೆ. ಅಂದಮೇಲೆ ಅದನ್ನು ಬಾಗಾಯಿತು ಎಂಬುದಾಗಿ ಹೇಳಿದರೆ ಹೇಗೆ ? ಈಚಲು ಮರ ಬೆಳೆದಿರುವುದು ವೆಟ್‌ಲ್ಯಾಂಡ್ ಎಂದು ಹೇಳುತ್ತಾರೆ. ಹೀಗೆ ಕ್ಲಾಸಿಫಿಕೇಷನ್ ಬಗ್ಗೆ ಇರುವ ಒಂದು ಗೊಂದಲವೇನಿದೆಯೋ ಅದನ್ನೂ ಕೂಡ ಸರಿಪಡಿಸುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಡಬೇಕು ಮಾನ್ಯ ಮುಖ್ಯಮಂತ್ರಿಗಳು ಈಗ ಬಂದಿದ್ದಾರೆ. ಅವರಿಗೆ ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುತ್ತೇನೆ.

ಇವರು ರಾಷ್ಟ್ರ ಮಟ್ಟದಲ್ಲಿ ಕೇಂದ್ರ ಸರ್ಕಾರಕ್ಕೆ ತಿಳಿಸುವುದಕ್ಕೆ ಒಂದು ಶಕ್ತಿ ಇದೆ. ಬಹುಶಃ ಮಾನ್ಯ ಶ್ರೀ ಹುಚ್ಚಮಾಸ್ತಿಗೌಡರಿಗೆ ಅದು ಆಗುವುದಿಲ್ಲ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನತೆಯ ಆರ್ಥಿಕ ಪ್ರಗತಿಗೆ ಧಕ್ಕೆ ಉಂಟಾಗುವುದರಲ್ಲಿ ಸಾಧ್ಯತೆ ಹೆಚ್ಚಾಗಿ ಇರುವುದರ ಬಗ್ಗೆ ವಿಚಾರವನ್ನು ಮಾಡಬೇಕು. ಈಗ ಯಾರಿಗೂ ಸೀಲಿಂಗಿಗಿಂತ ಎಕ್ಸೆಸ್ ಭೂಮಿ ಇಲ್ಲ ಎಂಬುದನ್ನು ಅವರು ನೋಡಬೇಕು. ನಾನು ಯಾರ ಒಂದು ಹಿತದೃಷ್ಟಿಯಿಂದ ಈ ರೀತಿಯಾಗಿ ಮಾತನಾಡುತ್ತಾ ಇಲ್ಲ. ಇನ್ನು ಅರ್ಬನ್ ಸೀಲಿಂಗ್ ಬಗ್ಗೆ ಯಾವ ರೀತಿ ಕ್ರಮ ಆಗುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಸುಧಾರಣೆ ಮಾಡತಕ್ಕ ವರ್ಗಗಳಲ್ಲಿ ಎರಡು ವರ್ಗಗಳಿವೆ. ಒಂದು ಆರ್ಥಿಕವಾಗಿ ಹಿಂದೆ ಹೋಗತಕ್ಕ ವರ್ಗ, ಇನ್ನೊಂದು ಆರ್ಥಿಕವಾಗಿ ಮುಂದೆ ಹೋಗತಕ್ಕ ವರ್ಗ. ಮುಂದೆ ಚುನಾವಣೆಯ ಸಂದರ್ಭ ಬಂದಾಗ ಪಟ್ಟಣಗಳಲ್ಲಿರತಕ್ಕ ದೊಡ್ಡ ದೊಡ್ಡ ಸ್ವಾಮಿಗಳಿಗೆ ನೀವೂ ನಾವೂ ನಮಸ್ಕಾರ ಮಾಡಬೇಕಾಗುತ್ತದೆ. ಅವರ ಹಂಗಿನಲ್ಲಿಯೇ ಈ ದೇಶದ ಪ್ರಜಾಪ್ರಭುತ್ವ ಉಳಿಯುವುದು, ಹೋಗುವುದು ಇರುತ್ತದೆ. ಇನ್ನು ಮುಂದೆ ಚುನಾವಣೆಗೆ ಹೋಗ ಬೇಕಾದರೆ ಕೇವಲ 10 ಎಕರೆ ಇಟ್ಟುಕೊಂಡು ಏನೂ ಮಾಡುವುದಕ್ಕಾಗುವುದಿಲ್ಲ. ಇವತ್ತು ಇಂತಹ ಒಂದು ತಾರತಮ್ಯ ಇದೆ. ಅದನ್ನು ನೀವು ಸರಿಮಾಡಬೇಕು. ಆದ್ದರಿಂದ ರೂರಲ್ ಸೀಲಿಂಗ್ ಮತ್ತು ಅರ್ಬನ್ ಸೀಲಿಂಗ್—ಇವೆರಡೂ ಒಟ್ಟಿಗೇ ಬರಬೇಕು. ಅದನ್ನು ಈ ದೇಶದಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡ ಬೇಕು. ಆದರೆ ಅದು ಕೇವಲ ಡಿಸ್ಟ್ರಿಬ್ಯೂಷನ್ ಓರಿಯೆಂಟೆಡ್ ಆಗಬಾರದು. ಅವರ ಅರ್ಧ ಎಕರೆಯನ್ನು ಕಿತ್ತು ಇನ್ನೊಬ್ಬರಿಗೆ ಕೊಡಿ ಎಂದು ಆಗಬಾರದು. ಪ್ರೊಡಕ್ಷನ್ ಓರಿಯೆಂಟೆಡ್ ಆಗಬೇಕು. ಬರೀ ಡಿಸ್ಟ್ರಿ ಬ್ಯೂಷನ್ ಓರಿಯೆಂಟೆಡ್‌ನಲ್ಲಿ ಒಂದೊಂದು ದೃಷ್ಟಿಕೋನ ನಮ್ಮಲ್ಲಿ ಇರಬಾರದು. ಎಲ್ಲ ಹಕ್ಕುಬಾಧ್ಯತೆಗಳನ್ನು ಯೋಚನೆ ಮಾಡಿ ನಾನು ತಿಳಿಸಿರತಕ್ಕ ಕೆಲವು ಏನು ವಿಷಯಗಳಿವೆಯೋ ಅವನ್ನು ಪುನರ್ಪರಿಶೀಲನೆ ಮಾಡ ಬೇಕೆಂದು ಸರ್ಕಾರಕ್ಕೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ.

ಇಷ್ಟು ಮಾತಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಬಿ. ಕೊಡಗಿ (ಬೈಂದೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಭೂಶಾಸನದ ತಿದ್ದುಪಡಿ ಮಸೂದೆಯ ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಅದನ್ನು ನಾನು ಮನಃಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವತ್ತು ಬಹಳ ಕ್ರಾಂತಿಕಾರಿಯಾದ ಮಸೂದೆಯನ್ನು ನಾವು ಮಂಡಿಸುತ್ತಿದ್ದೇವೆ. ಸಾಮಾನ್ಯವಾಗಿ ಈ ಒಂದು ಸಮಾಜ ರಚನೆಯಲ್ಲಿ ಇವತ್ತು ನಾವು ಇದನ್ನು ಜನತೆಯ ಮುಂದೆ ಇಡುತ್ತಿದ್ದೇವೆ. ಆದರೆ ಈ ಸಮಾಜ ರಚನೆಯಲ್ಲಿ ಇದು ಮೊದಲನೆಯ ಹೆಜ್ಜೆಯಲ್ಲ. ಕೊನೆಯ ಹೆಜ್ಜೆಯೂ ಆಗಲಾರದು. ಅದಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವ ಪರಿಸ್ಥಿತಿ ಇದೆಯೆನ್ನುವುದನ್ನು ಮಾತ್ರ ನಾನು ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕಾಗುತ್ತದೆ. ಮುಖ್ಯವಾಗಿ ಈ ಭೂಸುಧಾರಣೆ ಉದ್ದೇಶ ಏನೆಂಬುದನ್ನು ನಾವು ಈಗ ವಿಮರ್ಶೆಮಾಡಬೇಕಾದ ಅವಶ್ಯಕತೆ ಇದೆಯೆಂದು ನನ್ನ ಭಾವನೆ. ಇದು ಮೊದಲಿನಿಂದ ಬಂದಿರ ತಕ್ಕ ಒಂದು ದೊಡ್ಡ ಸಮಸ್ಯೆ. ಭೂಮಾಲೀಕತ್ವವೆಂಬುದೇನಿದೆಯೋ ಅದು ಭೂಮಾಲೀಕರ ಕಪಿಮುಷ್ಟಿ ಯಿಂದ ಶಾಶ್ವತವಾದ ಒಂದು ಶೋಷಣೆಗೊಳಪಟ್ಟದ್ದು ಆಗಿದೆ. ಅದರ ಪ್ರಕಾರ ಗೇಣೀದಾರನನ್ನು ಮನೆಗೆ ಕಳುಹಿಸಬೇಕೆಂದಿದೆ. ಉಳುವವನೇ ಭೂ ಒಡೆಯನಾಗಬೇಕೆಂಬ ದೃಷ್ಟಿಯಿಂದ ಈ ಭೂಮಸೂದೆಯಲ್ಲಿ ಅನೇಕ ವಿಷಯಗಳು ಅಡಕವಾಗಿ ಇವೆ. ಆ ಒಂದು ದೃಷ್ಟಿಯಿಂದ ನೋಡುವುದಾದರೆ. ಈ ತಿದ್ದುಪಡಿ ಮಸೂದೆಯನ್ನು ಈಗ ಮಂಡಿಸಿದುದನ್ನು ನಾನು ಒಪ್ಪುತ್ತೇನೆ. ಇದು ಬಹಳ ಪ್ರಾಮುಖ್ಯವಾದ ಮಸೂದೆ ಯೆಂದು ನಾನು ಖಂಡಿತವಾಗಿ ಹೇಳಲಿಕ್ಕೆ ಸಾಧ್ಯವಿದೆ. ಈ ಒಂದು ತಿದ್ದುಪಡಿಯಿಂದ ಕೇವಲ ಉಳುವವನೇ ಜಮೀನು ಒಡೆಯನಾಗಬೇಕೆಂಬ ಉದ್ದೇಶವಿಲ್ಲ. ಇದಲ್ಲದೆ ಇನ್ನೂ ಅನೇಕ ಉದ್ದೇಶಗಳು ಅಳವಡಿಸಿ ಕೊಂಡಿವೆ. ಮುಖ್ಯವಾಗಿ ಹೇಳುವುದಾದರೆ. ಇವತ್ತು ಪ್ರೊಡಕ್ಷನ್ ಸರಿಯಾಗಿ ಆಗದೆ ಈ ದೇಶದಲ್ಲಿ ಆಹಾರ ಸಮಸ್ಯೆಯನ್ನು ನಾವು ಕಾಣುತ್ತಿದ್ದೇವೆ. ಬಹು ಮುಖ್ಯವಾಗಿ ಆಹಾರ ಸಮಸ್ಯೆಯನ್ನು ನಾವು ಹೋಗ ಲಾಡಿಸಬೇಕು. ನೆಲವನ್ನು ಯಾವನು ಉಳುತ್ತಾನೋ ಅವನಿಗೆ ಸಾಕಷ್ಟು ಅವಕಾಶ ಒದಗಿಸಿಕೊಟ್ಟರೆ, ಅವನು ಹೆಚ್ಚಿಗೆ ಬೆಳೆಯನ್ನು ತೆಗೆದುಕೊಳ್ಳಬಹುದು. ಇದರಿಂದ ನಮ್ಮ ಆಹಾರ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳುವುದಕ್ಕೆ ತಕ್ಕ ಅವಕಾಶವಿದೆ. ಇದರೊಳಗೆ ಯಾವ ಒಂದು ಭಿನ್ನಾಭಿಪ್ರಾಯವೂ ಇರಬಾರದು. ಆ ಒಂದು ದೃಷ್ಟಿಕೋನದಿಂದ ಇದರ ಬಗ್ಗೆ ಬಹುಶಃ ಒಂದು ಹೊಂದಾಣಿಕೆ ತರಬೇಕಾಗಿತ್ತು ಎಂಬುದಾಗಿ ನಾನು ಹೇಳುತ್ತೇನೆ. ಇದರಲ್ಲಿ ನಿಜವಾಗಿ ಒಂದು ಉದಾರತ್ವವನ್ನು ತಾಳದೆ ಹೋದರೆ ನಮ್ಮ ಉದ್ದೇಶ ಸಾಧನೆಯಾಗಲಾರದೆನ್ನುವುದನ್ನು ಮಾತ್ರ ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕು. ಕಾರಣ ನಮ್ಮಲ್ಲಿ ಶೋಷಣೆಯ ವರ್ಗ ಏನಿದೆ ಅದರ ಒಂದು ಸ್ಥಾನಮಾನಗಳನ್ನು ಕಂಡುಹಿಡಿದುಕೊಂಡು ಅತಿ ಹಿಂದುಳಿದಿರತಕ್ಕ

ರೈತವರ್ಗ ಏನಿದೆಯೋ ಅದು ಸಮಾಜದಲ್ಲಿ ಅವರೊಂದಿಗೆ ಸುಖವಾಗಿ ಬಾಳಬೇಕೆಂಬ ದೃಷ್ಟಿಯನ್ನು ಇದರಲ್ಲಿ ಅಳವಡಿಸಿರುತ್ತಾರೆ. ಆದರ ಮೂಲಕ ಅನೇಕ ಸುಧಾರಣೆಗಳನ್ನು ಮಾಡಬೇಕಾಗಿದೆ. ಕೇವಲ ಅವರಿಗೆ ಭೂ ಒಡೆತನವನ್ನು ಕೊಟ್ಟ ಮಾತ್ರದಿಂದಲೇ ಅವನೇ ಎಲ್ಲವನ್ನೂ ಮಾಡಿಕೊಳ್ಳುತ್ತಾನೆಂದಲ್ಲ. ಅವನಿಗೆ ಬೇಕಾಗಿರತಕ್ಕ ಅನುಕೂಲತೆಗಳನ್ನೂ, ಸಾಲಸೌಲಭ್ಯಗಳನ್ನೂ ಒದಗಿಸಿಕೊಡುವುದು, ಅವನು ಬೆಳೆದಂಥ ಬೆಳೆಗೆ ಯೋಗ್ಯ ಮಾರ್ಕೆಟ್ ಸೌಲಭ್ಯಗಳನ್ನು ಒದಗಿಸಿಕೊಡುವುದು ಮತ್ತು ಇನ್ನೂ ಅವನ ಜೀವನಕ್ಕೆ ಬೇಕಾದಂಥ ಅನೇಕ ಸವಲತ್ತುಗಳನ್ನು ಒದಗಿಸಿಕೊಡುವಂಥ ಕಾರ್ಯಕ್ರಮಗಳನ್ನು ನಾವು ಕೂಡಲೇ ತೆಗೆದುಕೊಳ್ಳ ಬೇಕಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದರೊಳಗೆ ನಮ್ಮ ಒಂದು ಸಮಾಜದ ಹಿನ್ನೆಲೆಯಲ್ಲಿ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕೇವಲ ಈ ಒಂದು ಭೂಸುಧಾರಣೆಯಲ್ಲಿ ಒಂದು ಮಿತಿಯನ್ನು ಮಾಡುವಾಗ ಬೇರೆ ರಂಗಗಳಲ್ಲಿಯೂ ಒಂದು ಮಿತಿಯನ್ನು ಮಾಡದೆ ಹೋದರೆ ಖಂಡಿತವಾಗಿಯೂ ನಮ್ಮ ಉದ್ದೇಶ ಸಾಧನೆಯಾಗಲಾರದು. ಕೇವಲ ಭೂಮಿಯ ಮೇಲೆ ಮಿತಿಯನ್ನು ಹೇರಿ ಇನ್ನು ಇತರ ವರ್ಗದ ಜನರಿಗೆ ಯಾವ ಒಂದು ಮಿತಿಯನ್ನು ಹೇರದೆ ಹೋದರೆ ಶೋಷಿತ ವರ್ಗದವರಿಗೆ ಯಾವ ಒಂದು ಮಿತಿಯನ್ನೂ ಕೂಡ ಹೇರಿದಂತೆ ಆಗುವುದಿಲ್ಲ.

ಆದರೆ ನಗರಗಳ ಮೇಲಿನ ಆಸ್ತಿ ಮಿತಿಯನ್ನು ಹಾಗೂ ಇತರೇ ಬಾಬುಗಳಲ್ಲೂ ಉತ್ಪತ್ತಿಯ ಮಿತಿಯನ್ನು ಆದಷ್ಟು ಬೇಗ ಜಾರಿಗೆ ತರಬೇಕಾದುದೂ ಕೂಡ ಅತ್ಯಗತ್ಯ ಎಂದು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ ನಾನು ಇಷ್ಟನ್ನು ಪೀಠಿಕಾ ರೂಪವಾಗಿ ಹೇಳಿ ನಾನು ಇನ್ನು ಕಲಂವಾರಾಗಿ ಕೆಲವು ವಿಚಾರಗಳ ಬಗ್ಗೆ ಮಾತ ನಾಡುವುದಕ್ಕೆ ಇಷ್ಟಪಡುತ್ತೇನೆ. ಅಂತೂ ಈ ವರದಿಯಲ್ಲಿ ಬಹಳ ಸ್ತುತ್ಯಾರ್ಹವಾದ ಬದಲಾವಣೆಗಳನ್ನು ಮಾಡಿದ್ದಾರೆ. ಅದನ್ನು ಎಲ್ಲರೂ ಮೆಚ್ಚಲೇ ಬೇಕಾಗಿದೆ. ಈ ಹಿಂದಿನ ಆಕ್ಟಿನಲ್ಲಿದ್ದ ಸೆಕ್ಷನ್ 14 ಎಲ್ಲಿಯವರೆಗೆ ಆಕ್ಟಿನಲ್ಲಿ ಇರುತ್ತಿತ್ತೋ ಅಲ್ಲಿಯವರೆಗೂ ಈ ಗೇಣಿ ದುಷ್ಟಪದ್ಧತಿ ಇದ್ದೇ ಇರುತ್ತಿತ್ತು. ಆದುದರಿಂದಲೇ ಈಗ ಜಾಯಿಂಟ್ ಸೆಲೆಕ್ಟ್ ಸಮಿತಿ ಅವರು ಇದನ್ನು ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ಇದನ್ನು ರದ್ದುಮಾಡದೆ ಹಾಗೇ ಕೈಬಿಟ್ಟಿದ್ದರೆ ಭೂಮಿಯನ್ನು ಬಿಡಿಸಿಕೊಳ್ಳುವುದಕ್ಕೆ ಭೂ ಮಾಲೀಕ ಒಂದು ಕಡೆ ಮತ್ತು ಆ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದ ರೈತ ಅಥವಾ ಗೇಣಿದಾರ ಒಂದು ಕಡೆ ಹೀಗೆ ಇಬ್ಬರೂ ಕೋರ್ಟಿಗೆ ವರ್ಷಗಟ್ಟಲೆ ಅಲೆಯಬೇಕಾಗಿತ್ತು. ಈಗ ಅದನ್ನು ಸಂಪೂರ್ಣವಾಗಿ ತಪ್ಪಿಸಿದ್ದಾರೆ. ಅದಕ್ಕಾಗಿ ಈ ವರದಿ ಸ್ವಾಗತಾರ್ಹ ವಾದದ್ದು. ಹಾಗೇ ಈ ಸೆಕ್ಷನ್ 44 ಕ್ಕೆ ಬಂದರೆ—ಭೂಮಿಯನ್ನು ಯಾರು ಸ್ವತಃ ಉಳುತ್ತಿದ್ದನೋ ಅವನಲ್ಲಿ ಅದು ವೇಸ್ಟಾಗತಕ್ಕ ವಿಚಾರ ಇದೆ. ಇದರಲ್ಲಿ ಆ ಗೇಣಿದಾರನಿಗೆ ಆಕ್ಯುಪೆನ್ಸಿ ರೈಟನ್ನು ಕೊಡತಕ್ಕ ವಿಚಾರವಿದೆ ಇದೂ ಕೂಡ ಬಹಳ ಸ್ವಾಗತಾರ್ಹವಾದದ್ದೇ. ಹಾಗೇ ಗೇಣಿದಾರನಾಗಿದ್ದವನು ಕೊಡತಕ್ಕ ಗೇಣಿ ಬಗ್ಗೆ ಒಂದು ನಿರ್ದಿಷ್ಟವಾದ ನ್ಯಾಯವಾದ ಪದ್ಧತಿ ಇಲ್ಲಿಯವರೆಗೂ ಇರಲಿಲ್ಲ. ಗೇಣಿಯನ್ನು ಉತ್ಪನ್ನದ ನಾಲ್ಕನೇ ಒಂದು ಭಾಗ. ಐದನೇ ಒಂದು ಭಾಗ ಎಂದು ಹೇಳಿ ಅದು ಇಲ್ಲಿಯವರೆಗೂ ಇನ್ನೂ ನಿರ್ಧಾರವಾಗದೆ ಒಂದು ದೊಡ್ಡ ಗೊಂದಲಮಯವಾಗಿತ್ತು. ಇದರ ಪರಿಣಾಮವಾಗಿ ಅನೇಕ ಜನ ಸಣ್ಣ ಭೂ ಮಾಲೀಕರಿಗೆ ಕಳೆದ 10—12 ವರ್ಷಗಳಿಂದ ಬರಬೇಕಾದ ಗೇಣಿ ಇನ್ನೂ ಬಂದಿಲ್ಲ. ಇದಕ್ಕಾಗಿ ಒಕ್ಕಲಿದ್ದವನು ಕೋರ್ಟಿಗೆ ತಿರುಗಿ ಅವನಲ್ಲಿದ್ದ ರೊಕ್ಕವೂ ಹಾಳಾಯಿತು. ಆದರೆ ಕೇಸುಗಳಿನ್ನೂ ತೀರ್ಮಾನವಾಗಿಲ್ಲ. ಆದರೆ ಈ ದಿನ ಇದರ ಬಗ್ಗೆ ಅಂಥಾ ಕಷ್ಟ ಇಲ್ಲ. ಇದನ್ನು ಒಂದು ಸುಲಭ ರೀತಿಯಲ್ಲಿ ತೀರ್ಮಾನ ಮಾಡಿದ್ದಾರೆ.

ಆದರೆ ಇನ್ನು ಈ ಜಾಯಿಂಟ್ ಸೆಲೆಕ್ಟ್ ಸಮಿತಿಯವರ ವರದಿಯಲ್ಲಿ ಕೆಲವು ಸಣ್ಣಪುಟ್ಟ ನ್ಯೂನತೆಗಳಿವೆ. ಅವುಗಳಲ್ಲಿ ಮೊದಲನೇಯದು—ಪುಟ 10ರಲ್ಲಿ ಸ್ಮಾಲ್ ಹೋಲ್ಡರ್ಸ್ ಎಂಬ ಪದಕ್ಕೆ ಅರ್ಥ ವಿವರಣೆ ಕೊಟ್ಟಿರು ವುದರಲ್ಲಿ ಸ್ವಲ್ಪ ತಿದ್ದುಪಡಿಯಾಗಬೇಕಾಗಿದೆ. ಆದರೆ ಸಮಾಜದಲ್ಲಿ ಒಂದು ವರ್ಗಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಇನ್ನೊಂದು ವರ್ಗವನ್ನು ನಾಶಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಈ ಸಣ್ಣ ಪುಟ್ಟ ಲ್ಯಾಂಡ್ ಹೋಲ್ಡರು ಗಳಿಗೂ ಸ್ವಲ್ಪ ಪ್ರೋತ್ಸಾಹ ಇರಬೇಕಾದ್ದು ಅಗತ್ಯ. ಇಲ್ಲಿ ಕೊಟ್ಟಿರತಕ್ಕ ಡೆಫಿನಿಷನ್ ಹೀಗಿದೆ :—

"Small holder" means a land owner owing land not exceeding two units whose total net annual income including the income from such land does not exceed one thousand two hundred rupees.'

ಇದನ್ನು ಅರೆವರೆ ಈ 1.200 ರೂಪಾಯಿಗಳ ವರಮಾನ ಎಂಬುದನ್ನು ನಿರ್ಧಾರಮಾಡಿದ್ದು ಬಹುಶಃ 1947-48 ರಲ್ಲಿ ಇರಬೇಕು. ಮದ್ರಾಸಿನ ಗೇಣಿ ಶಾಸನದಲ್ಲಿ ಇದೇ ರೀತಿ ಇತ್ತು. ಅದನ್ನೇ ಇಲ್ಲಿ ಇವರೂ ಕೂಡ ಕಾಪಿ ಮಾಡಿಕೊಂಡಿದ್ದಾರೆಂದು ಕಾಣುತ್ತದೆ. ಇತ್ತೀಚೆಗೆ ಧಾನ್ಯದ ಬೆಲೆಗಳೆಲ್ಲ ಏರುತ್ತಿರುವಾಗ ಇಲ್ಲಿ ಯಾರನ್ನೂ ಸಣ್ಣ ಹಿಡುವಳಿದಾರ ಎಂದು ಪರಿಗಣಿಸುವುದಕ್ಕಾಗುವುದಿಲ್ಲ. ಈ ದಿವಸ ಒಬ್ಬ ತಾಲ್ಲೂಕ್ ಆಫೀಸ್ ಪ್ಯೂನ್‌ಗೆ ಕೂಡ ಅವನಿಗೆ ವರ್ಷಕ್ಕೆ 1,200 ರೂಪಾಯಿನ ಆದಾಯವಿರುತ್ತದೆ. ಆದುದರಿಂದ ಇಲ್ಲಿ ಹಾಕಿರತಕ್ಕ

1,200 ರೂಪಾಯಿ ಎಂಬ ಶಬ್ದವನ್ನು ತೆಗೆಯಬೇಕೆಂದು ಹೇಳುತ್ತೇನೆ. ಇದಕ್ಕೆ ಬದಲಾಗಿ 5,000 ರೂಪಾಯಿ ಎಂದು ಇದನ್ನು ಬದಲಾಯಿಸಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ (5)ಕ್ಕೆ ಬಂದರೆ—ಹಿಂದೆ ಇದ್ದ ಆಕ್ಟ್ ಪ್ರಕಾರ ಸೋಲ್ಜರ್, ಸೀಮನ್, ವಿಧವೆಯರು, ಮೈನರ್ಸ್ ಮತ್ತು ಡಿಸೇಬಲ್ಡ್ ಪರ್ಸನ್ನುಗಳಿಗೆ ಭೂಮಿಯನ್ನು ಲೀಜ್ ಮಾಡುವುದಕ್ಕೆ ಅವಕಾಶವಿತ್ತು. ಈಗ ತಂದಿರತಕ್ಕ ತಿದ್ದುಪಡೀ ಮಸೂದೆಯಲ್ಲಿ ಈ ಅವಕಾಶವನ್ನು ಕಿತ್ತುಹಾಕಿದ್ದಾರೆ. ಆದರೆ ಈಗಿರತಕ್ಕ ಕಾನೂನಿನ ಚೌಕಟ್ಟಿನಲ್ಲಿ ಅವರಿಗೆ ಬರತಕ್ಕ ಗೇಣಿಯನ್ನೂ ಕೂಡ ಅಂದರೆ ಹಿಂದೆ ಕೊಡಬೇಕಾಗಿದ್ದ ಗೇಣಿ ಬಾಕಿಯನ್ನೂ ವಸೂಲ್ಮಾಡುವಂತಿಲ್ಲ ಮತ್ತು ಭೂಮಿಯನ್ನೂ ಕೂಡ ವಾಪಸ್ ಪಡೆಯುವಂತಿಲ್ಲ. ಇಂಥ ಸಂದರ್ಭವಿರುವಾಗ ಇವರಿಗೆ ಹೆಚ್ಚಿನ ಪರಿಹಾರವನ್ನಾದರೂ ಕೊಡಬೇಕಾದ್ದು ಅತ್ಯಗತ್ಯ. ಯಾವಾಗ ಇವರಿಗೆ ರಿಜಂಪ್ಷನ್ನಿಗೆ ಅವಕಾಶವಿರುವುದಿಲ್ಲವೋ ಅಂಥ ಸಂದರ್ಭಗಳಲ್ಲಿ ಹೆಚ್ಚು ಪರಿಹಾರ ಕೊಡಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ.

ಇನ್ನು ಸೆಕ್ಷನ್ 13ಕ್ಕೆ ಬಂದರೆ ಇದು ನನಗೆ ತುಸು ಸರಿಯಾಗಿ ಕಾಣುತ್ತಿಲ್ಲ. ಲ್ಯಾಂಡ್ ರೆವಿನ್ಯೂ ಎಂದರೇನೆಂಬುದರ ಡೆಫಿನಿಷನ್ನನ್ನು ಸೆಕ್ಷನ್ 10 (ಎ)ನಲ್ಲಿ ಕೊಟ್ಟಿದ್ದಾರೆ. ಇಲ್ಲಿ ಹೀಗೆ ಹೇಳಿದ್ದಾರೆ.—

"land revenue" means all sums and payments received or claimable by or on behalf of the State Government from any person on account of land held by or vested in him as fixed at a settlement of land revenue current in the area in which the land is situated."

ಮುಂದೆ ಪರಿಹಾರವನ್ನು ಸೂಚನೆ ಮಾಡುವ ಕಾಲಕ್ಕೆ ಕಂದಾಯದ 8 ಪಾಲು ಎಂದು ಹೇಳಿ ಪುನಃ ಸೆಸ್ ವಿಚಾರ ಹೇಳಿದ್ದಾರೆ. ಆದರೆ ಈಗೇನು ಕಂದಾಯದ 8 ಪಟ್ಟು ಎಂದು ಹೇಳಿದ್ದಾರೆ ಅದರಲ್ಲಿ ಎಲ್ಲಾ ಸೆಸ್ಸುಗಳೂ ಸೇರಿವೆ ಎಂಬ ಅಂಶವನ್ನು ಅದರಲ್ಲಿ ಅಡಕಮಾಡಬೇಕೆಂದು ಹೇಳುತ್ತೇನೆ.

ಇನ್ನು ಸೆಕ್ಷನ್ 22ರಲ್ಲಿ ಇವಿಕ್ಷನ್ ಆಫ್ ಟೆನೆಂಟ್ ಫಾರ್ ಡಿಫಾಲ್ಟ್—ಎಂದು ಹೇಳಿದೆ. ಗೇಣಿ ಕೊಡತಕ್ಕ ಪದ್ಧತಿಯನ್ನೇ ಇಲ್ಲಿ ಸಂಪೂರ್ಣವಾಗಿ ರದ್ದು ಮಾಡಿರುವಾಗ ಇನ್ನು ಇವಿಕ್ಷನ್ ಆಫ್ ಟೆನೆಂಟ್ ಪ್ರಶ್ನೆ ಎಲ್ಲಿಂದ ಬಂತು ? ಸೆಕ್ಷನ್ 44ರ ಪ್ರಕಾರ ಎಲ್ಲಾ ಭೂಮಿಯೂ ಸರ್ಕಾರದಲ್ಲಿ ವೆಸ್ಟಾಗುತ್ತದೆ. ಅಂದಾಗ ಮತ್ತೆ ಇಲ್ಲಿ ಇವಿಕ್ಷನ್ ಆಫ್ ಟೆನೆಂಟ್ ಪ್ರಶ್ನೆ ಎಲ್ಲಿ ಬಂತು ? ಇದು ನನಗೆ ಸ್ವಲ್ಪ ಅರ್ಥವಾಗಲಿಲ್ಲ. ಇದನ್ನು ಕ್ಲಾರಿಫೈ ಮಾಡಬೇಕೆಂದು ಹೇಳುತ್ತೇನೆ.

ಇದೇ ರೀತಿ ಸೆಕ್ಷನ್ 30ರಲ್ಲಿ ರಿಪೇರಿ ವಿಚಾರ ತಿಳಿಸಿದ್ದಾರೆ. ಭಾರಿ ರಿಪೇರಿ ಮಾಡಿದರೆ ಒಂದು ಪ್ರಶ್ನೆ ಬರುವುದು. ಒಮ್ಮೆ ಗೇಣಿಯ ಭೂಮಿಯು ಸರಕಾರಕ್ಕೆ ಹೋಗುವುದರಿಂದ ಗೇಣಿದಾರರಿಗೂ ಮತ್ತು ಸರಕಾರಕ್ಕೂ ಸಂಬಂಧವಿರುವುದರಿಂದ ಸೆಕ್ಷನ್ 30ರ ಅವಶ್ಯಕತೆ ಇದೆಯೇ ಎಂಬುದನ್ನು ಪರಿಗಣಿಸಬೇಕಾಗುತ್ತದೆ. ಇದನ್ನು ಪರಿಶೀಲಿಸಬೇಕು.

ಸೆಕ್ಷನ್ 44. ಈ ಮಸೂದೆ ಜಾರಿಗೆ ಬಂದ ಕೆಲವು ಸಮಯದಲ್ಲಿ ಭೂಮಿಯು ಸರಕಾರಕ್ಕೆ ವೆಸ್ಟ್ ಆಗುವುದು, ದಣಿ ಮತ್ತು ಗೇಣಿದಾರರ ಸಂಬಂಧ ತಪ್ಪಿಹೋಗುವುದು. ಈ ಸಂಬಂಧದಲ್ಲಿ ಹೇಳಬೇಕಾದ ವಿಚಾರ ಬಹಳವಿದೆ. ಹೆಚ್ಚಾಗಿ ಹೇಳುವುದಿಲ್ಲ. ಸೆಕ್ಷನ್ 47ರಲ್ಲಿ ಡಿಸ್‌ಕ್ರಿಮಿನೇಷನ್ ಕಾಣುತ್ತಿದೆ. ದೊಡ್ಡ ಹಿಡುವಳಿದಾರರಿಗೆ ಹತ್ತರಷ್ಟು, 15ರಷ್ಟು ಪರಿಹಾರ ಕೊಡಬೇಕು ಎಂದು ಸೂಚಿಸಲಾಗಿದೆ. ಆದರೆ ಸಣ್ಣ ಹಿಡುವಳಿದಾರರಿಗೆ 20 ಪಾಲು ಕೊಡಬೇಕಾಗುತ್ತದೆ. ಈ ಡಿಸ್‌ಕ್ರಿಮಿನೇಷನ್ ಇರಬಾರದೆಂಬುದು ನನ್ನ ಅಭಿಪ್ರಾಯ. ಎಲ್ಲರಿಗೂ ಪರಿಹಾರ ಒಂದೇ ರೀತಿ ಇರಬೇಕು, ವ್ಯತ್ಯಾಸವಿರಬಾರದು.

ಸೆಕ್ಷನ್ 48ರಲ್ಲಿ ಟ್ರಿಬ್ಯೂನಲ್ ವಿಚಾರವಿದೆ. ಇದು ಅತ್ಯಗತ್ಯವಾಗಿದೆ, ಇದು ಅರ್ಹವಾದ ಕಾರ್ಯ ಇಲ್ಲಿ ಅಸಿಸ್ಟೆಂಟ್ ಕಮೀಷನರ ನೇತೃತ್ವದಲ್ಲಿ ಒಂದು ತೀರ್ಮಾನಕ್ಕೆ ಬರಲು ಅವಕಾಶವಿದೆ. ಆದರೆ ವಕೀಲರು ಪ್ರವೇಶ ಮಾಡಲು ಅವಕಾಶವಿಲ್ಲ, ಗೇಣಿದಾರರ ಪರವಾಗಿ ವಕೀಲರು ಬರಲು ಅವಕಾಶವಿಲ್ಲದಿರುವುದರಿಂದ ತೊಂದರೆಯಾಗಬಹುದು. ರೈತರು ಟ್ರಿಬ್ಯೂನಲ್ ಮುಂದೆ ವಿವರಿಸಿ ನ್ಯಾಯ ದೊರಕಿಸಿಕೊಳ್ಳಲು ಅಸಾಧ್ಯವಾಗಬಹುದು. ಆದುದರಿಂದ ವಕೀಲರನ್ನು ಕರೆದುಕೊಂಡು ಬರಲು ಅವಕಾಶ ಕೊಡುವುದು ಕ್ಷೇಮ ಎಂಬುದು ನನ್ನ ಅಭಿಪ್ರಾಯ. ಅಲ್ಲದೆ ಟ್ರಿಬ್ಯೂನಲ್ ತೀರ್ಮಾನ ಸರಿಯಾಗಿಲ್ಲವೆಂದು ಕಂಡುಬಂದಾಗ ಅಪೀಲು ಮಾಡಲು ಅವಕಾಶವಿಲ್ಲ. ಅದೇ ಬೇರೆ ಸಂದರ್ಭಗಳಲ್ಲಿ ಅಪೀಲಿಗೆ ಅವಕಾಶವಿದೆ. ಇದರಿಂದಬಹ

ಬಹಳಷ್ಟು ಅನ್ಯಾಯವಾಗಬಹುದು. ಯಾವುದೇ ಕಾರಣದಿಂದ ಟ್ರಿಬ್ಯೂನಲ್ ತಪ್ಪುಮಾಡಿದರೆ, ತೀರ್ಮಾನ ಕೊಡುವುದರಲ್ಲಿ ಅನ್ಯಾಯವಾಗಿದ್ದರೆ ಅದನ್ನು ಬದಲಾಯಿಸಲು ಪ್ರತಿಯೊಬ್ಬ ನಾಗರೀಕನಿಗೂ ಅವಕಾಶವಿರಬೇಕು. ಬೇಸಾಯಗಾರರು ಅಥವಾ ಒಕ್ಕಲುತನದವರಿಗೆ ಈ ಅವಕಾಶವಿರಬೇಕು, ಇದನ್ನು ಒದಗಿಸಬೇಕು.

ಸೆಕ್ಷನ್ 51. ಪರಿಹಾರ 2 ಸಾವಿರ ರೂಪಾಯಿ ಒಳಗಿದ್ದರೆ ನಗದಾಗಿ ಕೊಡುವರು. ಅದಕ್ಕಿಂತ ಹೆಚ್ಚಾಗಿದ್ದರೆ ಕಂತಿನ ರೂಪದಲ್ಲಿ ಶೇಕಡ ನಾಲ್ಕೂವರೆ ಬಡ್ಡಿ ಜೊತೆಯಲ್ಲಿ ಕೊಡಬೇಕೆಂದು ಸೂಚನೆ ಇದೆ ಇದು ತಪ್ಪು ಎಂದುಬು ನನ್ನ ಭಾವನೆ. ಈ ದಿವಸ 2 ಸಾವಿರ ರೂಪಾಯಿ ಕೊಟ್ಟರೆ ಒಂದು ಸಣ್ಣ ಕುಟುಂಬಕ್ಕೆ ಸಹ ಅನುಕೂಲವಾಗುವುದಿಲ್ಲ. 10 ಸಾವಿರ ರೂಪಾಯಿ ಮೌಲ್ಯದ ಆಸ್ತಿಗೆ 2 ಸಾವಿರ ರೂಪಾಯಿ ಒಂದು ಸಲ ಕೊಟ್ಟು ಉಳಿದುದನ್ನು ಕಂತಿನ ರೂಪದಲ್ಲಿ ಕೊಡುವುದಾದರೆ ಜೀವನ ಮಾಡುವುದು ಕಷ್ಟವಾಗಬಹುದು. ಒಂದು ಸಣ್ಣ ಬೀಡಿ ಅಂಗಡಿ ಇಡಬೇಕಾದರೂ 4—5 ಸಾವಿರ ರೂಪಾಯಿ ಬೇಕು. ಆದುದರಿಂದ 2 ಸಾವಿರ ರೂಪಾಯಿಗೆ ಬದಲಾಗಿ ಕಡೇ ಪಕ್ಷ 5 ಸಾವಿರ ರೂಪಾಯಿಗಳವರೆಗಾದರೂ ನಗದಾಗಿ ಪರಿಹಾರ ಕೊಡುವುದಕ್ಕೆ ಅವಕಾಶ ಮಾಡಬೇಕು. ಉಳಿದ ಮೊಬಲಗನ್ನು ಶೇಕಡ ಆರೂವರೆ ಬಡ್ಡಿಯಾದರೂ ಗೊತ್ತುಮಾಡಿ ಕಂತುಗಳಲ್ಲಿ ಕೊಡಲು ಅವಕಾಶ ಮಾಡಬೇಕು. ಕಾರಣ ಇಂದು ಎಲ್ಲಾ ಕೋ-ಆಪರೇಟಿವ್ ಸೊಸೈಟಿಗಳು, ಷೆಡ್ಯೂಲ್ಡ್ ಬ್ಯಾಂಕುಗಳು ಮುಂತಾದುವುಗಳಲ್ಲಿ ಲೇವಾದೇವಿ ಮಾಡುವಾಗ ಶೇಕಡ ಆರೂವರೆಯಿಂದ ಹನ್ನೆರಡೂವರೆಯವರೆಗೆ ಬಡ್ಡಿ ಇರುವಾಗ ಸಣ್ಣ ಹಿಡುವಳಿದಾರರಿಗೆ ಶೇಕಡ ನಾಲ್ಕೂವರೆ ಬಡ್ಡಿ ಕೊಡುವುದು ಸರಿಯಲ್ಲ. ಇದನ್ನು ಆರೂವರೆಗಾದರೂ ಹೆಚ್ಚಿಸಬೇಕು. ಇದರ ಜೊತೆಗೆ ಒಟ್ಟಿಗೆ ಕೊಟ್ಟು ಉಳಿದ ಪರಿಹಾರವನ್ನು ಕಂತು ರೂಪದಲ್ಲಿ ಕೊಡುವುದಕ್ಕೆ ಬದಲಾಗಿ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನ ಷೇರು ರೂಪದಲ್ಲಿ ಕೊಡಬೇಕು. ಸಾಕಷ್ಟು ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್ ಇವೆ. ಅವುಗಳಲ್ಲಿ ಷೇರು ಕೊಟರೆ ಜೀವನಕ್ಕೆ ಅನುಕೂಲವಾಗಬಹುದು. ಆದುದರಿಂದ ಕ್ಯಾಷ್‌ಗೆ ಬದಲಾಗಿ ಷೇರು ಕೊಡಬೇಕೆಂದು ಸೂಚಿಸುತ್ತೇನೆ.

ಸೆಕ್ಷನ್ 63. ಇದಕ್ಕೂ ಮತ್ತು ಫ್ಯಾಮಿಲಿ ಡೆಫನಿಷನ್ನಿಗೂ ಹೊಂದಾಣಿಕೆಯಿದೆ. ಪ್ರೋಗ್ರೆಸಿವ್ ಅಥವ ರ್ಯಾಡಿಕಲ್ ರಿಫಾರಮ್ಸ್ ಮಾಡಿರುವ ಮಸೂದೆ ಇದು. ಆದರೆ ಮುಖ್ಯ ಉದ್ದೇಶಕ್ಕೆ ಧಕ್ಕೆ ಬಂದಿದೆ. ಕಾರಣ ಡೆಫನಿಷನ್ ಪ್ರಕಾರ ಮೈನರ್ ಮಕ್ಕಳನ್ನು ಬಿಟ್ಟು ಮೇಜರ್ ಮಕ್ಕಳಿದ್ದರೆ ಅವರಿಗೆ ಒಂದು ಸೀಲಿಂಗ್ ಇಟ್ಟುಕೊಳ್ಳಲು ಅವಕಾಶವಿದೆ. ಹಾಗಿರುವಾಗ ಒಂದು ದೊಡ್ಡ ಕುಟುಂಬದಲ್ಲಿ ಇಬ್ಬರು ಅಥವ ಮೂರು ಜನ ಮೇಜರ್ ಮಕ್ಕಳಿದ್ದರೆ ಪ್ರತಿಯೊಬ್ಬರಿಗೂ ಒಂದೊಂದು ಸೀಲಿಂಗ್ ಸಿಕ್ಕುವುದರಿಂದ ಸೀಲಿಂಗ್ ಕಡಮೆಮಾಡಬೇಕು ಎಂದಿರುವ ಉದ್ದೇಶ ಸಾಧಿಸಿದಂತಾಗುವುದಿಲ್ಲ, ಉದ್ದೇಶಕ್ಕೆ ವಿರುದ್ಧವಾಗಿ ಡೆಫನಿಷನ್ ಇರುವುದರಿಂದ ಹಿಡುವಳಿ ಮಿತಿ ಹೆಚ್ಚಾಗಲು ಅವಕಾಶವಿದೆ ಎಂಬುದು ನನ್ನ ಭಾವನೆ.

ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್‌ನಲ್ಲೂ ಕೂಡ ಒಂದು ತಾರತಮ್ಯವಿರುವಂತಿದೆ. ಕಾರಣ ಇಷ್ಟೆ. ಷೆಡ್ಯೂಲನು, ನೋಡಿದಾಗ 97 ತಾಲ್ಲೂಕುಗಳು ಕ್ಷಾಮ ಪ್ರದೇಶ ಎಂಬ ಡಿಕ್ಲರೇಷನ್ ಇದೆ. ಇದು ಅರ್ಥವಾಗುವುದಿಲ್ಲ. ಸುಮಾರು 160 ತಾಲ್ಲೂಕುಗಳಿರುವುದರಲ್ಲಿ 97ನ್ನು ಹೊರಪಡಿಸಿದರೆ ಉಳಿದಿರುವುದಕ್ಕೆ ಕಷ್ಟವಾಗುವುದು. ಎಲ್ಲಾ ತಾಲ್ಲೂಕುಗಳಲ್ಲೂ ಕೆಲವು ಸಂದರ್ಭಗಳಲ್ಲಿ ಬರಗಾಲ ಬರುವುದು, ನೆರೆ ಹಾವಳಿಯಿಂದ ತೊಂದರೆಯಾಗುವುದು, ಇಡೀ ರಾಜ್ಯದಲ್ಲಿ ಬರಗಾಲ ಪ್ರದೇಶವಿರಬಹುದು. ಆದುದರಿಂದ 97 ತಾಲ್ಲೂಕುಗಳಿಗೆ ರಿಯಾಯಿತಿ ತೋರಿಸಿರುವುದು ಸಮಂಜಸವಲ್ಲ. ಹೆಚ್ಚು ಕ್ಷಾಮ ಪೀಡಿತ ಪ್ರದೇಶಗಳಿಗೆ ಮಾತ್ರ ವಿನಾಯಿತಿ ತೋರಿಸಬೇಕೇ ಹೊರತು ಎಲ್ಲಾ ತಾಲ್ಲೂಕುಗಳಲ್ಲೂ ಕ್ಷಾಮವಿದೆ ಎಂದು ಅದಕ್ಕೇ ಬೇರೆ ವ್ಯವಸ್ಥೆ ಮಾಡಬಾರದು.

6-00 P.M.

Section 63 (9) " Notwithstanding anything in the preceding sub-section, if any person has,

(i) after the 18th November 1961 and before the 2nd October 1965', or

(ii) after the 24th January 1971. "ಇದು ನನಗೆ ಅರ್ಥವಾಗುವುದಿಲ್ಲ. ಹಿಂದಿನ ಮೈಸೂರಲ್ಲಿ 1965ರ ನಂತರದ ಪರಾಧೀನಗಳು ಒಳಗಾಗಲಿಲ್ಲ, ಅಲ್ಲದೆ ಪರಾಧೀನವಾಗಿದ್ದರೂ, ಅದೆಲ್ಲಾ ಪರಾಧೀನದ ಭೂಮಿಯೆಂದು ಪರಿಗಣನೆಗೆ ತೆಗೆದುಕೊಂಡು ವಿಚಾರಮಾಡುವಂಥ ಅವಕಾಶ ಇದರಲ್ಲಿದೆ. 1965ರಿಂದ 1971ರವರೆಗೆ ನಂತರ ಪರಾಧೀನಗಳಿಗೆ ಮಾತ್ರ ಪರಿಮಿತಿಯೊಳಗೆ ಪರಾಧೀನವಾದಂಥ ವಿಸ್ತೀರ್ಣ ಏನು ಇದೆ, ಅದನ್ನು ವಿಚಾರ ಮಾಡುವಂಥ ಒಂದು ಅವಕಾಶವನ್ನು, ನಾವು ಇದರಲ್ಲಿ ಕಾಣುತ್ತಿದ್ದೇವೆ.

1961ರಿಂದ 1965ರ ವರೆಗಿನ ಪರಾಧೀನಗಳನ್ನು ನಾವು ವಿಹಿತಪಡಿಸಲಿಕ್ಕೆ ಕಾರಣವಾಗಿ ಈ ಸಮಸ್ಯೆ ಬರಲಿಲ್ಲ. 1961ರಿಂದ 1965ರಲ್ಲಿ ಈ ಸಂದರ್ಭದಲ್ಲಿ ಪರಾಧೀನ ಮಾಡುವುದಕ್ಕೆ, ಸೆಕ್ಷನ್ 63(8)ರಲ್ಲಿ ಇದು ಮಿತಿಯೊಳಗೆ ಇದ್ದರೆ, ಸಂಪೂರ್ಣ ಸೀಲಿಂಗ್ ಮಿತಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇದೆ. 1961ರ ಹಿಂದೆ ಪರಾಧೀನ ಮಾಡಿದ್ದರೆ ಪರಾಧೀನ ಮಾಡಿದ ಭೂಮಿಯನ್ನು, ಅಂಥವರಿಗೆ ಸೀಲಿಂಗ್ ಮಿತಿಯನ್ನು ವಜಾಮಾಡುವಂಥ ಅವಕಾಶವನ್ನು ಸೆಲೆಕ್ಟ್ ಕಮಿಟಿಯವರ ರಿಪೋರ್ಟಿನಲ್ಲಿ ಕಾಣುತ್ತೇವೆ. ಕಾರಣ ಏನು ಅರ್ಥವಾಗುವುದಿಲ್ಲ. 1961ರ ನಂತರ ಎಲ್ಲಾ ಪರಾಧೀನಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. 1971ರ ನಂತರ ಆದು ಪರಾಧೀನಗಳನ್ನು ಮಾತ್ರ ಇಂಥ ಸಂದರ್ಭಗಳಲ್ಲಿ ಸೀಲಿಂಗನ ಮಿತಿಯನ್ನು ನಿರ್ದಿಷ್ಟವಾಗಿ ಇದರಲ್ಲಿ ಹಾಕಬೇಕು ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಸೆಕ್ಷನ್ 66ರಲ್ಲಿ ಒಂದು ಅನುಮಾನ ಇದೆ.

"66. *Filing of declaration of holding.*—(1) (*a*) Every person who on the date of the commencement of the Amendment Act holds ten acres of garden or irrigated land or twenty acres of rainfed wet land......" ಗಾರ್ಡನ್ ಎಂದು ಹೇಳುವ ಶಬ್ದ ಈಗ ಇದರಲ್ಲಿ ಸೇರಿಸಲ್ಪಟ್ಟಿದೆ. ಇದು ಅರ್ಥವಾಗುತ್ತಾ ಇಲ್ಲ. ಗಾರ್ಡನ್ ಇದ್ದರೆ 25 ಎಕರೆ ಮಿತಿಯವರೆಗೂ ಅವಕಾಶವಿದೆ. ಗಾರ್ಡನ್ ಎಂದು ಹೇಳುವಂಥಾದ್ದು ಅದನ್ನು ಸೇರಿಸುವ ಅವಕಾಶ ಏನು ಇದೆ ಎಂದು ತಿಳಿದುಬಂದಿಲ್ಲ. One acre of garden or irrigated land is equal to two acres of rainfed wet land : four acres of dry land.

ಎಂದು ಕ್ಲಾಸಿಫೈ ಮಾಡಿದ್ದಾರೆ. ಹೀಗೆ ಇರುವಾಗ, ನಮ್ಮ ಜಿಲ್ಲೆಯಲ್ಲಿರುವ ಗಾರ್ಡನ್ ಲ್ಯಾಂಡ್ 25 ಎಕರೆ 2.5 ಯುನಿಟ್ಸ್‌ಗೆ ತತ್ಸಮ ಎಂದು ನನ್ನ ಭಾವನೆ ಇದೆ. ಗಾರ್ಡನ್ ಲ್ಯಾಂಡ್ ಆರ್ ಇರಿಗೇಟೇಡ್ ಲ್ಯಾಂಡ್ ಎಂದು ಇರಕೂಡದು. ಈ ಶಬ್ದದ ಅವಶ್ಯಕತೆ ಏನು ಎಂದು ಅರ್ಥವಾಗುವುದಿಲ್ಲ. ಇದನ್ನು ಪರಿಶೀಲಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ.

"Section 68 : Vesting of land surrendered by owner.—Where the land surrendered under Section 67 is by an owner (other than a limited owner) the State Government may take over such land on the publication of the notification under Section 73 and such land shall thereupon vest in the State Government free from all encumbrances." ಸಾಲರಹಿತ ಸರ್ಕಾರಕ್ಕೆ ಸೇರಬೇಕು ಎನ್ನುವ ಶಬ್ದವನ್ನು ತಾವು ಹೇಳಿದ್ದೀರಿ ಸಾಲದ ಗತಿ ಏನು ? ಒಬ್ಬ ಬೇಸಾಯಗಾರ 20—30 ಎಕರೆಯನ್ನು ಸಾಗುಮಾಡುವವನು ಇದ್ದರೆ, ಅವನಿಗೆ ಸೀಲಿಂಗ್ ಮಿತಿಯನ್ನು ಹಾಕಿ ಹೆಚ್ಚಿನ ಭೂಮಿಯನ್ನು ಸರ್ಕಾರಕ್ಕೆ ಕೊಡುವಾಗ ಸಾಲರಹಿತವಾಗಿ ಕೊಡಬೇಕು. ಹೆಚ್ಚುವರಿ ಭೂಮಿಯನ್ನು ಸಾಲ ವಿಹಿತವಾಗಿ ಕೊಡಬೇಕೇ ಎನ್ನುವುದನ್ನು ನೋಡಬೇಕು. ಹೆಚ್ಚುವರಿ ಭೂಮಿಯನ್ನು ಸರ್ಕಾರಕ್ಕೆ ಕೊಟ್ಟು ಬಿಡುವುದರಿಂದ, ಅವನ ಸಾಲವನ್ನೂ ಕೂಡ ಸರ್ಕಾರ ವಹಿಸಿಕೊಂಡು ಪರಿಹಾರ ಕೊಡಬೇಕು. ಸಾಲ ವಿಹಿತ ಸರ್ಕಾರದ ಸ್ವಾಧೀನಕ್ಕೆ ಹೆಚ್ಚುವರಿ ಭೂಮಿ ಹೋಗುವುದು ಅಷ್ಟೊಂದು ಸಮಂಜಸವಲ್ಲ ಎಂದು ನನ್ನ ಭಾವನೆ.

Madam SPEAKER.—The House now stands adjourned to meet again tomorrow at 1 P.M.

(The House adjourned at Six of the clock to meet again at one of the clock on Tuesday the 22nd May 1973.